**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================

**ಅಭ್ಯಾಸ ಪತ್ರಿಕೆ–08**

*******************************************************************************

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಅದರ ಕ್ರಮಾಕ್ಷರಗಳೊಂದಿಗೆ ಸಂಪೂರ್ಣ ಉತ್ತರವನ್ನು ಬರೆಯಿರಿ. 8x1=8**

1. ಮೈಸೂರು ರಾಜ್ಯ ಅಸ್ತಿತ್ವಕ್ಕೆ ಅಸ್ತಿತ್ವಕ್ಕೆ ಬಂದದ್ದು
   A) ಜನವರಿ 26 1950 B) ನವೆಂಬರ್ 1 1956
   C) ನವೆಂಬರ್ 1 1950 D) ನವೆಂಬರ್ 1 1973
2. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರು
   A) ಲಾರ್ಡ್ ಡಾಲ್‌ಹೌಸಿ B) ಲಾರ್ಡ್ ವೆಲ್ಲೆಸ್ಲಿ
   C) ಲಾರ್ಡ್ ಕಾರ್ನ್‌ವಾಲೀಸ್ D) ಲಾರ್ಡ್ ವಾರನ್ ಹೇಸ್ಟಿಂಗ್ಸ್
3. ವಿಶ್ವಸಂಸ್ಥೆಯ ಸಚಿವ ಸಂಪುಟ
   A) ಸಾಮಾನ್ಯ ಸಭೆ B) ಭದ್ರತಾ ಸಮಿತಿ
   C) ಸಚಿವಾಲಯ D) ದತ್ತಿ ಸಮಿತಿ
4. ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದವರು
   A) ಡಾ.ಬಿ.ಆರ್. ಅಂಬೇಡ್ಕರ್ B) ಸ್ವಾಮಿ ವಿವೇಕಾನಂದ
   C) ಜ್ಯೋತಿಭಾ ಫುಲೆ D) ಮಹಾತ್ಮ ಗಾಂಧೀಜಿ
5. ನರ್ಮದಾ ಆಂದೋಲನದ ನೇತೃತ್ವ ವಹಿಸಿದ್ದವರು
   A) ಡಾ.ಶಿವರಾಮ ಕಾರಂತ B) ಮೇಧಾ ಪಾಟ್ಕರ್
   C) ಸುಂದರ್ ಲಾಲ್ ಬಹುಗುಣ D) ಚಂಡಿ ಪ್ರಸಾದ್ ಭಟ್
6. ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯಾಗಲು ಪ್ರಮುಖ ಕಾರಣ
   A) ಮಾಹಿತಿ ತಂತ್ರಜ್ಞಾನದ ಬೆಳವಣಿಗೆ B) ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆ
   C) ಜೈವಿಕ ತಂತ್ರಜ್ಞಾನದ ಬೆಳವಣಿಗೆ D) ಕೂಲಿ ಕಾರ್ಮಿಕರ ಲಭ್ಯತೆ
7. ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದ ಸಂವಿಧಾನದ ತಿದ್ದುಪಡಿ
   A) 73 B) 89
   C) 45 D) 86
8. ವ್ಯಾಪಾರಿಗಳು,ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳಿಗೆ ಸೂಕ್ತವಾದ ಬ್ಯಾಂಕ್ ಖಾತೆ
   A) ಉಳಿತಾಯ ಖಾತೆ B) ಚಾಲ್ತಿ ಖಾತೆ
   C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಮೊದಲನೆಯ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು?
10. ಹೈದರಾಬಾದ್ ನಿಜಾಮನು ಭಾರತದ ಒಕ್ಕೂಟದೊಂದಿಗೆ ಸೇರಲು ಒಪ್ಪಲಿಲ್ಲ.ಏಕೆ?
11. 1966ರಲ್ಲಿ ತಾಷ್ಕೆಂಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮದ್ಯ ಒಪ್ಪಂದಕ್ಕೆ ಸಹಕರಿಸಿದ ದೇಶ ಯಾವುದು?
12. ಪೂರ್ವಗ್ರಹ ಎಂದರೇನು?
13. ಮಳೆಕೊಯ್ಲು ಎಂದರೇನು?
14. ಪೂರ್ವ ಕರಾವಳಿಗಿಂತ ಪಶ್ಚಿಮ ಕರಾವಳಿಯಲ್ಲಿ ಕಡಲಕೊರೆತ ಹೆಚ್ಚು. ಏಕೆ?
15. ಭಾರತದ ಹಸಿರು ಕ್ರಾಂತಿಯ ಪಿತಾಮಹ ಯಾರು?
16. ಭಾರತೀಯ ರಿಸರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕ್ ಎಂದು ಏಕೆ ಕರೆಯುತ್ತಾರೆ.?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ಶ್ರೀ ನಾರಾಯಣಗುರುರವರ ಸುಧಾರಣೆಗಳನ್ನು ತಿಳಿಸಿ.
18. ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಎರಡನೇ ಮಹಾಯುದ್ಧದಲ್ಲಿ ಹೇಗೆ ಉಪಯೋಗಿಸಿಕೊಂಡಿತು?
19. ಭಾರತದಲ್ಲಿ ಕಂಡು ಬರುವ ಮಣ್ಣಿನ ವಿಧಗಳನ್ನು ಹೆಸರಿಸಿ.
20. ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ. ಹೇಗೆ ?
21. ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳ ನಡುವಿನ ವ್ಯತ್ಯಾಸಗಳೇನು?
22. ಗ್ರಾಹಕರ ಹಕ್ಕುಗಳನ್ನು ಪಟ್ಟಿಮಾಡಿ.
23. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

    **ಅಥವಾ**

    ಭಾರತ ಮತ್ತು ಚೀನಾ ಮಧ್ಯೆ ಬಾಂಧವ್ಯ ಹದಗೆಡಲು ಕಾರಣಗಳಾವುವು?
24. ಕರ್ನಾಟಕದಲ್ಲಿ ನಡೆದ ಅಪ್ಪಿಕೋ ಚಳವಳಿಯನ್ನು ವಿವರಿಸಿ.

    **ಅಥವಾ**

    ವರದಕ್ಷಿಣೆಯ ದುಷ್ಪರಿಣಾಮಗಳನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.** **9x3=27**

25. ಆರಂಭಿಕವಾಗಿ ಇಂಗ್ಲಿಷ್‌ರು ಭಾರತದಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಹೇಗೆ ವಿಸ್ತರಿಸಿದರು ?

    **ಅಥವಾ**

    ಆಂಗ್ಲೋ ಮರಾಠ ಯುದ್ಧಗಳು ಬ್ರಿಟಿಷರ ಪ್ರಾಬಲ್ಯಕ್ಕೆ ಹೇಗೆ ಕಾರಣವಾದವು?
26. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.
27. ಆರ್ಥಿಕ ಅಂಶಗಳಲ್ಲಾದ ಬದಲಾವಣೆಗಳು 1857ರ ದಂಗೆಗೆ ಪ್ರಮುಖ ಕಾರಣವಾದವು.ಹೇಗೆ?
28. ಕಾಮನ್‌ವೆಲ್ತ್ ರಾಷ್ಟ್ರಸಂಘದ ಉದ್ದೇಶಗಳನ್ನು ತಿಳಿಸಿ
29. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ
30. ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿ.ಐ.ಎಸ್) ಉಪಯೋಗಗಳನ್ನು ವಿವರಿಸಿ.
31. ಭೂ ಬಳಕೆಯು ವಿವಿಧ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ.ಹೇಗೆ?

    **ಅಥವಾ**

    ಚಂಡಮಾರುತದ ನಿರ್ವಹಣೆಗೆ ಹಲವು ಮುನ್ನೆಚ್ಚರಿಕೆಯ ಕ್ರಮಗಳು ಅತ್ಯವಶ್ಯಕ.ಹೇಗೆ?

32. ವಿಕೇಂದ್ರೀಕರಣ ಎಂದರೇನು? ವಿಕೇಂದ್ರೀಕರಣ ವ್ಯವಸ್ಥೆಯನ್ನು ಹೇಗೆ ಜಾರಿಗೊಳಿಸಲಾಗಿದೆ?

**ಅಥವಾ**

ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

33. ಬ್ಯಾಂಕುಗಳು ಗ್ರಾಹಕರಿಗೆ ಹಲವು ಸೇವೆಗಳನ್ನು ಒದಗಿಸುತ್ತವೆ. ಹೇಗೆ?

**ಅಥವಾ**

ದೇಶದ ಆರ್ಥಿಕ ಕ್ಷೇತ್ರದ ಅಭಿವೃದ್ಧಿಯಲ್ಲಿ ಉದ್ಯಮಿಯು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾನೆ. ಹೇಗೆ?

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ. 4x4=16**

34. ಸಾಮಾಜಿಕ ಸಮಾನತೆಯನ್ನು ಸಾಧಿಸುವಲ್ಲಿ ಅಂಬೇಡ್ಕರ್‌ರವರ ಪಾತ್ರವನ್ನು ವಿವರಿಸಿ.

ಅಥವಾ

ಅಸಹಕಾರ ಚಳವಳಿಯ ಸಂದರ್ಭದಲ್ಲಿ ನಡೆದ ಘಟನೆಗಳನ್ನು ವಿವರಿಸಿ.

35. ಬ್ರಿಟಿಷ್ ಶಿಕ್ಷಣ ವ್ಯವಸ್ಥೆಯು ಅಭಿವೃದ್ಧಿಶೀಲ ಆಲೋಚನೆಗಳನ್ನೊಳಗೊಂಡ ಒಂದು ಹೊಸ ತಲೆಮಾರನ್ನು ಸೃಷ್ಟಿಸಿತು.

ಸಮರ್ಥಿಸಿ.

36. ಮಹಿಳೆಯರ ಸ್ಥಾನಮಾನವನ್ನು ಉತ್ತಮ ಪಡಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ.ವಿಶ್ಲೇಷಿಸಿ.

37. ಅರಣ್ಯ ಸಂರಕ್ಷಣೆಗೆ ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸಿ.

**VI. 38.ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. 1+4=5**

a. ಕೋರಮಂಡಲ ತೀರ

b. ಕೋಸಿ ಯೋಜನೆ

c. ರಾಣಾ ಪ್ರತಾಪ ಸಾಗರ

d. ಬಾಂಬೆ ಹೈ

***********************************

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

===========================================================================

## ಅಭ್ಯಾಸ ಪತ್ರಿಕೆ–9

***************************************************************************

**I. ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನುರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**

**8X1=8**

1. ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು
A) ಫಜಲ್ ಅಲಿ B) ಕೆ.ಎಂ.ಫಣಿಕ್ಕರ್
C) ಹೆಚ್.ಎನ್.ಕುಂಜ್ರು D) ಎಮ್.ಎಸ್ ಸ್ವಾಮಿನಾಥನ್

2. ಕದನ ಸೌಹಾರ್ದತ್ರಯ ಮೈತ್ರಿಕೂಟವನ್ನು ರಚಿಸಿಕೊಂಡ ದೇಶಗಳು
A) ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ
B) ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿ
C) ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ರಷ್ಯಾ
D) ಜರ್ಮನಿ, ಆಸ್ಟ್ರಿಯಾ–ಹಂಗೇರಿ ಮತ್ತು ಇಟಲಿ

3. ಡಾ. ಡಿ.ಎಂ.ನಂಜುಂಡಪ್ಪ ಸಮಿತಿಯ ಉದ್ದೇಶ
A) ಹಿಂದುಳಿದ ವರ್ಗಗಳಿಗೆ ಉದ್ಯೋಗ ನೀಡುವುದು
B) ಕೋಮುವಾದದ ನಿವಾರಣೆ
C) ಪ್ರಾದೇಶಿಕ ಅಸಮತೋಲನದ ನಿವಾರಣೆ
D) ಬಡವರಿಗೆ ನಿವೇಶನ ನೀಡುವುದು

4. ಕೇಂದ್ರ ಸರ್ಕಾರವು 'ಸಮಾನ ವೇತನ ಕಾಯ್ದೆ'ಯನ್ನು ಜಾರಿಗೆ ತಂದ ವರ್ಷ
A) 1975 B) 1976
C) 1977 D) 1978

5. ಭಾರತದಲ್ಲಿ ಪೆಟ್ರೋಲಿಯಮ್‌ನ್ನು ಮೊದಲು ಪತ್ತೆ ಮಾಡಲಾದ ಸ್ಥಳ
A) ಹುಗ್ರಿಜನ್ B) ದಿಗ್ಬಾಯ್
C) ಮೊರಾನ್ D) ನಹರ್‌ಕಟಿಯಾ

6. ಈ ಬಂದರು ಝುವಾರಿ ನದಿ ದಡದಲ್ಲಿ ನಿರ್ಮಾಣವಾಗಿದೆ

A) ಪರದ್ವೀಪ್ B) ಹಾಲ್ಡಿಯಾ

C) ಗೋವಾ D) ಮುಂಬೈ

7. ಉದ್ಯಮಿ ಎಂಬ ಪದದ ಫ್ರೆಂಚ್ ಮೂಲ ಪದ

A) ಎಂಟ್ರ ಪ್ರೆಂಡೆ B) ಎಂಟರ್ ಪ್ರೈಸಸ್

C) ಎಂಟರ್ ಪ್ರೆಸ್ D) ಎಂಟರ್ ಟೈನರ್

8. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯು ಪ್ರಾಮುಖ್ಯತೆ ನೀಡಿದ್ದು

A) ಕೃಷಿ ಬೆಳವಣಿಗೆಗೆ B) ಕೈಗಾರಿಕಾ ಅಭಿವೃದ್ಧಿಗೆ

C) ಎಲ್ಲರನ್ನು ಒಳಗೊಂಡ ಬೆಳವಣಿಗೆಗೆ D) ಸಂಪರ್ಕದ ಬೆಳವಣಿಗೆಗೆ

**II. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ. 8X1=8**

9. ಜುನಾಗಢ್ ನವಾಬನ ವಿರುದ್ಧ ಪ್ರಜೆಗಳು ಏಕೆ ಬೀದಿಗಿಳಿದರು?
10. ತೀನ್ ಮೂರ್ತಿ ಚೌಕವನ್ನು ತೀನ್ ಮೂರ್ತಿ ಹೈಫಾ ಚೌಕ ಎಂದು ಏಕೆ ಮರುನಾಮಕರಣ ಮಾಡಲಾಯಿತು?
11. ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದನ್ನು ಮಾನ್ಯತೆ ಮಾಡಿದ ಪ್ರಪ್ರಥಮ ದೇಶ ಯಾವುದು?
12. 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮವನ್ನು ಏಕೆ ಜಾರಿಗೆ ತರಲಾಯಿತು?
13. 'ಹೆಣ್ಣು ಭ್ರೂಣಹತ್ಯೆ' ಎಂದರೇನು?
14. ಜಲಾನಯನ ಪ್ರದೇಶಗಳಲ್ಲಿ ಅರಣ್ಯಗಳನ್ನು ಏಕೆ ಬೆಳೆಸಬೇಕು?
15. ಬಂಡವಾಳ ಆದಾಯ ಎಂದರೇನು?
16. ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಬೆಳವಣಿಗೆ ಯಾವುದು?

**III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. 8X2=16**

17.ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯ ಪುನರುಜ್ಜೀವನ' ಕಾಲವೆಂದು ಕರೆಯಲಾಗಿದೆ. ಏಕೆ?
18. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳೇನು?
19. ಜನಸಂಖ್ಯಾ ಸಮಸ್ಯೆಯನ್ನು ಪರಿಹರಿಸುವ ಮಾರ್ಗಗಳನ್ನು ಪಟ್ಟಿ ಮಾಡಿ.

ಅಥವಾ

ಉಗ್ರಗಾಮಿತ್ವವು ಪ್ರೇರಿತವಾಗಿರುವ ವಿಚಾರಧಾರೆಗಳನ್ನು ಪಟ್ಟಿ ಮಾಡಿ.

20. ಪೂರ್ವಾಗ್ರಹದ ಸ್ವರೂಪಗಳು ಯಾವುವು?

ಅಥವಾ

ದೊಂಬಿಗೆ ಕಾರಣಗಳು ಯಾವುವು?

21. ನೈಋತ್ಯ ಮಾನ್ಸೂನ್ ಮಾರುತಗಳು ಹೇಗೆ ಮಳೆಯನ್ನು ಸುರಿಸುತ್ತವೆ?
22. ಮಳೆ ನೀರಿನ ಸಂಗ್ರಹಣ ವಿಧಾನಗಳನ್ನು ಹೆಸರಿಸಿ.
23. ವಿಕೇಂದ್ರೀಕರಣದ ಮಹತ್ವವೇನು?
24. ಭಾರತೀಯ ಗ್ರಾಹಕರ ಹಕ್ಕುಗಳನ್ನು ಪಟ್ಟಿ ಮಾಡಿ.

**IV.ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿರಿ. 9X3=27**

25. ಬಕ್ಸಾರ್ ಕದನಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ.

ಅಥವಾ

ಎರಡನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿ.

26. ಹತ್ತನೆಯ ಚಾಮರಾಜೇಂದ್ರ ಒಡೆಯರ್ ಅವರ ಸಾಧನೆಗಳೇನು?
27. ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಾಂತಿಕಾರಿಗಳಲ್ಲಿ ಗಾಡಿಯನ್ ಲಿಯೂ ಪ್ರಮುಖರಾಗಿದ್ದಾರೆ.ವಿವರಿಸಿ
28. ಭದ್ರತಾ ಸಮಿತಿಯ ರಚನೆಯನ್ನು ವಿವರಿಸಿ.
29. ಬಡತನವನ್ನು ಹೋಗಲಾಡಿಸಲು ಕೈಗೊಂಡ ಕ್ರಮಗಳೇನು?
30. ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ
31. ಭಾರತದ ಪ್ರಮುಖ ವನ್ಯ ಜೀವಿಧಾಮಗಳನ್ನು ಹೆಸರಿಸಿ.

ಅಥವಾ

ಭಾರತದಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ.

32. ಗ್ರಾಮೀಣಾಭಿವೃದ್ಧಿಗಾಗಿ ರೂಪಿಸಲಾಗಿರುವ ಯೋಜನೆಗಳನ್ನು ತಿಳಿಸಿ

ಅಥವಾ

ಆಯವ್ಯಯ ಎಂದರೇನು? ಅದರ ವಿಧಗಳನ್ನು ತಿಳಿಸಿ.

33. ಬ್ಯಾಂಕು ಖಾತೆಯನ್ನು ತೆಗೆಯುವ ವಿಧಾನಗಳಾವುವು?

ಅಥವಾ

ಉದ್ಯಮಿಗಳಿಗೆ ಸ್ವಂತ ಉದ್ಯೋಗ ಅವಕಾಶಗಳಾವುವು?

**V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯಗಳು ಅಥವಾ ಅಂಶಗಳಲ್ಲಿ ಉತ್ತರಿಸಿರಿ. 4X4=16**

34. ಮಾರ್ತಾಂಡ ವರ್ಮನು ಡಚ್ಚರನ್ನು ನಿಯಂತ್ರಿಸಿದ ಬಗೆಯನ್ನು ವಿವರಿಸಿ.
35. ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲುಂಟು ಮಾಡಿದ ಪರಿಣಾಮವೇನು?

ಅಥವಾ

ರೈತವಾರಿ ಪದ್ಧತಿಯು ಒಳಗೊಂಡಿದ್ದ ಪ್ರಮುಖಾಂಶಗಳೇನು?

36. ಭ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಹುದು?
37. ಮಣ್ಣಿನ ಸಂರಕ್ಷಣೆ ಎಂದರೇನು? ಅದರ ವಿಧಾನಗಳನ್ನು ಪಟ್ಟಿ ಮಾಡಿರಿ.

**VI. 38. ಭಾರತದ ನಕ್ಷೆ ಬರೆದು ಅದರಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ. 1+4=5**

A) ಕೃಷ್ಣ ನದಿ B) ಕನ್ಯಾ ಕುಮಾರಿ

C) ದಾಮೋದರ ನದಿ ಯೋಜನೆ D) ತಾರಾಪುರ

**************************

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================================

**ಅಭ್ಯಾಸ ಪತ್ರಿಕೆ–10**

*****************************************************************************************

**I. ಪ್ರತಿ ಅಪೂರ್ಣ ಹೇಳಿಕೆಗಳು / ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಸರಿಯಾದ ಉತ್ತರವನ್ನು ಆರಿಸಿ ಮತ್ತು ಅದರ ಕ್ರಮಾಕ್ಷರದೊಂದಿಗೆ ಸಂಪೂರ್ಣ ಉತ್ತರವನ್ನು ಬರೆಯಿರಿ: 8x1=8**

1. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಿದ ವರ್ಷ
ಎ. 1956 ಬಿ. 1953
ಸಿ. 1973 ಡಿ. 1971

2. ಫ್ಯಾಸಿಸ್ಟ್ ಸರ್ವಾಧಿಕಾರಿ
ಎ. ಮುಸೋಲಿನಿ ಬಿ. ಹಿಟ್ಲರ್
ಸಿ. ಸ್ಟಾಲಿನ್ ಡಿ. ರೂಸ್ ವೆಲ್ಟ್

3. ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನು ಅತ್ಯಂತ ಗಾಢವಾಗಿ ಪ್ರೀತಿಸಿ ಅದರ ಬಗ್ಗೆ ಅತಿಯಾದ ಅಭಿಮಾನ ಬೆಳೆಸಿಕೊಂಡರೆ ಅದು
ಎ. ಕೋಮುವಾದ ಬಿ. ಪ್ರಾದೇಶಿಕವಾದ
ಸಿ. ಜನಮಂದೆ ಡಿ. ದೊಂಬಿ

4. ನಾಗರಿಕರಿಗೆ ಸಂರಕ್ಷಣೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಈ ನಾಲ್ಕು ಹಕ್ಕುಗಳನ್ನು ನೀಡುಹವ ವಿದೇಯಕವನ್ನು ಅಂಗೀಕರಿಸಿದವರು.
ಎ. ಅಬ್ರಹಾಂ ಲಿಂಖನ್ ಬಿ. ಜಾನ್ ಎಫ್ ಕೆನಡಿ
ಸಿ. ಎಫ್ ಡಿ ರೂಸ್ ವೆಲ್ಟ್ ಡಿ. ಜಾರ್ಫಸನ್

5. ಸಮುದ್ರ ತಿರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳಸುವುದು ಸೂಕ್ತ, ಕಾರಣ
ಎ. ಭೂಕುಸಿತ ತಡೆಯಲು
ಬಿ. ಪ್ರವಾಹ ನಿಯಂತ್ರಣ
ಸಿ. ಭೂಕಂಪದ ತೀರ್ವತೆ ಕಡಿಮೆ ಮಾಡಲು
ಡಿ. ಕಡಲ ಕೊರೆತವನ್ನು ತಡೆಗಟ್ಟಲು

6. ದುಡಿಯುವ ವಯಸ್ಸು, ಸಾಮರ್ಥ್ಯ, ಅರ್ಹತೆ ಇದ್ದರು ಉದ್ಯೋಗ ಸಿಗದ ಸ್ಥಿತಿ
ಎ. ನಿರುದ್ಯೋಗ ಬಿ. ಅನಕ್ಷರತೆ
ಸಿ. ಬಡತನ ಡಿ. ಶ್ರಮ ವಿಭಾಜನೆ

7. ಭಾರತದಲ್ಲಿ ಅತಿ ಕಡಿಮೆ ಮಳೆ ಬೀಳುವ ಋತುಮಾನ

ಎ. ಬೇಸಿಗೆ ಕಾಲ
ಬಿ. ಮಳೆಗಾಲ
ಸಿ. ಚಳಿಗಾಲ
ಡಿ. ನೈಋತ್ಯ ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ

8. "ಎಲ್ಲರನ್ನು ಒಳಗೊಂಡ ಬೆಳವಣಿಗೆ"ಗೆ ಪ್ರಾಮುಖ್ಯತೆ ನೀಡಿದ ಪಂಚವಾರ್ಷಿಕ ಯೋಜನೆ

ಎ. 1ನೇ ಪಂಚವಾರ್ಷಿಕ ಯೋಜನೆ
ಬಿ. 5ನೇ ಪಂಚವಾರ್ಷಿಕ ಯೋಜನೆ
ಸಿ. 10ನೇ ಪಂಚವಾರ್ಷಿಕ ಯೋಜನೆ
ಡಿ. 11ನೇ ಪಂಚವಾರ್ಷಿಕ ಯೋಜನೆ

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ. 8 x 1 = 8**

9. ಜಪಾನಿನ ಯಾವ ನಗರಗಳ ಮೇಲೆ ಅಮೆರಿಕ ಮೊಟ್ಟ ಮೊದಲ ಅಣುಬಾಂಬನ್ನು ದಾಳಿ ಮಾಡಿತು?

10. ದೆಹಲಿಯ ಪ್ರಸಿದ್ಧ ತೀನ್‌ಮೂರ್ತಿ ಭವನ ಏಕೆ ಸ್ಥಾಪಿಸಲಾಯಿತು?

11. ರೈತವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಜಾರಿಗೊಳಿಸಿದವರು ಯಾರು?

12. 8.3 ಸೆಂ. ಮೀ. ಮಳೆ ಪಡೆಯುವ ಪ್ರದೇಶ ಯಾವುದು?

13. ರಾಷ್ಟ್ರಿಯ ವಿದ್ಯುತ್ ಜಾಲ ಎಂದರೇನು?

14. ಸರ್. ವಿಶ್ವೇವರಯ್ಯನವರನ್ನು ಭರತದ ಆರ್ಥಿಕ ಯೋಜನೆಯ ಪಿತಾಮಹ ಎಂದು ಕರೆಯಲು ಕಾರಣವೇನು?

15. "ಸ್ತ್ರಿ ಶಕ್ತಿ" ಎಂಬ ಕಾರ್ಯಕ್ರಮವನ್ನು ಏಕೆ ಜಾರಿಗೆತರಲಾಗಿದೆ?

16. ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದ ಜಾರಿಗೆ ತಂದಿರುವುದರ ಉದ್ದೇಶವೇನು?

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8 x 2 = 16**

17. ಗೋವಾ ವಿಮೋಚನೆ ಹೇಗಾಯಿತು?

18. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣವೇನು?

19. ಕಡಲ ಪ್ರವಾಹವನ್ನು ಹೇಗೆ ತಡೆಗಟ್ಟಬಹುದು?

ಅಥವಾ

ಅಸ್ಪೃಶ್ಯತೆಯು ಒಂದು ಸಮಾಜಿಕ ಪಿಡುಗು ಹೇಗೆ?

20. ಮಳೆಕೊಯ್ಲು ಇಂದು ಕಡ್ಡಾಯ ಗೊಳಿಸಲಾಗಿದೆ ಏಕೆ?

21. ಗ್ರಾಹಕ ಸಂರಕ್ಷಣೆ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿರಿ.

ಅಥವಾ

ಮಾನವ ಹಕ್ಕುಗಳ ಹೋರಾಟಕ್ಕೆ ಪ್ರೇರಣೆ ನೀಡಿದ ಅಂಶಗಳಾವುವು?

22. ಕಲ್ಲಿದ್ದಲನ್ನು ಬಹುಪಯೋಗಿ ಖನಿಜವೆಂದು ಏಕೆ ಕರೆಯುತ್ತಾರೆ?

23. ನಾಲ್ಕು ಪರಿಸರ ಚಳುವಳಿಗಳನ್ನು ತಿಳಿಸಿ.

24. ಜೀವನಾಧಾರ ಬೇಸಾಯ ಎಂದರೇನು ಅದರ ಎರಡು ವಿಧಗಳನ್ನು ತಿಳಿಸಿ.

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು ವಾಕ್ಯಗಳಲ್ಲಿ ಉತ್ತರಿಸಿ. 9x3=27**

25. ರೌಲತ್ ಕಾಯ್ದೆಯಿಂದ ಉಂಟಾದ ಪರಿಣಾಮಗಳಾವುವು?

26. ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಹೇಗೆ ಎರಡನೆ ಮಹಾ ಯುದ್ಧದಲ್ಲಿ ಉಪಯೋಗಿಸಿಕೊಂಡಿತು.

ಅಥವಾ

ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳಾವುವು.

27. ಭಾರತದ ಹಸಿರು ಕ್ರಾಂತಿಗೆ ಪ್ರೇರಣೆ ನೀಡಿದ ಅಂಶಗಳಾವುವು?

28. ಸಾರ್ವಜನಿಕ ಹಣಕಾಸು ವೈಯಕ್ತಿಕ ಹಣಕಾಸಿಗಿಂತ ಬಿನ್ನವಾಗಿದೆ ಹೇಗೆ?

29. ಆರ್ಥಿಕ ಅಸಮಾನತೆ ಹಿನ್ನೆಲೆಯಲ್ಲಿ ವಿದೇಶಿ ಆರ್ಥಿಕ ಸಹಕಾರ ತೀರ ಅವಶ್ಯಕ ಏಕೆ?

30. ವರದಕ್ಷಿಣೆ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು?

ಅಥವಾ

ಚಂಡಮಾರುತದ ಅಪಾಯವನ್ನು ತಪ್ಪಿಸಿಕೊಳ್ಳಲು ಯಾವ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಿರಿ.

31. ಭಾರತದಲ್ಲಿ ಕಂಡುಬರುವ ಮಣ್ಣಿನ ಪ್ರಕಾರಗಳು ಯಾವುವು?

32. ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?

ಅಥವಾ

ಉದ್ಯಮ ಶೀಲತೆಯ ಗುಣಲಕ್ಷಣಗಳಾವುವು?

33. ಜಿ. ಪಿ. ಎಸ್. ಎಂದರೇನು ಅದರ ಊಪಯೋಗಗಳನ್ನು ತಿಳಿಸಿ.

ಅಥವಾ

ಲಾಭಕೋರತನದಿಂದ ಉತ್ಪಾದಕ ಮತ್ತು ಗ್ರಾಹಕನಿಗೆ ನಷ್ಟವಾಗುತ್ತದೆ ಸಮರ್ಥಿಸಿ.

**V. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. 4x4=16**

34. ಸಹಾಯಕ ಸೈನ್ಯ ಪದ್ದತಿ ಒಳಗೊಂಡಿರುವ ಅಂಶಗಳು ಯಾವುವು?

ಅಥವಾ

ದಂಗೆಯು ನಿರೀಕ್ಷಿತ ಯಶಸ್ಸನ್ನು ಮುಟ್ಟಲಿಲ್ಲ ಕಾರಣಗಳೇನು?

35. ಕಿತ್ತೂರಿನ ಬಂಡಾಯದಲ್ಲಿ ವೀರ ರಾಣಿ ಚನ್ನಮ್ಮಳ ಹೋರಾಟದ ಕ್ರಮವನ್ನು ವಿವರಿಸಿ.

36. ಭಧ್ರತಾ ಸಮಿತಿಯ ರಚನೆ ಮತ್ತು ಕಾರ್ಯಗಳನ್ನು ತಿಳಿಸಿ.

37. ವಿವಿದೋದ್ದೇಶ ನದಿ ಕಣಿವೆ ಯೋಜನೆಗಳ ಉದ್ದೇಶಗಳನ್ನು ತಿಳಿಸಿ.

**VI. 38. ಭಾರತದ ನಕ್ಷೆಯನ್ನು ರಚಿಸಿ ಮತ್ತು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ. 1+4=5**

ಎ. ಗೋವಾ

ಸಿ. ದಾಮೋದರ ನದಿ ಕಣಿವೆ ಯೋಜನೆ

ಬಿ. ನೀಲಗಿರಿ ಬೆಟ್ಟಗಳು

ಡಿ. ಇಂದಿರಾ ಪಾಯಿಂಟ್

************************************

ಉಪನಿರ್ದೇಶಕರು (ಆಡಳಿತ)ರವರ ಕಚೇರಿ
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

================================================================

**ಅಭ್ಯಾಸ ಪತ್ರಿಕೆ–01**

*************************************************************************

**ಮಾದರಿ ಉತ್ತರಗಳು**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. **8x1=8** | |
| 1 | ಸಂವಿಧಾನಕ್ಕೆ 42ನೇ ತಿದ್ದುಪಡಿ ಮೂಲಕ ಸೇರ್ಪಡೆಗೊಂಡ ಅಂಶಗಳು.<br>**D.** ಜಾತ್ಯತೀತ ಮತ್ತು ಸಮಾಜವಾದಿ | 1 |
| 2 | ಶಾಹು ಮಹಾರಾಜರ ಮೇಲೆ ಪ್ರಭಾವ ಬೀರಿದ ಸಮಾಜ.<br>**D.** ಸತ್ಯಶೋಧಕ ಸಮಾಜ | 1 |
| 3 | ರೋಮ್‌ನಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದ ಸಂಸ್ಥೆ<br>**A.** ಆಹಾರ ಮತ್ತು ಕೃಷಿ ಸಂಸ್ಥೆ | 1 |
| 4 | ಕೇಂದ್ರ ಸರ್ಕಾರವು 1976ರಲ್ಲಿ ಜಾರಿಗೆ ತಂದ ಕಾಯ್ದೆ.<br>**B.** ಸಮಾನ ವೇತನ ಕಾಯ್ದೆ | 1 |
| 5 | ಕೇರಳ ಸಾಹಿತ್ಯ ಪರಿಷತ್ತು ಮತ್ತು ವನ್ಯ ಮೃಗ ಆಸಕ್ತರು ನಡೆಸಿದ ಹೋರಾಟ ಇದಾಗಿದೆ.<br>**B.** ಮೌನ ಕಣಿವೆ ಆಂದೋಲನ | 1 |
| 6 | ಅಮೇರಿಕಾದ ಗ್ರಾಹಕರಿಗೆ ನಾಲ್ಕು ಗ್ರಾಹಕ ಹಕ್ಕುಗಳನ್ನು ನೀಡುವ ವಿಧೇಯಕವನ್ನು ಅಂಗೀಕರಿಸಿದವರು.<br>**C.** ಜಾನ್ ಎಫ್ ಕೆನಡಿ | 1 |

| | | |
|---|---|---|
| | | 1 |
| 7 | ವಿತ್ತೀಯ ಕೊರತೆಯ ಸರಿಯಾದ ಸೂತ್ರ ರೂಪ. | |
| | **B.** (ಕಂದಾಯ ಆದಾಯ + ಸಾಲೇತರ ಬಂಡವಾಳ ಆದಾಯ) – ಒಟ್ಟು ವೆಚ್ಚ | 1 |
| 8 | ಭಾರತದಲ್ಲಿ ಈಗ ಅಭ್ರಕದ ರಫ್ತು ಕಡಿಮೆಯಾಗುತ್ತಿದೆ.ಏಕೆಂದರೆ. | |
| | **A.** ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ | 1 |
| **II.** | **II.** ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯದಲ್ಲಿ ಉತ್ತರಿಸಿ. | |
| 9 | ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರನ್ನು 'ಭಾರತದ ಆರ್ಥಿಕ ಯೋಜನೆಯ ಪಿತಾಮಹ' ಎಂದು ಕರೆಯಲಾಗುತ್ತಿದೆ.ಏಕೆ? | 1 |
| | ಭಾರತದ ಆರ್ಥಿಕ ಅಭಿವೃದ್ಧಿಗೆ ಯೋಜನೆಯ ಅಗತ್ಯತೆಯನ್ನು ಒತ್ತಿ ಹೇಳಿದರು. ಹಾಗಾಗಿ ಅವರನ್ನು ಭಾರತದ ಆರ್ಥಿಕ ಯೋಜನೆಯ ಪಿತಾಮಹ ಎನ್ನುವರು. | |
| 10 | ಎರಡನೇ ಷಾ ಆಲಂ ಮರಾಠರಿಗೆ ನೀಡಿದ ಪ್ರದೇಶಗಳು ಯಾವುವು? | |
| | ಎರಡನೇ ಷಾ ಆಲಂ ಮರಾಠರಿಗೆ ಕೋರ ಮತ್ತು ಅಲಹಾಬಾದ್ ಪ್ರದೇಶಗಳನ್ನು ನೀಡಿದರು. | 1 |
| 11 | ಕಲ್ಕತ್ತಾದಲ್ಲಿ ಭಗವದ್ಗೀತೆಯನ್ನು ಪಠಿಸುತ್ತಾ ಉಪವಾಸವನ್ನು ಕೈಗೊಂಡವರು ಯಾರು? | 1 |
| | ಕಲ್ಕತ್ತಾದಲ್ಲಿ ಭಗವದ್ಗೀತೆಯನ್ನು ಪಠಿಸುತ್ತ ಉಪವಾಸ ಕೈಗೊಂಡವರು ಮಹಾತ್ಮ ಗಾಂಧೀಜಿ. | |
| 12 | ಪೆಟ್ರೋಲಿಯಂ ಅನ್ನು 'ದ್ರವರೂಪದ ಚಿನ್ನ' ಎಂದು ಏಕೆ ಕರೆಯಲಾಗಿದೆ? | 1 |
| | ಪೆಟ್ರೋಲಿಯಂನನ್ನು ಬಹುಉಪಯೋಗಗಳಿಗೆ ಬಳಸುವುದರಿಂದ | |
| 13 | ಮಕ್ಕಳ ಸಹಾಯವಾಣಿ ಸಂಖ್ಯೆ ಯಾವುದು? | 1 |
| | ಮಕ್ಕಳ ಸಹಾಯವಾಣಿ–1098 | 1 |
| 14 | ೧೯೭೫ರಲ್ಲಿ "ಅವೇರ್" ಎಂಬ ಚಳುವಳಿಯನ್ನು ಪ್ರಾರಂಭಿಸಿದವರು ಯಾರು? | |
| | ಮುಂಬೈ ನಗರದ ಕೆಲವು ಮಹಿಳೆಯರು | 1 |

| | | |
|---|---|---|
| 15 | ನಿಶ್ಶಸ್ತ್ರೀಕರಣ ಎಂದರೇನು?<br><br>ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ಪ್ರಕ್ರಿಯೆ | 1 |
| 16 | ಬೇಸಿಗೆಯ ಅವಧಿಯಲ್ಲಿ ಭಾರತದ ಉಷ್ಣಾಂಶ ಅಧಿಕವಾಗಿರುತ್ತದೆ, ಏಕೆ?<br><br>ಉತ್ತರಾರ್ಧಗೋಳದ ಮೇಲೆ ಸೂರ್ಯನ ಕಿರಣಗಳು ಲಂಭವಾಗಿ ಬೀಳುವುದರಿಂದ | 1 |
| III. | III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ. | |
| 17 | ರಾಜ ಮಾರ್ತಾಂಡವರ್ಮ ಆಡಳಿತಕ್ಕೆ ಬರುವ ಮುಂಚೆ ವೈನಾಡ್ ಸಂಸ್ಥಾನದಲ್ಲಿ ಅನೇಕ ಗೊಂದಲಗಳಿದ್ದವು.ನಿದರ್ಶಿಸಿ.<br><br>ರಾಜ ಮಾರ್ತಾಂಡ ವರ್ಮ ಆಡಳಿತಕ್ಕೆ ಬರುವ ಮುಂಚೆ ವೈನಾಡ್ ಸಂಸ್ಥಾನದಲ್ಲಿದ್ದ ಗೊಂದಲಗಳೆಂದರೆ<br>➢ ವೈನಾಡ್ ರಾಜ ರಾಮವರ್ಮ ಅತ್ಯಂತ ದುರ್ಬಲ ಅರಸನಾಗಿದ್ದ<br>➢ ಡಚ್ ಸೈನ್ಯ ವೈನಾಡ್ ಸ್ಯನ್ಯಕ್ಕಿಂತ ಪ್ರಬಲವಾಗಿತ್ತು<br>➢ ವೈನಾಡಿನ ಸುತ್ತಮುತ್ತಲ ಸಂಸ್ಥಾನಗಳು ಅತ್ಯಂತ ಬಲಿಷ್ಠವಾಗಿದ್ದವು<br>➢ ವೈನಾಡಿನ ಪಾಳೆಗಾರರು ರಾಜನನ್ನು ದುರ್ಬಲಗೊಳಿಸಿದ್ದರು | 2 |
| 18 | ಆನಿಬೆಸೆಂಟರ ಕೊಡುಗೆಗಳನ್ನು ವಿವರಿಸಿ.<br><br>ಅನಿಬೆಸೆಂಟ್‌ರ ಕೊಡುಗೆಗಳೆಂದರೆ<br>➢ ಭಾರತದಲ್ಲಿ ಥಿಯಾಸಾಫಿಕಲ್ ಸೊಸೈಟಿ ಸ್ಥಾಪನೆ<br>➢ ಭಾರತ ಸ್ವಾತಂತ್ರ್ಯ ಚಳುವಳಿಗೆ ಬೆಂಬಲ<br>➢ 'ನ್ಯೂ ಇಂಡಿಯಾ' ಪತ್ರಿಕೆ ಸ್ಥಾಪನೆ<br>➢ 1916ರಲ್ಲಿ 'ಹೋಂರೂಲ್ ಚಳುವಳಿ' ಪ್ರಾರಂಭ<br>➢ ಸಮಾನತೆ ಮತ್ತು ಸಹೋದರತ್ವ ವೃದ್ಧಿಸಲು ಪ್ರಯತ್ನ. | 2 |
| 19 | ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದುಕೊಟ್ಟ ಘಟನೆಗಳು ಯಾವುವು?<br><br>ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿಕೊಟ್ಟ ಅಂಶಗಳೆಂದರೆ<br>➢ 1776ರ ಅಮೆರಿಕಾದ ಸ್ವಾತಂತ್ರ್ಯ ಯುದ್ಧ<br>➢ 1789ರ ಫ್ರಾನ್ಸಿನ ಮಹಾಕ್ರಾಂತಿ<br>➢ 1917ರ ರಷ್ಯಾಕ್ರಾಂತಿ<br>➢ ಭಾರತದ ಸ್ವಾತಂತ್ರ್ಯ ಹೋರಾಟ | 2 |

| | | |
|---|---|---|
| | ಅಥವಾ<br><br>ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳನ್ನು ಪಟ್ಟಿ ಮಾಡಿ.<br>ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯಗಳೆಂದರೆ<br>➢ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ<br>➢ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆ ನಿಯೋಜನೆ<br>➢ ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ<br>➢ ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿ ಉಮೇದುವಾರಿಕೆಗೆ ಹೆಸರು ಸೂಚಿಸುತ್ತದೆ | |
| 20 | ದೊಂಬಿಗೆ ಕಾರಣಗಳೇನು?<br>ದೊಂಬಿಗೆ ಕಾರಣಗಳೆಂದರೆ<br>➢ ಕೋಮುಗಲಭೆ<br>➢ ಜಾತಿಗಲಭೆ<br>➢ ಜನಾಂಗೀಯ ಕಲಹ<br>➢ ಗುಂಪು ಘರ್ಷಣೆ<br>ಅಥವಾ<br><br>ಅಸಂಘಟಿತ ಕೆಲಸಗಾರರ ಸಮಸ್ಯೆಗಳು ಯಾವುವು?<br>ಅಸಂಘಟಿತ ಕೆಲಸಗಾರರ ಸಮಸ್ಯೆಗಳೆಂದರೆ<br>➢ ನಿರ್ಧಿಷ್ಟ ಕಾಯ್ದೆ ಕಾನೂನುಗಳಿರುವುದಿಲ್ಲ.<br>➢ ನಿರ್ಧಿಷ್ಟ ಸಮಯವಿರುವುದಿಲ್ಲ.<br>➢ ನಿರ್ಧಿಷ್ಟ ಸ್ಥಳವಿರುವುದಿಲ್ಲ.<br>➢ ನಿರ್ಧಿಷ್ಟ ವೇತನವಿರುವುದಿಲ್ಲ.<br>➢ ಆರೋಗ್ಯ ಸೌಲಭ್ಯವಿರುವುದಿಲ್ಲ.<br>➢ ಅಧಿಕಾರ ಶ್ರೇಣಿ ವ್ಯವಸ್ಥೆ ಇಲ್ಲ.<br>➢ ಉದ್ಯೋಗ ಭರವಸೆ ಇಲ್ಲ.<br>➢ ವಿಶೇಷ ಭತ್ಯೆ ಸೌಲಭ್ಯವಿರುವುದಿಲ್ಲ. | 2 |
| 21 | ಮ್ಯಾಂಗ್ರೋವ್ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ.<br>ಮ್ಯಾಂಗ್ರೋವ್ ಅರಣ್ಯಗಳ ಲಕ್ಷಣಗಳೆಂದರೆ<br>➢ ನದಿ ಮುಖಜ ಭೂಮಿಗಳಲ್ಲಿ ಕಂಡುಬರುತ್ತವೆ<br>➢ ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ<br>➢ ಗಂಗಾ,ಮಹಾನದಿ,ಗೋದಾವರಿ,ಕೃಷ್ಣನದಿ ಮುಖಜಭೂಮಿಯಲ್ಲಿ ಕಂಡುಬರುತ್ತವೆ<br>➢ ಸುಂದರಿ ಮರಗಳು ಹೆಚ್ಚಾಗಿ ಕಂಡುಬರುತ್ತವೆ | 2 |

➢ ಗಂಗಾ ನದಿ ಮುಖಜ ಭೂಮಿಯನ್ನು ಸುಂದರಬನ್ ಅರಣ್ಯಗಳು ಎಂದು ಕರೆಯುತ್ತಾರೆ

22 ಸಮರ್ಪಕ ಕ್ರಮಗಳಿಂದ ಮಾತ್ರ ಪ್ರವಾಹ ನಿಯಂತ್ರಣ ಸಾಧ್ಯ.ಹೇಗೆ?
ಪ್ರವಾಹ ನಿಯಂತ್ರಣ ಕ್ರಮಗಳೆಂದರೆ

- ➢ ನದಿಯ ಇಕ್ಕೆಲಗಳಲ್ಲಿ ತಡೆಗೋಡೆ ನಿರ್ಮಾಣ
- ➢ ಡ್ಯಾಂ ನಿರ್ಮಾಣ
- ➢ ಮುನ್ಸೂಚನಾ ಕೇಂದ್ರಗಳ ಸ್ಥಾಪನೆ
- ➢ ಅರಣ್ಯಗಳನ್ನು ಬೆಳೆಸುವುದು 2

23 ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸುಗಳ ನಡುವಿನ ನಾಲ್ಕು ವ್ಯತ್ಯಾಸಗಳನ್ನು ತಿಳಿಸಿ.
ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸು ನಡುವಿನ ವ್ಯತ್ಯಾಸಗಳೆಂದರೆ

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| 1.ಒಬ್ಬ ವ್ಯಕ್ತಿ/ಕುಟುಂಬದ ಆದಾಯ ಮತ್ತು ವೆಚ್ಚ | ಸರ್ಕಾರದ ಆದಾಯ ಮತ್ತು ವೆಚ್ಚ |
| 2.ಆದಾಯಕ್ಕೆ ಅನುಗುಣವಾಗಿ ವೆಚ್ಚ | ವೆಚ್ಚಕ್ಕೆ ಅನುಗುಣವಾಗಿ ಆದಾಯ |
| 3.ವ್ಯವಹಾರ ಗೌಪ್ಯ | ವ್ಯವಹಾಗಳ ಪ್ರಚಾರ |
| 4.ಹೆಚ್ಚು ಉಳಿತಾಯ ಮಾಡಿದರೆ ಪ್ರಗತಿ | ಹೆಚ್ಚು ವೆಚ್ಚ ಮಾಡಿದರೆ ಪ್ರಗತಿ |

2

24 ಉದ್ಯಮಿಗಳ ಯಾವುದಾದರೂ ನಾಲ್ಕು ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.
ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳೆಂದರೆ

- ➢ ಜಿಲ್ಲಾ ಕೈಗಾರಿಕೆ ಕೇಂದ್ರಗಳು
- ➢ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ➢ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ
- ➢ ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆ
- ➢ ಕೈಗಾರಿಕಾ ಪ್ರದೇಶಗಳು
- ➢ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
- ➢ ತಾಂತ್ರಿಕ ಸಲಹಾ ಸಂಸ್ಥೆಗಳು

2

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಐದರಿಂದ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರ ಬರೆಯಿರಿ.

25 ಸಹಾಯಕ ಸೈನ್ಯ ಪದ್ಧತಿಯು ಒಳಗೊಂಡ ಅಂಶಗಳನ್ನು ತಿಳಿಸಿ.
ಸಹಾಯಕ ಸೈನ್ಯ ಪದ್ಧತಿಯು ಒಳಗೊಂಡ ಅಂಶಗಳೆಂದರೆ

- ➢ ಲಾರ್ಡ್ ವೆಲ್ಲಸ್ಲಿಯು 1798ರಲ್ಲಿ ಸಹಾಯಕ ಸೈನ್ಯ ಪದ್ಧತಿ ಜಾರಿಗೆ ತಂದನು

| | | |
|---|---|---|
| | ➢ ಭಾರತೀಯ ರಾಜನು ಬ್ರೀಟಿಷ್ ಸೈನಿಕರ ಒಂದು ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು<br>➢ ಸೇನೆಯ ವೇತನ ಮತ್ತು ನಿರ್ವಹಣಾ ವೆಚ್ಚವನ್ನು ಸಂಬಂಧ ಪಟ್ಟ ರಾಜ್ಯವೇ ಭರಿಸಬೇಕು<br>➢ ರಾಜನ ಆಸ್ಥಾನದಲ್ಲಿ ಬ್ರೀಟಿಷ್ ರೆಸಿಡೆಂಟನ್ನು ನೇಮಿಸಿಕೊಳ್ಳಬೇಕು<br>➢ ಭಾರತದ ಯಾವುದೇ ರಾಜ್ಯಗಳೊಂದಿಗೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳಬೇಕಾದರೆ ಗವರ್ನರ್ ಜನರಲ್ ಒಪ್ಪಿಗೆ ಬೇಕು.<br>➢ ಕಂಪನಿಯು ರಾಜ್ಯಕ್ಕೆ ಆಂತರಕ ಮತ್ತು ಬಾಹ್ಯ ರಕ್ಷಣೆ ನೀಡಬೇಕು.<br>➢ ಬ್ರೀಟಷರ ಅನುಮತಿಯಿಲ್ಲದೇ ಯಾವುದೇ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ<br><br>ಅಥವಾ<br><br>ಬ್ರಿಟಿಷ್ ಶಿಕ್ಷಣದಿಂದ ಭಾರತದಲ್ಲಿ ಹೊಸ ಅಭಿರುಚಿ ಮತ್ತು ಆಲೋಚನೆಗಳು ಸೃಷ್ಟಿಯಾದವು.ಹೇಗೆ?<br>ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳೆಂದರೆ<br>➢ ಭಾರತೀಯರಲ್ಲಿ ಆಧುನಿಕತೆ,ಜಾತ್ಯತೀತತೆ ಬೆಳವಣಿಗೆ<br>➢ ವೈಜ್ಞಾನಿಕ ಆಲೋಚನೆ ಬೆಳವಣಿಗೆ<br>➢ ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗೆ ಪ್ರೋತ್ಸಾಹ<br>➢ ವೃತ್ತ ಪತ್ರಿಕೆಗಳ ಬೆಳವಣಿಗೆ<br>➢ ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳ ಉಗಮ<br>➢ ರಾಷ್ಟ್ರೀಯವಾದಿ ದೃಷ್ಟಿಕೋನಗಳ ಬೆಳವಣಿಗೆ<br>➢ ಪಾಶ್ಚಿಮಾತ್ಯ ಚಿಂತನೆಗಳು ಭಾರತೀಯ ವಿದ್ಯಾವಂತರ ಆಲೋಚನೆಗಳನ್ನು ಬದಲಿಸಿದವು.<br>➢ ಜಗತ್ತಿನ ಸ್ವತಂತ್ರ್ಯ ಚಳುವಳಿಗಳ ಪ್ರಭಾವ ಭಾರತೀಯರ ಮೇಲಾಯಿತು<br>➢ ಭಾರತೀಯರಿಗೆ ತಮ್ಮ ಸಂಸ್ಕೃತೀಯ ಅರಿವು | 3 |
| 26 | ಮೈಸೂರಿನ ಒಡೆಯರಲ್ಲಿ ರಾಜ ಒಡೆಯರೂ ಕೂಡ ಪ್ರಮುಖರಾಗಿದ್ದಾರೆ.ಹೇಗೆ?<br>ರಾಜ ಒಡೆಯರ್‌ರ ಸಾಧನೆಗಳೆಂದರೆ<br>➢ ಮೈಸೂರನ್ನು ದೊಡ್ಡ ರಾಜ್ಯವಾನ್ನಾಗಿ ವಿಸ್ತರಣೆ<br>➢ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ರಾಜಧಾನಿಯನ್ನಾಗಿ ಮಾಡಿದರು<br>➢ ಮೈಸೂರಿನಲ್ಲಿ ನವರಾತ್ರಿ ಉತ್ಸವ ಪ್ರಾರಂಭ<br>➢ ಶ್ರೀರಂಗಪಟ್ಟಣ,ಮೈಸೂರು,ಮೇಲುಕೋಟೆ ದೇವಾಲಯಗಳ ಜೀರ್ಣೋದ್ಧಾರ<br>➢ ಮೇಲುಕೋಟೆ ಚೆಲುವನಾರಾಯಣ ಸ್ವಾಮಿಗೆ ರಾಜಮುಡಿ ಕಿರೀಟ ಅರ್ಪಣೆ<br>➢ ಸುತ್ತಮುತ್ತಲ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡು ರಾಜ್ಯ ವಿಸ್ತರಣೆ. | |

| | | |
|---|---|---|
| 27 | ಮೊದಲ ಮಹಾಯುದ್ಧದಲ್ಲಿ ಮೈಸೂರು ಸಂಸ್ಥಾನವು ಬ್ರಿಟನ್‌ಗೆ ಹೇಗೆ ಸಹಕಾರ ನೀಡಿತು?<br>ಮೊದಲ ಮಹಾಯುದ್ಧದಲ್ಲಿ ಬ್ರಿಟನ್‌ಗೆ ಮೈಸೂರು ಸಂಸ್ಥಾನದ ಸಹಕಾರವೆಂದರೆ<br>➢ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾರತದ ವೈಸರಾಯ್‌ಗೆ ಪತ್ರ ಬರೆದು ಬ್ರಿಟನ್‌ಗೆ ಸಂಪೂರ್ಣ ಸಹರಿಸುವುದಾಗಿ ತಿಳಿಸಿದರು<br>➢ 50 ಲಕ್ಷ ರೂಪಾಯಿ ಸಂಸ್ಥಾನ ವತಿಯಿಂದ ಭಾರತದ ಯುದ್ಧ ನಿಧಿಗೆ ನೀಡಲಾಯಿತು<br>➢ ಸೇನಾಧಿಕಾರಿ ಬಿ.ಚಾಮರಾಜ ಅರಸರ ನೇತೃತ್ವದಲ್ಲಿ ಮೈಸೂರು ಸೇನೆ ರಣಭೂಮಿ ತಲುಪಿತು<br>➢ ಕರ್ನಲ್ ಜೆ.ದೇಶಿರಾಜ ಅರಸರು ದರ್ಬಾರಿನ ಪ್ರತಿನಿಧಿಯಾಗಿ ಯುದ್ಧ ಭೂಮಿಗೆ ಕಳುಹಿಸಲಾಯಿತು<br>➢ 23 ಆಫೀಸರ್‌ಗಳು,444 ಸಿಪಾಯಿಗಳು,526 ಕುದುರೆಗಳು,49 ಹೇಸರಕತ್ತೆಗಳನ್ನು ಯುದ್ಧಕ್ಕೆ ಕಳುಹಿಸಲಾಯಿತು<br>➢ ಕಬ್ಬಿಣ,ಅಭ್ರಕ,ಕಂಬಳಿ ಮರಮುಟ್ಟುಗಳನ್ನು ರಣರಂಗಕ್ಕೆ ಕಳುಹಿಸಲಾಯಿತು<br>➢ 1915ರಲ್ಲಿ ಸೂಯೋಜ್ ಕಾಲುವೆ ಪ್ರಾಂತ್ಯದಲ್ಲಿ 3 ಭಾರಿ ಶತ್ರುಗಳೂಂದಿಗೆ ಹೋರಾಟ<br>➢ ಗಾಜಾಪಟ್ಟಣ ಮುತ್ತಿಗೆ<br>➢ ಟರ್ಕಿಯವರ ಸೈನ್ಯ ನಾಶ<br>➢ ಪ್ಯಾಲಸ್ಟೈನ್,ಸಿರಿಯಾ,ಡಮಾಸ್ಕಸ್ ಮತ್ತು ಅಲೆಪ್ಪೂ ಪಟ್ಟಣಗಳ ಆಕ್ರಮಣ<br>➢ ಹೈಫಾ ಪಟ್ಟಣವನ್ನು ಹಿಡಿದಿಟ್ಟಿಕೊಳ್ಳುವಲ್ಲಿ ಯಶಸ್ವಿ. | 3 |
| 28 | ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವಿವರಿಸಿ.<br>ಭಾರತ ಮತ್ತು ಚೀನಾ ನಡುವಿನ ಸಂಬಂಧಗಳೆಂದರೆ<br>➢ 1949 ರಲ್ಲಿ ಚೀನಾ ಕಮ್ಯುನಿಷ್ಟ ರಾಷ್ಟ್ರವಾದಾಗ ಮೊದಲು ಮಾನ್ಯತೆ ನೀಡಿದ ದೇಶ ಭಾರತ<br>➢ ಪಂಚಶೀಲ ತತ್ವಗಳು<br>➢ ಹಿಂದಿ–ಚೀನೀ ಭಾಯಿ ಭಾಯಿ<br>➢ ಭಾರತದ ಧೋರಣೆ ವಿರುದ್ಧ ಚೀನಾದಿಂದ ಟಿಬೇಟ್ ವಶ<br>➢ 1962 ರಲ್ಲಿ ಭಾರತ ಮತ್ತು ಚೀನಾ ಯುದ್ಧ<br>➢ ಎರಡು ದೇಶಗಳ ಗಡಿ ನಿರ್ಣಾಯಕವಾಗಿಲ್ಲ<br>➢ ಚೀನಾ ಅರುಣಾಚಲ ಪ್ರದೇಶ ತನ್ನದೆಂದು ಪ್ರತಿಪಾದನೆ<br>➢ ಬ್ರಹ್ಮಪುತ್ರ ನದಿ ವಿವಾದ<br>➢ ಚೀನಾದ ಮಾವೋವಾದಿಗಳು ಭಾರತದಲ್ಲಿ ನಕ್ಸಲ್ ವಾದವನ್ನು ಹರುಡುತ್ತಿದ್ದಾರೆ<br>➢ ಗಡಿಯಲ್ಲಿನ ಮಿಲಿಟರಿ ಪಡೆಗಳ ಅತಿಕ್ರಮಣ<br>➢ ಅಣ್ವಸ್ತ್ರ ತಯಾರಿ<br>➢ ವಿದೇಶಿ ವ್ಯಾಪಾರದ ಸವಾಲುಗಳು | 3 |


| | | |
|---|---|---|
| 29 | ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು?<br>ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳೆಂದರೆ<br>➢ ಸಂವಿಧಾನದ 17 ನೇ ವಿಧಿ ಅಸ್ಪೃಶ್ಯತೆ ಆಚರಣೆ ನಿಷೇಧ<br>➢ 1955 ರ ಅಸ್ಪೃಶ್ಯತೆ ಅಪರಾಧಗಳ ಕಾಯ್ದೆ ಜಾರಿ<br>➢ 1976 ರ ನಾಗರೀಕ ಹಕ್ಕುಗಳ ಸಂರಕ್ಷಣಾ ಕಾಯ್ದೆ<br>➢ ಸಾರ್ವತ್ರಿಕ ಮತದಾನದ ಹಕ್ಕು<br>➢ ಸಮಾನತೆಯ ಹಕ್ಕು<br>➢ ಉದ್ಯೋಗದಲ್ಲಿ ಮೀಸಲಾತಿ<br>➢ ಶಿಕ್ಷಣದಲ್ಲಿ ಮೀಸಲಾತಿ<br>➢ ರಾಜಕೀಯದಲ್ಲಿ ಮೀಸಲಾತಿ<br>➢ ಆರ್ಥಿಕ ಮೀಸಲಾತಿ | 3 |
| 30 | ಮಣ್ಣಿನ ಸಂರಕ್ಷಣೆಯ ವಿಧಾನಗಳನ್ನು ಪಟ್ಟಿ ಮಾಡಿ<br>ಮಣ್ಣಿನ ಸಂರಕ್ಷಣಾ ವಿಧಾನಗಳೆಂದರೆ<br>➢ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು<br>➢ ಅಡ್ಡ ಬದುಗಳ ನಿರ್ಮಾಣ<br>➢ ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ<br>➢ ಅರಣ್ಯ ನಾಶ ತಡೆಗಟ್ಟುವುದು<br>➢ ಅತೀಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು<br>➢ ನೀರಿನ ಯೋಜಿತ ಬಳಕೆ<br>➢ ಚೆಕ್ ಡ್ಯಾಂಗಳ ನಿರ್ಮಾಣ<br>➢ ಅರಣ್ಯಗಳ ಬೆಳವಣಿಗೆ ಪ್ರೋತ್ಸಾಹ | 3 |
| 31 | ರಸ್ತೆ ಸಾರಿಗೆಯ ತೊಡಕುಗಳನ್ನು ಪಟ್ಟಿ ಮಾಡಿ.<br>ರಸ್ತೆ ಸಾರಿಗೆಯ ತೊಡುಕುಗಳೆಂದರೆ..<br>➢ ಗ್ರಾಮೀಣ ರಸ್ತೆಗಳು ಮಳೆಗಾಲದಲ್ಲಿ ಅಲಭ್ಯ<br>➢ ಪರಿಸರ ಮಾಲಿನ್ಯ<br>➢ ವಾಹನ ದಟ್ಟನೆ<br>➢ ಅಧಿಕ ಅಪಘಾತ<br>➢ ರಸ್ತೆಗಳು ಮಳೆ,ಪ್ರವಾಹ,ಚಂಡಮಾರುತಗಳಿಂದ ಪ್ರತಿ ವರ್ಷ ಹಾಳಾಗುತ್ತವೆ<br>➢ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆ ಅಸಮರ್ಪಕ<br>➢ ರಸ್ತೆ ಬದಿಗಳಲ್ಲಿ ಅಗತ್ಯತೆಗಳ ಕೊರತೆ<br><br>ಅಥವಾ | 3 |

<table>
<tr>
<td>32</td>
<td>
ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪಟ್ಟಿ ಮಾಡಿ.<br>
ಕೈಗಾರಿಕಾ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ<br>
➢ ಕಚ್ಚಾವಸ್ತು ಪೂರೈಕೆ<br>
➢ ಕಾರ್ಮಿಕರ ಲಭ್ಯತೆ<br>
➢ ಬಂಡವಾಳ<br>
➢ ವಾಯುಗುಣ<br>
➢ ಸಾರಿಗೆ ಸೌಲಭ್ಯ<br>
➢ ಮಾರುಕಟ್ಟೆ ಸೌಲಭ್ಯ<br>
➢ ಬಂದರು ಸೌಲಭ್ಯ<br>
➢ ತಾಂತ್ರಿಕತೆ<br>
➢ ಸರ್ಕಾರದ ನೀತಿ<br>
➢ ಶಕ್ತಿ ಸಂಪನ್ಮೂಲದ ಲಭ್ಯತೆ<br>
➢ ಭೂಮಿಯ ಲಭ್ಯತೆ<br>
<br>
ಹಸಿರು ಕ್ರಾಂತಿಗೆ ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳೆರಡೂ ಪ್ರೇರಕ ಅಂಶಗಳಾಗಿವೆ. ಹೇಗೆ?<br>
<br>
ಹಸಿರು ಕ್ರಾಂತಿಗೆ ಸುಗ್ಗಿಪೂರ್ವ ಮತ್ತು ಸುಗ್ಗಿನಂತರದ ತಂತ್ರಜ್ಞಾನಗಳು ಪ್ರೇರಕ ಅಂಶಗಳಾಗಿವೆ.<br>
❖ ಸುಗ್ಗಿಪೂರ್ವ ತಂತ್ರಜ್ಞಾನ<br>
➢ ಉತ್ತಮ ಬಿತ್ತನೆ ಬೀಜಗಳ ಬಳಕೆ<br>
➢ ರಾಸಾಯನಿಕ ಗೊಬ್ಬರ ಬಳಕೆ<br>
➢ ಕ್ರಿಮಿನಾಶಗಳ ಬಳಕೆ<br>
➢ ನೀರಾವರಿ ಸೌಲಭ್ಯ<br>
➢ ಕೀಟನಾಶಕಗಳ ಬಳಕೆ<br>
❖ ಸುಗ್ಗಿನಂತರ ತಂತ್ರಜ್ಞಾನ<br>
➢ ಕೃಷಿ ಉತ್ಪನ್ನಗಳ ವೈಜ್ಞಾನಿಕ ಸಂಗ್ರಹಣೆ,ಸಂಸ್ಕರಣೆ ಮತ್ತು ಮಾರಾಟ<br>
➢ ಉಗ್ರಾಣ ವ್ಯವಸ್ಥೆ<br>
➢ ಶೈತ್ಯಾಗಾರ<br>
➢ ಉತ್ತಮ ಬೆಂಬಲ ಬೆಲೆ<br>
<br>
ಅಥವಾ<br>
<br>
ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಮಹತ್ತರವಾದುದು.ಸಮರ್ಥಿಸಿ<br>
ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವೆಂದರೆ<br>
➢ ರಸ್ತೆ ನಿರ್ಮಾಣ
</td>
<td>3</td>
</tr>
</table>

| | | |
|---|---|---|
| | ➢ ಚರಂಡಿ ನಿರ್ಮಾಣ<br>➢ ಕುಡಿಯುವ ನೀರು ಪೂರೈಕೆ<br>➢ ಬೀದಿ ದೀಪ ಸೌಲಭ್ಯ<br>➢ ಶೌಚಾಲಯ ನಿರ್ಮಾಣ<br>➢ ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು<br>➢ ಮಾರುಕಟ್ಟೆ ಸೌಲಭ್ಯ<br>➢ ಕೃಷಿ ಬೆಳವಣಿಗೆ<br>➢ ಕೆರೆ ಕಟ್ಟೆಗಳ ನಿರ್ಮಾಣ<br>➢ ಗ್ರಾಮೀಣ ಉದ್ಯೋಗ ಅವಕಾಶಗಳು<br>➢ ಗ್ರಾಮೀಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ದಿ<br>➢ ಸುವರ್ಣ ಗ್ರಾಮೋದಯ ಯೋಜನೆ<br>➢ ವಸತಿ ಯೋಜನೆಗಳ ಸೌಲಭ್ಯ<br>➢ ಅಂಗವಿಕಲರು, ವಿಧವೆಯರು, ವಯೋವೃದ್ದರಿಗೆ ಸೌಲಭ್ಯ<br>➢ ಪಡಿತರ ವ್ಯವಸ್ಥೆ | |
| 33 | ಅಂಚೆ ಇಲಾಖೆಯು ನಿರ್ವಹಿಸುವ ಹಣಕಾಸಿನ ವ್ಯವಹಾರಗಳು ಯಾವುವು?<br>ಅಂಚೆ ಇಲಾಖೆಯು ನಿರ್ವಹಿಸುವ ಹಣಕಾಸಿನ ಕಾರ್ಯಗಳೆಂದರೆ<br>➢ ಹಣದ ಉಳಿತಾಯ<br>➢ ಹಣದ ವರ್ಗಾವಣೆ<br>➢ ಕಿಸಾನ ವಿಕಾಸ ಪತ್ರ<br>➢ ರಾಷ್ಟ್ರೀಯ ಉಳಿತಾಯ ಪತ್ರಗಳು<br>➢ ಅಂಚೆ ಉಳಿತಾಯ ಖಾತೆಗಳು<br>➢ ಅಂಚೆ ವಿಮೆ<br>➢ ಮಾಹೆಯಾನ ತೀರು ಕೇವಣಿಗಳು<br>➢ ನಿವೃತ್ತಿ ವೇತನ<br>➢ ವೃದ್ಯಾಪ್ಯ ವೇತನ<br>➢ ಅಂಗವಿಕಲ ವೇತನ ಇತ್ಯಾದಿ<br>ಅಥವಾ<br>ಗ್ರಾಹಕ ರಕ್ಷಣಾ ಕಾಯಿದೆಯು ಗ್ರಾಹಕರಿಗೆ ನೀಡಿದ ಹಕ್ಕುಗಳು ಯಾವುವು?<br>ಗ್ರಾಹಕ ರಕ್ಷಣಾ ಕಾಯಿದೆಯು ಗ್ರಾಹಕರಿಗೆ ನೀಡಿರುವ ಹಕ್ಕುಗಳೆಂದರೆ<br>➢ ಮಾಹಿತಿ ಪಡೆಯುವ ಹಕ್ಕು<br>➢ ವಸ್ತುಗಳ ಆಯ್ಕೆಯ ಹಕ್ಕು<br>➢ ವಸ್ತುಗಳ ಬಗ್ಗೆ ಆಲಿಸುವ ಹಕ್ಕು<br>➢ ಶೋಷಣೆ ವಿರುದ್ಧ ಪರಿಹಾರ ಕೇಳುವ ಹಕ್ಕು<br>➢ ಗ್ರಾಹಕ ಶಿಕ್ಷಣದ ಹಕ್ಕು<br>➢ ಮೋಸದ ವಿರುದ್ಧದ ಹಕ್ಕು<br>➢ ಗ್ರಾಹಕ ಜೀವಕ್ಕೆ ಅಪಾಯ ಉಂಟುಮಾಡುವ ಸರಕುಗಳ ವಿರುದ್ಧ ರಕ್ಷಿಸುವ ಹಕ್ಕು | 3 |

| | | |
|---|---|---|
| | ➢ ಗ್ರಾಹಕರ ಜೀವನ ಉತ್ತಮ ಪಡಿಸಿಕೊಳ್ಳುವ ಹಕ್ಕು | |
| V. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರ ಬರೆಯಿರಿ | |
| 34 | **1857ರ ದಂಗೆಯ ಪರಿಣಾಮಗಳನ್ನು ಪಟ್ಟಿ ಮಾಡಿ.**<br>**1857 ರ ದಂಗೆಯ ಪರಿಣಾಮಗಳೆಂದರೆ**<br>➢ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಅಂತ್ಯ<br>➢ ಬ್ರಿಟನ್ ರಾಣಿಗೆ ಆಡಳಿತ ವರ್ಗಾವಣೆ<br>➢ ಭಾರತದ ವ್ಯವಹಾರ ನೋಡಿಕೊಳ್ಳಲು ವ್ಯವಹಾರ ಕಾರ್ಯದರ್ಶಿ ನೇಮಕ<br>➢ 1858 ರಲ್ಲಿ ಬ್ರಿಟನ್ ರಾಣಿಯ ಘೋಷಣೆ<br>➢ ಈ ಘೋಷಣೆಯನ್ನು ಭಾರತದ ಮಹಾಸನ್ನದು ಎಂದು ಕರೆಯಲಾಗಿದೆ<br>➢ ಈ ಘೋಷಣೆಯಲ್ಲಿದ್ದ ಅಂಶಗಳೆಂದರೆ<br>➢ ಕಂಪನಿ ಮತ್ತು ದೇಶಿ ರಾಜರ ಒಪ್ಪಂದಗಳ ಅಂಗೀಕಾರ<br>➢ ಪ್ರಾದೇಶಿಕ ವಿಸ್ತರಣೆ ಕೈಬಿಡುವುದು<br>➢ ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು<br>➢ ಕಾನೂನಿನ ಮುಂದೆ ಸಮಾನತೆ<br>➢ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. | 4 |
| 35 | ಪ್ರಧಾನ ಮಂತ್ರಿಯಾಗಿ ಜವಾಹರಲಾಲ್ ನೆಹರು ಅವರು ದೇಶಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ.<br>ಪ್ರಧಾನ ಮಂತ್ರಿಯಾಗಿ ಜವಾಹರಲಾಲ್ ನೆಹರುರವರು ದೇಶಕ್ಕೆ ನೀಡಿದ ಕೊಡುಗೆಗಳೆಂದರೆ<br>➢ ಹೋಂರೂಲ್ ಚಳುವಳಿಯ ಮೂಲಕ ಸ್ವಾತಂತ್ರ್ಯ ಹೋರಾಟದಲಿ ಭಾಗಿ<br>➢ ಅಸಹಕಾರ ಚಳುವಳಿಯಲ್ಲಿ ಪ್ರಮುಖ ಪಾತ್ರ<br>➢ ಸುಭಾಸ್ ಚಂದ್ರ ಬೋಸರ ಜೊತೆ ಸೇರಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆ<br>➢ 1929 ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ<br>➢ ಸಂಪೂರ್ಣ ಸ್ವರಾಜ್ ಘೋಷಣೆ<br>➢ ಭಾರತದ ಪ್ರಥಮ ಪ್ರಧಾನ ಮಂತ್ರಿಯಾಗಿ ನೇಮಕ<br>➢ ದೇಶೀಯ ಸಂಸ್ಥಾನಗಳ ವಿಲೀನಿಕರಣ<br>➢ ಸರ್ಕಾರ ರಚನೆ<br>➢ ಪಂಚವಾರ್ಷಿಕ ಯೋಜನೆಗಳ ಜಾರಿ<br>➢ ಅಲಿಪ್ತ ನೀತಿ<br>➢ ಪಂಚಶೀಲ ತತ್ವಗಳು<br>➢ ವಿದೇಶಾಂಗ ನೀತಿ ರಚನೆ<br>➢ ಬೃಹತ್ ಕೈಗಾರೀಕೆಗಳ ಸ್ಥಾಪನೆ<br>ಅಥವಾ | 4 |

| | | | |
|---|---|---|---|
| | ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆಯನ್ನು ವಿವರಿಸಿ.<br>ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪ್ರತಿಭಟನೆಗಳು ಪ್ರಮುಖ ಪಾತ್ರ ವಹಿಸಿವೆ.<br>➢ ಜಮೀನ್ದಾರರು ಮತ್ತು ಯೂರೋಪಿಯನ್ ಪ್ಲಾಂಟ್‌ರಗಳ ವಿರುದ್ಧ ರೈತರ ಪ್ರತಿಭಟನೆ<br>➢ ಚಂಪಾರಾಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಗೆ ವಿರೋಧ<br>➢ ಭೂಕಂದಾಯ ವಿರುದ್ಧ ಹರತಾಳ<br>➢ ಸ್ವತಂತ್ರ್ಯ ಹೋರಾಟಕ್ಕೆ ರೈತರ ಸಂಘಟಿಸಲಾಗಿತ್ತು<br>➢ ಚಂಪಾರಣ್ಯ,ಖೇಡಾ ಹೋರಾಟಕ್ಕೆ ಗಾಂಧೀಜಿ ಬೆಂಬಲ<br>➢ ಕಾಂಗ್ರೇಸ್ ಬೆಂಬಲದಿಂದ ತೇಭಾಗ,ಮಲಬಾರ್‌ನಲ್ಲಿ ಜಮೀನ್ದಾರರು ಮತ್ತು ಬ್ರಿಟಿಷರ ವಿರುದ್ಧ ಹೋರಾಟ<br>➢ ರೈತಾ ಹೋರಾಟಗಳು ಕಿಸಾನ್ ಸಭಾದಡಿಯಲ್ಲಿ ಸಂಘಟಿತವಾದವು<br>➢ ತೆಲಂಗಾಣದಲ್ಲಿ ರೈತರು ಜಮೀನ್ದಾರರು ಮತ್ತು ರಜಾಕರರ ವಿರುದ್ಧ ಹೋರಾಟ<br>➢ ಬಂಗಾಳದಲ್ಲಿ ಜಮೀನ್ದಾರರ ಶೋಷಣೆ ವಿರುದ್ಧ ದಂಗೆ<br>➢ ಮಹಾರಾಷ್ಟ್ರದಲ್ಲಿ ಕಡಿಮೆ ಕೂಲಿ ವಿರುದ್ಧ ಹೋರಾಟ | | |
| 36 | ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ.ಸಮರ್ಥಿಸಿ<br>ಮಹಿಳಯರ ಸ್ಥಾನಮಾನವನ್ನು ಉತ್ತಮ ಪಡಿಸುವ ಕ್ರಮಗಳೆಂದರೆ<br>➢ ಮಹಿಳಾ ಶಿಕ್ಷಣ<br>➢ ಬಾಲ್ಯವಿವಾಹ ನಿಷೇಧ ಕಾಯ್ದೆ<br>➢ ವರದಕ್ಷಿಣೆ ನಿಷೇಧ ಕಾಯ್ದೆ<br>➢ ಸ್ತ್ರೀ ಶಕ್ತಿ ಸಂಘ ಸ್ಥಾಪನೆ<br>➢ ಮಹಿಳಾ ಸ್ವ ಉದ್ಯೋಗ<br>➢ ಮಹಿಳಾಮಂಡಲಗಳು<br>➢ ಯುವತಿ ಮಂಡಲಗಳು<br>➢ ಸ್ವಸಹಾಯ ಸಂಘಗಳು<br>➢ ಮಹಿಳಾ ಸಹಕಾರಿ ಸಂಘಗಳು<br>➢ ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ 50% ಮಹಿಳಾ ಮೀಸಲಾತಿ<br>➢ ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ | 4 | |
| 37 | ಭಾರತದಲ್ಲಿ ಭೂ ಸಂಪನ್ಮೂಲದ ಸದ್ಬಳಕೆ ಮೇಲೆ ಪ್ರಭಾವ ಬೀರುವ ಅಂಶಗಳಾವುವು?<br>ಭಾರತದಲ್ಲಿ ಭೂ ಸಂಪನ್ಮೂಲದ ಸದ್ಬಳಕೆ ಮೇಲೆ ಪ್ರಭಾವ ಬೀರುವ ಅಂಶಗಳೆಂದರೆ<br>➢ ಭೂ ಸ್ವರೂಪಗಳು<br>➢ ವಾಯುಗುಣ<br>➢ ಮಣ್ಣು<br>➢ ಭೂ ಹಿಡುವಳಿ | | |

| | | |
|---|---|---|
| | ➢ ಜನಸಂಖ್ಯೆ<br>➢ ಉದ್ಯೋಗ<br>➢ ಜನರ ಮನೋಭಾವ<br>➢ ಸಾಮಾಜಿಕ ಪರಿಸ್ಥಿತಿ<br>➢ ಮಾರುಕಟ್ಟೆ<br>➢ ತಾಂತ್ರಿಕತೆ<br>➢ ನೀರಾವರಿ ಸೌಲಭ್ಯ<br>➢ ಮಾನವ ಸಾಮರ್ಥ್ಯ<br>➢ ಭೂ ಒಡೆತನ | **4** |
| **VI.** 38 | **ಭಾರತದ ನಕ್ಷೆಯನ್ನು ಬರೆದು,ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.**<br>**A. 82 ½°** ಪೂರ್ವ ರೇಖಾಂಶ<br>**B.** ಭಾಕ್ರಾ-ನಂಗಲ್<br>**C.** ಉತ್ಕಲ ತೀರ<br>**D.** ಮುಂಬಯಿ<br> | **5** |

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================

**ಅಭ್ಯಾಸ ಪತ್ರಿಕೆ–02**

*************************************************************************

**ಮಾದರಿ ಉತ್ತರಗಳು**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **8 x1=8** | |
| 1 | ಸಹಾಯಕ ಸೈನ್ಯ ಪದ್ಧತಿ ಒಪ್ಪಂದಕ್ಕೆ ಸಹಿ ಮಾಡಿದ ಮೊದಲ ರಾಜ್ಯ.<br>➢ B. ಹೈದರಬಾದ್ ಸಂಸ್ಥಾನ | 1 |
| 2 | "ಸೂಪರಿಟೆಂಡೆಂಟ್ ಆಫ್ ಪೊಲೀಸ್" ಎಂಬ ಹೊಸ ಹುದ್ದೆ ಸೃಷ್ಟಿಸಿದವರು.<br>➢ A. ಲಾರ್ಡ್ ಕಾರ್ನ್‌ವಾಲಿಸ್ | 1 |
| 3 | ವಿಶ್ವಸಂಸ್ಥೆಯ ಪ್ರಸ್ತುತ ಮಹಾಕಾರ್ಯದರ್ಶಿ.<br>➢ B. ಆಂಟೋನಿಯೋ ಗುಟೆರಸ್ | 1 |
| 4 | ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ತಿಳಿಸುವ ಸಂವಿಧಾನದ ವಿಧಿ.<br>➢ C. 17ನೇ ವಿಧಿ | 1 |
| 5 | ಪಂಚವಾರ್ಷಿಕ ಯೋಜನೆಯು ಇದನ್ನು ನಿವಾರಿಸುವ ಉದ್ದೇಶ ಹೊಂದಿದೆ<br>➢ B. ನಿರುದ್ಯೋಗ | 1 |

| | | |
|---|---|---|
| 6 | ಬಿಹಾರದ "ಕಣ್ಣೀರಿನ ನದಿ".<br><br>➢ ಕೋಸಿ | 1 |
| 7 | ನೀತಿ ಆಯೋಗದ ಅಧ್ಯಕ್ಷರು.<br><br>➢ **B.** ಪ್ರಧಾನ ಮಂತ್ರಿ | 1 |
| 8 | ವಿದ್ಯಾರ್ಥಿಗಳು ಹೊಂದಬಹುದಾದ ಬ್ಯಾಂಕ್ ಖಾತೆಯ ವಿಧ.<br><br>➢ ಉಳಿತಾಯ ಖಾತೆ | 1 |
| II. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. | |
| 9 | 1935ರ ಭಾರತ ಸರ್ಕಾರ ಕಾಯ್ದೆ "ಭಾರತ ಸಂವಿಧಾನದ ಬುನಾದಿ" ಹೇಗೆ?<br><br>➢ ಭಾರತದಲ್ಲಿ ಸಂಯುಕ್ತ ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆ ಜಾರಿಗೆ ಬಂದಿತು | 1 |
| 10 | ಎರಡನೇ ಆಂಗ್ಲೋ-ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ ಯಾವುದು?<br><br>➢ ಮಂಗಳೂರು ಒಪ್ಪಂದ | 1 |
| 11 | 'ಮಾನವ ಹಕ್ಕುಗಳ ದಿನ' ವನ್ನು ಯಾವ ದಿನಾಂಕದಂದು ಆಚರಿಸಲಾಗುತ್ತಿದೆ?<br><br>➢ ಡಿಸೆಂಬರ್-10 | 1 |
| 12 | ಪೂರ್ವಗ್ರಹ ಎಂದರೇನು?<br><br>➢ ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧರಿತ ಮನೋಭಾವನೆ | 1 |
| 13 | ಭಾರತದಲ್ಲಿ ಅತೀ ಕಡಿಮೆ ಮಳೆ ಬೀಳುವ ಋತುಮಾನ ಯಾವುದು?<br><br>➢ ಚಳಿಗಾಲ | 1 |

| | | |
|---|---|---|
| 14 | ಪಶ್ಚಿಮ ಕರಾವಳಿ ತೀರದಲ್ಲಿ ಕಡಲ ಕೊರತವು ಅಧಿಕವಾಗಿರುತ್ತದೆ. ಏಕೆ?<br><br>➢ ವರ್ಷದ ನಾಲ್ಕು ತಿಂಗಳು ನೈರುತ್ಯ ಮಾನ್ಸೂನ್ ಮಾರುತಗಳ ಹೊಡೆತಕ್ಕೆ ತುತ್ತಾಗುವುದರಿಂದ | 1 |
| 15 | ವಿಕೇಂದ್ರೀಕರಣ ಎಂದರೇನು?<br><br>➢ ಪ್ರತಿಯೊಂದು ಹಳ್ಳಿಯ ಆಡಳಿತ ಹಾಗೂ ಜವಾಬ್ದಾರಿಯನ್ನು ಹಳ್ಳಿ ಜನರಿಗೆ ವಹಿಸಿಕೊಡುವುದು | 1 |
| 16 | "ಬ್ಯಾಂಕುಗಳ ಬ್ಯಾಂಕ್" ಎಂದು ಯಾವ ಸಂಸ್ಥೆಯನ್ನು ಕರೆಯುವರು?<br><br>➢ ಭಾರತೀಯ ರಿಸರ್ವ್ ಬ್ಯಾಂಕ್ | 1 |
| III. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ /ಅಂಶಗಳಲ್ಲಿ ಉತ್ತರಿಸಿ. | |
| 17 | ಸತ್ಯ ಶೋಧಕ ಸಮಾಜದ ಬೋಧನೆಗಳಾವುವು?<br>➢ ಪಾನನಿಷೇದ<br>➢ ಸ್ತ್ರೀ–ಪುರುಷ ಸಮಾನತೆ<br>➢ ಸಾಮಾಜಿಕ ನ್ಯಾಯ<br>➢ ಮಾನವ ಹಕ್ಕಗಳ ನಿರಾಕರಣೆಗೆ ವಿರೋಧ<br>➢ ಶೋಷಣೆಗೆ ವಿರೋಧ<br>➢ ಅಸ್ಪೃಶ್ಯತಾ ಆಚರಣೆಗೆ ವಿರೋಧ<br>➢ ಮಹಿಳಾ ಶಿಕ್ಷಣಕ್ಕೆ ಒತ್ತು | 2 |
| 18 | ಭಾರತವು ಸ್ವಾತಂತ್ರ್ಯ ನಂತರ ಎದುರಿಸಿದ ಸಮಸ್ಯೆಗಳು ಯಾವುವು?<br>➢ ನಿರಾಶ್ರಿತರ ಸಮಸ್ಯೆ<br>➢ ಕೋಮುಗಲಭೆ<br>➢ ಸರ್ಕಾರ ರಚನೆ<br>➢ ದೇಶೀಯ ಸಂಸ್ಥಾನಗಳ ವಿಲೀನೀಕರಣ<br>➢ ಆಹಾರದ ಉತ್ಪಾದನೆ<br>➢ ಆಹಾರ ಉತ್ಪಾದನೆ | 2 |

| | | |
|---|---|---|
| 19 | ಭಯೋತ್ಪಾದಕತೆ ನಿಗ್ರಹಕ್ಕೆ ಭಾರತವು ಕೈಗೊಂಡಿರುವ ಕ್ರಮಗಳಾವುವು?<br>➢ ಗಡಿ ಭದ್ರತೆ<br>➢ ಮಿತ್ರ ರಾಷ್ಟ್ರಗಳ ಸಂಖ್ಯೆ ಹೆಚ್ಚಿಸಿಕೊಳ್ಳುವುದು<br>➢ ಕರಾವಳಿ ಗಸ್ತುಪಡೆ ನೇಮಕ<br>➢ ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ<br>➢ ಕಠಿಣ ಶಿಕ್ಷೆ<br>➢ ಜನರಲ್ಲಿ ಅರಿವು<br>➢ ವಿಶೇಷ ಪರಿಣಿತ ಪಡೆ ರಚನೆ<br>➢ ಬಾಂಬ್ ನಿಷ್ಕ್ರಿಯ ದಳ ನೇಮಕ<br><br>ಅಥವಾ<br><br>ಭದ್ರತಾ ಸಮಿತಿಯ ರಚನೆಯನ್ನು ತಿಳಿಸಿ.<br>➢ ವಿಶ್ವಸಂಸ್ಥೆಯ ಸಚಿವ ಸಂಪುಟ<br>➢ 15 ಮಂದಿ ಸದಸ್ಯರನ್ನು ಹೊಂದಿದೆ<br>➢ ಇದರಲ್ಲಿ 5 ಖಾಯಂ ಸದಸ್ಯ ರಾಷ್ಟ್ರಗಳು–ಅಮೆರಿಕಾ,ರಷ್ಯಾ,ಚೀನಾ,ಬ್ರಿಟನ್ ಮತ್ತು ಫ್ರಾನ್ಸ್<br>➢ ಉಳಿದ 10 ತಾತ್ಕಲಿಕ ಸದಸ್ಯ ರಾಷ್ಟ್ರಗಳು–2 ವರ್ಷಗಳ ಅವಧಿಗೆ ಆಯ್ಕೆ<br>➢ ಪ್ರತಿಯೊಂದು ಸದಸ್ಯರಿಗೂ ಒಂದು ಮತ ಚಲಾಯಿಸುವ ಹಕ್ಕಿದೆ | 2 |
| 20 | ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?<br>➢ ನಿರ್ಧಿಷ್ಟ ಕಾಯ್ದೆ ಕಾನೂನುಗಳಿರುವುದಿಲ್ಲ.<br>➢ ನಿರ್ಧಿಷ್ಟ ಸಮಯವಿರುವುದಿಲ್ಲ.<br>➢ ನಿರ್ಧಿಷ್ಟ ಸ್ಥಳವಿರುವುದಿಲ್ಲ.<br>➢ ನಿರ್ಧಿಷ್ಟ ವೇತನವಿರುವುದಿಲ್ಲ.<br>➢ ಆರೋಗ್ಯ ಸೌಲಭ್ಯವಿರುವುದಿಲ್ಲ.<br>➢ ಅಧಿಕಾರ ಶ್ರೇಣಿ ವ್ಯವಸ್ಥೆ ಇಲ್ಲ.<br>➢ ಉದ್ಯೋಗ ಭರವಸೆ ಇಲ್ಲ.<br>➢ ವಿಶೇಷ ಭತ್ಯೆ ಸೌಲಭ್ಯವಿರುವುದಿಲ್ಲ.<br><br>ಅಥವಾ<br><br>ಜನಮಂದೆಯ ಸ್ವರೂಪವನ್ನು ತಿಳಿಸಿ<br>➢ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರ ಗುಂಪು | 2 |

| | | |
|---|---|---|
| | ➢ ಉದಾಹರಣೆಗೆ ರಸ್ತೆ ಅಪಘಾತ,ಸಾವು ಇತ್ಯಾದಿ.<br>➢ ಕುತೂಹಲ ತಣಿಯುವವರೆಗೆ ಮಾತ್ರ ಜನರ ಗುಂಪು ಘಟನಾ ಸ್ಥಳದಲ್ಲಿರುತ್ತದೆ<br>➢ ಕೆಲವೊಮ್ಮೆ ನೆರೆದಿರುವ ಜನರಾಶಿಯು ಭಾವನಾತ್ಮಕವಾಗಿ ಸ್ಫೋಟಗೊಳ್ಳುವ ಸಂಭವವಿರುತ್ತದೆ<br>➢ ಸರ್ಕಾರದ ಯೋಜನೆಗಳು, ಧೋರಣೆಗಳು ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಬಗೆಗಿನ ಜನರ ಅಸಮಧಾನವನ್ನು ಹೊರಹಾಕುವ ಸಂಭವವಿರುತ್ತದೆ | |
| 21 | ಅರಣ್ಯ ಸಂರಕ್ಷಣಾ ವಿಧಾನಗಳನ್ನು ಬರೆಯಿರಿ.<br>➢ 1) ಅರಣ್ಯ ನಾಶ ನಿಯಂತ್ರಣ.<br>➢ 2) ಮಿತಿಮೀರಿ ಮೇಯಿಸುವುದನ್ನು ತಡೆಗಟ್ಟವುದು.<br>➢ 3) ಕಾಡ್ಗಿಚ್ಚು ನಿಯಂತ್ರಣ.<br>➢ 4) ಅರಣ್ಯ ಅತಿ ಕ್ರಮಣದ ತಡೆ.<br>➢ 5) ಅರಣ್ಯಗಳಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.<br>➢ 6) ಮರಗಳ ಕಳ್ಳಸಾಗಣೆ ತಡೆ.<br>➢ 7) ವೈಜ್ಞಾನಿಕವಾಗಿ ಮರಗಳನ್ನು ಕಡಿಯುವುದು.<br>➢ 8) ಅರಣ್ಯನಾಶ ನಿಯಂತ್ರಣ ಕಾಯಿದೆಯನ್ನು ಜಾರಿ<br>➢ 9) ಅರಣ್ಯ ಬೆಳೆಸಲು ಪ್ರೋತ್ಸಾಹ<br>➢ 10)ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ಜನರಲ್ಲಿ ಅರಿವು | 2 |
| 22 | ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆಗಳೇನು?<br>➢ ಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಉಳಿತಾಯ<br>➢ ಕಡಿಮೆ ಪರಿಸರ ಮಾಲಿನ್ಯ<br>➢ ಆಮದು ನಿಯಂತ್ರಣ<br>➢ ಸುಸ್ಥಿರ ಅಭಿವೃದ್ಧಿಗೆ ಪೂರಕ | 2 |
| 23 | ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಂಶಗಳು ಯಾವುವು?<br>❖ ಸುಗ್ಗಿಪೂರ್ವ ತಂತ್ರಜ್ಞಾನ<br>➢ ಉತ್ತಮ ಬಿತ್ತನೆ ಬೀಜಗಳ ಬಳಕೆ<br>➢ ರಾಸಾಯನಿಕ ಗೊಬ್ಬರ ಬಳಕೆ<br>➢ ಕ್ರಿಮಿನಾಶಗಳ ಬಳಕೆ<br>➢ ನೀರಾವರಿ ಸೌಲಭ್ಯ<br>➢ ಕೀಟನಾಶಕಗಳ ಬಳಕೆ | 2 |

| | | |
|---|---|---|
| | ❖ ಸುಗ್ಗಿನಂತರದ ತಂತ್ರಜ್ಞಾನ<br>➢ ಕೃಷಿ ಉತ್ಪನ್ನಗಳ ವೈಜ್ಞಾನಿಕ ಸಂಗ್ರಹಣೆ,ಸಂಸ್ಕರಣೆ ಮತ್ತು ಮಾರಾಟ<br>➢ ಉಗ್ರಾಣ ವ್ಯವಸ್ಥೆ<br>➢ ಶೈತ್ಯಾಗಾರ<br>➢ ಉತ್ತಮ ಬೆಂಬಲ ಬೆಲೆ | 2 |
| 24 | ಗ್ರಾಹಕ ಸಂರಕ್ಷಣಾ ಕಾಯ್ದೆಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿ.<br>➢ ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಆಧ್ಯತೆ<br>➢ ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟ ನಿಯಂತ್ರಣ<br>➢ ಅನುಚಿತ ವ್ಯಾಪಾರ ನಿಯಂತ್ರಣ<br>➢ ಗ್ರಾಹಕ ಶಿಕ್ಷಣ ಮೂಲಕ ಜಾಗೃತಿ<br>➢ ಅಳತೆ,ಗುಣಮಟ್ಟ,ತೂಕ ಮತ್ತು ಬೆಲೆ ಮೇಲೆ ನಿಗಾ | |
| IV.<br><br>25 | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ.<br><br>ಭಾರತದಲ್ಲಿ ಬ್ರಿಟಿಷರು ನಾಗರಿಕ ಸೇವಾ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳೇನು?<br>➢ ಕಾರ್ನ್ ವಾಲಿಸ್ ನಾಗರಿಕ ಸೇವಾ ವ್ಯವಸ್ಥೆ ಜಾರಿ<br>➢ ವ್ಯಾಪಾರ ಮಾಡಲು ನೌಕರರ ನೇಮಕ<br>➢ ಈ ನೌಕರರಿಗೆ ಖಾಸಗಿಯಾಗಿ ವ್ಯಾಪಾರ ಮಾಡಲು ಅನುಮತಿ<br>➢ ನೌಕರರು ಅನ್ಯೆತಿಕ ವ್ಯಾಪಾರದ ಮೂಲಕ ಹಣ ಸಂಪಾದನೆ<br>➢ 1773ರಲ್ಲಿ ರೆಗ್ಯುಲೇಟಿಂಗ್ ಕಾಯ್ದೆ ಜಾರಿ<br>➢ 1800ರಲ್ಲಿ ನಾಗರೀಕ ಸೇವೆಗೆ ಸೇರುವವರಿಗಾಗಿ ಕಲ್ಕತ್ತಾದ ಫೋರ್ಟ್ ವಿಲಿಯಂ ಕಾಲೇಜು ಸ್ಥಾಪನೆ<br>➢ ಆದರೆ ಕಂಪನಿ ನಿರ್ದೇಶಕರು ಬೆಂಬಲಿಸಲಿಲ್ಲ<br>➢ 1853ರ ನಂತರ ನಾಗರೀಕ ಸೇವೆಗೆ ಸೇರುವವರಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಜಾರಿ<br>➢ ಇದರಿಂದ ಭಾರತೀಯರಿಗೆ ಹೆಚ್ಚನ ಅನೂಕೂಲವಾಗಲ್ಲಿಲ್ಲ<br>➢ ಭಾರತೀಯರಿಗೆ ಕೆಳದರ್ಜೆ ಉದ್ಯೋಗಗನ್ನು ಮಾತ್ರ ನೀಡಲಾಯಿತು | 3 |
| 26 | ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಸಂಗೊಳ್ಳಿ ರಾಯಣ್ಣನ ಹೋರಾಟ ಗಮನಾರ್ಹವಾದದ್ದು.ಹೇಗೆ?<br>➢ ಕಿತ್ತೂರಿನ ಚೆನ್ನಮ್ಮನ ವೀರಯೋಧ<br>➢ ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಟ<br>➢ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಟ<br>➢ ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆ<br>➢ ಸೈನಿಕರ ಸಂಘಟನೆ<br>➢ ಗುಪ್ತ ಸಭೆಗಳನ್ನು ನಡೆಸಿ ಯೋಜನೆಗಳನ್ನು ರೂಪಣೆ | 3 |

- ತಾಲ್ಲೂಕು ಕಛೇರಿಗಳು ಮತ್ತು ಖಜಾನೆಗಳನ್ನು ಲೂಟಿ
- ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು.
- ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರ ಸಂಚು
- ಕಿತ್ತೂರಿನ ಚೆನ್ನಮ್ಮಳನ್ನು ವಿರೋಧಿಸುತ್ತಿದ್ದ ದೇಸಾಯಿಗಳನ್ನು ಪ್ರಚೋದಿಸಿದರು.
- ಅಮಲ್ದಾರನಾಗಿದ್ದ ಕೃಷ್ಣರಾಯ ಎಂಬುವವನು ಈ ಸಂಚಿಗೆ ಕೈಜೋಡಿಸಿದನು.
- ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷ್ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು.
- ಆತನ ಬಂಧನಾನಂತರ ಆತನ ಸೈನಿಕರು ಶರಣಾಗತರಾದರು.
- ಮುಖ್ಯ ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು.
- ಆತನ ಅನೇಕ ಅನುಯಾಯಿಗಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು.
- ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ದೇಶಪ್ರೇಮವನ್ನು ಆ ಪ್ರದೇಶದ ಲಾವಣಿಗಳು ಇಂದಿಗೂ ಜೀವಂತವಾಗಿಸಿವೆ.

ಅಥವಾ

ಪ್ಲಾಸಿ ಕದನದ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ.

ಪ್ಲಾಸಿ ಕದನದ ಕಾರಣ

- ದಸ್ತಕ್‌ಗಳ ದುರುಪಯೋಗ
- ಅನುಮತಿ ಇಲ್ಲದೆ ಕೋಟೆಯ ದುರಸ್ಥಿ
- ಕಪ್ಪುಕೋಣೆ ದುರಂತ

ಪ್ಲಾಸಿ ಕದನದ ಪರಿಣಾಮಗಳು

- ಭಾರತೀಯರ ಅನೈತಿಕತೆ,ಅಸಂಘಟನೆ ಪ್ರದರ್ಶನ
- ಮೀರ್ ಜಾಫರ್ ಬಂಗಾಳದ ನವಾಬನಾದನು
- ಕಂಪನಿಗೆ ಬಂಗಾಳದ ಅನಿರ್ಬಂಧಿತ ಹಕ್ಕು
- ಮೀರ್ ಜಾಫರ್ ಕಂಪನಿಗೆ ಹದಿನೇಳು ಕೋಟಿ ಎಪ್ಪತ್ತು ಲಕ್ಷ ರೂಪಾಯಿ ಯುದ್ಧ ಪರಿಹಾರ

27 ಮೊದಲನೇ ಮಹಾಯುದ್ಧದ ಪರಿಣಾಮಗಳೇನು?

- ವರ್ಸೇಲ್ಸ್ ಒಪ್ಪಂದಕ್ಕೆ ಸಹಿ
- ರಾಷ್ಟ್ರಸಂಘ ರಚನೆ
- ಉಗ್ರ ರಾಷ್ಟ್ರೀಯವಾದ ಬೆಳವಣಿಗೆ 3
- ಸುಮಾರು ಒಂದು ಕೋಟಿ ಸಾವು
- ಜರ್ಮನಿ ತನ್ನ ಹೆಚ್ಚಿನ ಭೂ ಪ್ರದೇಶವನ್ನು ಕಳೆದುಕೊಂಡಿತು
- ಇಡೀ ಯೂರೋಪು ಭೂಪಟ ಬದಲಾವಣೆ
- ಆಸ್ಟ್ರೋ–ಹಂಗೇರಿ,ಆಟೋಮನ್ ರಾಷ್ಟ್ರಗಳು ತನ್ನ ಅಸ್ತಿತ್ವ ಕಳೆದುಕೊಂಡವು

| | | |
|---|---|---|
| | ➢ ಸಣ್ಣ ಸಣ್ಣ ರಾಷ್ಟ್ರಗಳು ಅಸ್ತಿತ್ವ | |
| 28 | ಅಮೇರಿಕಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.<br>➢ ಎರಡು ರಾಷ್ಟ್ರಗಳು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳು<br>➢ ರಾಷ್ಟ್ರೀಯ ಹಿತಾಶಕ್ತಿಗಳನ್ನು ಆಧರಿಸಿ ಸ್ಥಿತ್ಯಂತರ<br>➢ ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ಸಹಾಯ<br>➢ 1962 ರ ಭಾರತದ ಮೇಲೆ ಚೀನಾ ಆಕ್ರಮಣ ಖಂಡನೆ<br>➢ ಭಾರತ–ಪಾಕ್ ಯುದ್ಧದ ವೇಳೆ ಪಾಕಿಸ್ತಾನಕ್ಕೆ ಸಹಾಯ<br>➢ ಭಯೋತ್ಪಾದನೆ ವಿರುದ್ಧ ಸಮಾನ ಹಿತಾಶಕ್ತಿ<br>➢ ವಿದೇಶೀ ವ್ಯಾಪಾರ,ವಿಜ್ಞಾನ ಮತ್ತು ತಂತ್ರಜ್ಞಾನ,ಬಾಹ್ಯಾಕಾಶದಲ್ಲಿ ಉತ್ತಮ ಬಾಂಧವ್ಯ<br>➢ ವಿಶ್ವಸಂಸ್ಥೆ ಬಲಪಡಿಸುವ ಹಾಗೂ ಜಾಗತಿಕ ಶಾಂತಿ ಉಳಿಸಲು ಸಮಾನ ಧೋರಣೆ | 3 |
| 29 | ಬಾಲಕಾರ್ಮಿಕತೆಗೆ ಕಾರಣಗಳನ್ನು ತಿಳಿಸಿ.<br>➢ ಕಡುಬಡತನ<br>➢ ಕೌಟುಂಬಿಕ ಕಲಹ<br>➢ ವಿಚ್ಛೇದನ<br>➢ ಕೌಟುಂಬಿಕ ಹಿಂಸೆ<br>➢ ಅನಕ್ಷರತೆ<br>➢ ಪೋಷಕರ ಅತಿಯಾದ ನಿಯಂತ್ರಣ<br>➢ ಉದ್ಯಮಿಗಳ ಲಾಭಕೋರತನ<br>➢ ಮಕ್ಕಳ ಅಪಹರಣ<br>➢ ಜೀತ ಪದ್ಧತಿ | 3 |
| 30 | ಮಣ್ಣಿನ ಸಂರಕ್ಷಣೆಗೆ ನೀವು ಯಾವ ಕ್ರಮಗಳನ್ನು ಸೂಚಿಸುವಿರಿ?<br>➢ ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು<br>➢ ಅಡ್ಡ ಬದುಗಳ ನಿರ್ಮಾಣ<br>➢ ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ<br>➢ ಅರಣ್ಯ ನಾಶ ತಡೆಗಟ್ಟುವುದು<br>➢ ಅತೀಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು<br>➢ ನೀರಿನ ಯೋಜಿತ ಬಳಕೆ<br>➢ ಚೆಕ್ ಡ್ಯಾಂಗಳ ನಿರ್ಮಾಣ<br>➢ ಅರಣ್ಯಗಳ ಬೆಳವಣಿಗೆ ಪ್ರೋತ್ಸಾಹ | 3 |

| | | |
|---|---|---|
| 31 | ಭಾರತದ ಭೂ ಬಳಕೆಯ ಪ್ರಕಾರಗಳು ಯಾವುವು?<br>➢ ನಿವ್ವಳ ಸಾಗುವಳಿ ಕ್ಷೇತ್ರ<br>➢ ಅರಣ್ಯ ಭೂಮಿ<br>➢ ವ್ಯವಸಾಯೇತರ ಭೂ ಬಳಕೆ<br>➢ ಬೀಳು ಭೂಮಿ<br>➢ ಹುಲ್ಲುಗಾವಲು<br>➢ ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ<br><br>ಅಥವಾ<br><br>ದೇಶದ ಆರ್ಥಿಕಾಭಿವೃದ್ಧಿಯಲ್ಲಿ ರಸ್ತೆ ಸಾರಿಗೆಯ ಮಹತ್ವವನ್ನು ತಿಳಿಸಿ.<br>➢ ಗ್ರಾಮೀಣ ಅಭಿವೃದ್ಧಿ<br>➢ ಕೃಷಿ ಅಭಿವೃದ್ಧಿ<br>➢ ಮಾರುಕಟ್ಟೆ ಅಭಿವೃದ್ಧಿ<br>➢ ಕೈಗಾರಿಕ ಅಭಿವೃದ್ಧಿ<br>➢ ಸರ್ಕಾರಕ್ಕೆ ಆದಾಯ<br>➢ ವಿದೇಶಿ ವ್ಯಾಪಾರ ಅಭಿವೃದ್ಧಿ<br>➢ ರಾಷ್ಟ್ರೀಯ ಆದಾಯ ಹೆಚ್ಚಳ<br>➢ ತಲಾ ಆದಾಯ ಹೆಚ್ಚಳ<br>➢ ಉತ್ತಮ ಜನರ ಜೀವನ ಮಟ್ಟ<br>➢ ಉದ್ಯೋಗಾವಕಾಶ | 3 |
| 32 | 'ಮಹಿಳಾ ಸ್ವಸಹಾಯ ಸಂಘ'ವು ಗ್ರಾಮೀಣ ಬಡ ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ವಿಶ್ಲೇಷಿಸಿ.<br>➢ ಮಹಿಳೆಯರನ್ನು ಆರ್ಥಿಕ ಸ್ವಾವಲಂಬನೆ<br>➢ ಹಣದ ಉಳಿತಾಯ<br>➢ ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಿದೆ<br>➢ ಆರ್ಥಿಕ ಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಿದೆ<br>➢ ಲೆಕ್ಕ ನಿರ್ವಹಣೆ ಜ್ಞಾನ<br>➢ ಬ್ಯಾಂಕಿನ ಜೊತೆ ವ್ಯವಹರಿಸುವ ಜ್ಞಾನ ಹೆಚ್ಚಿಸಿದೆ<br>➢ ಸ್ಥಳೀಯ ಸಂಪನ್ಮೂಲಗಳ ಸಮರ್ಪಕ ಬಳಕೆ.<br>➢ ಮಹಿಳೆಯರು ತಮ್ಮ ಇಚ್ಛಾನುಸಾರ ಖರ್ಚು ಮಾಡುವುದಕ್ಕೂ ಅನುವು ಮಾಡಿಕೊಟ್ಟಿವೆ. | 3 |

ಅಥವಾ

ಕೇಂದ್ರ ಸರ್ಕಾರವು ತೆರಿಗೆಯನ್ನು ಹೊರತುಪಡಿಸಿ ತೆರರಿಗೆಯೇತರ ಮೂಲಗಳಿಂದಲೂ ಆದಾಯವನ್ನು ಪಡೆಯುತ್ತದೆ,ಹೇಗೆ?

- ಆರ್.ಬಿ.ಇ ನಿಂದ ಬಂದ ಲಾಭ
- ಭಾರತೀಯ ರೈಲ್ವೆಯಿಂದ ಬಂದ ಲಾಭ
- ಅಂಚೆಯಿಂದ ಬಂದ ಆದಾಯ
- ದೂರವಾಣಿಯಿಂದ ಬಂದ ಆದಾಯ
- ಸಾರ್ವಜನಿಕ ಉದ್ಯಮಗಳಿಂದ ಗಳಿಸುವ ಆದಾಯ
- ನಾಣ್ಯ ಮತ್ತು ಟಂಕಸಾಲೆಯಿಂದ ಬರುವ ಆದಾಯ
- ವಿವಿಧ ಶಿಲ್ಕ ಮತ್ತು ದಂಡಗಳು

33 ಬ್ಯಾಂಕಿನ ವಿವಿಧ ಬಗೆಗಳನ್ನು ಬರೆಯಿರಿ 3

- ಭಾರತೀಯ ರಿಸರ್ವ್ ಬ್ಯಾಂಕ್
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕ ಅಭಿವೃದ್ಧಿ ಬ್ಯಾಂಕುಗಳು
- ಭೂ ಅಭಿವೃದ್ಧಿ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು
- ಸಹಕಾರಿ ಬ್ಯಾಂಕುಗಳು

ಅಥವಾ

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಉದ್ಯಮಿಯು ಮಹತ್ವ ಪಾತ್ರ ವಹಿಸುತ್ತಾನೆ.ಸಮರ್ಥಿಸಿ.

- ಸಂಪನ್ಮೂಲ ಸದ್ಬಳಕೆ
- ಉದ್ಯೋಗಗಳ ಸೃಷ್ಟಿ
- ರಾಷ್ಟ್ರೀಯ ಆದಾಯ ಹೆಚ್ಚಳ
- ತಲಾವರಮಾನ ಹೆಚ್ಚಳ
- ಮಾರುಕಟ್ಟೆ ಅಭಿವೃದ್ಧಿ
- ದೇಶದ ರಫ್ತು ಹೆಚ್ಚಳ
- ಕೈಗಾರಿಕಾ ಅಭಿವೃದ್ಧಿ
- ಜನರ ಜೀವನ ಮಟ್ಟ ಸುಧಾರಣೆ
- ಪ್ರಾಂತೀಯ ತಾರತಮ್ಯ ನಿವಾರಣೆ

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ

34 ಸ್ವಾತಂತ್ರ್ಯ ಚಳವಳಿಯಲ್ಲಿ ಮಂದಗಾಮಿಗಳ ಪಾತ್ರವನ್ನು ವಿವರಿಸಿ.

- ಮಂದಗಾಮಿಗಳ ಅವಧಿ 1885–1906

- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಮೊದಲ 20 ವರ್ಷಗಳ ಅವಧಿ ಮಂದಗಾಮಿಗಳ ಯುಗ
- ಎಂ.ಜಿ.ರಾನಡೆ,ಸುರೇಂದ್ರನಾಥ ಬ್ಯಾನರ್ಜಿ,ದಾದಾ ಬಾಯಿ ನವರೋಜಿ,ಗೋಪಾಲಕೃಷ್ಣ ಗೋಖಲೆ ಪ್ರಮುಖ ಮಂದಗಾಮಿಗಳು
- ಪ್ರಾಥನೆ ಮತ್ತು ಮನವಿಗಳ ಮೂಲಕ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದರು
- ಮಂದಗಾಮಿಗಳ ಪ್ರಮುಖ ಬೇಡಿಕೆಗಳೆಂದರೆ :- **4**
- ಭಾರತೀಯರಿಗೆ ರಾಜಕೀಯ ಶಿಕ್ಷಣ ನೀಡುವುದು
- ದೇಶದ ಕೈಗಾರಿಕೆಗಳ ಅಭಿವೃದ್ಧಿ
- ಸೈನಿಕ ವೆಚ್ಚ ಕಡಿಮೆ ಮಾಡುವುದು
- ಉತ್ತಮ ಶಿಕ್ಷಣ ನಿಡುವುದು
- ಬಡತನದ ಬಗ್ಗೆ ಅಧ್ಯಯನ


ಅಥವಾ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳು ಹೇಗೆ ತಮ್ಮ ಪಾತ್ರವನ್ನು ವಹಿಸಿದವು?

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ಪಾತ್ರ

- ಬ್ರಿಟಿಷರ ಕಂದಾಯ ಮತ್ತು ಅರಣ್ಯ ನೀತಿಗಳ ವಿರುದ್ಧ ದಂಗೆ
- ಸಂತಾಲ,ಕೋಲ ಮತ್ತು ಮುಂಡ ಚಳವಳಿ ಪ್ರಮುಖವಾಗಿವೆ.
- ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯ
- ಸಂತಾಲ ದಂಗೆ ಭಾರತದ ಆದ್ಯ ಹೋರಾಟವಾಗಿದೆ
- ಬಂಗಾಳಿ ಮತ್ತು ಒರಿಸ್ಸಾದ ಗುಡ್ಡಗಾಡು ಪ್ರದೇಶಗಳಲ್ಲಿ ಹೋರಾಟ
- ಬ್ರಿಟಿಷರು ಜಾರಿಗೆ ತಂದ ಖಾಯಂ ಜಮೀನ್ದಾರಿ ಪದ್ಧತಿಯಿಂದ ಈ ಬುಡಕಟ್ಟು ಜನರು ನಿರ್ಗತಿಕರಾದರು. 4
- ಭೂಮಿ ಬುಡಕಟ್ಟು ಜನರಿಂದ ಜಮೀನ್ದಾರರ ಕೈಸೇರಿತು
- ಬಂಗಾಳಿ ಜಮೀನ್ದಾರರು ಮತ್ತು ಲೇವಾದೇವಿಗಾರರಿಂದ ಸಂತಾಲರ ನೇರ ಶೋಷಣೆಗೆ
- ಸಂತಾಲರ ಶಾಂತಿಪ್ರಿಯತೆ ಮತ್ತು ಸಭ್ಯತೆಯನ್ನು ಕಂಪನಿ ಸರ್ಕಾರವು ಶೋಷಣೆ
- ಸಂತಾಲರು ರಹಸ್ಯ ಸಭೆಗಳನ್ನು ನಡೆಸಿ ಜಮೀನ್ದಾರರು ಮತ್ತು ಲೇವಾದೇವಿಗಾರರನ್ನು ಲೂಟಿಮಾಡಲು ನಿರ್ಧರಿಸಿದರು.
- ದಂಗೆಯು ಬಾರಹತ್, ಬಾಗತಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು.
- ಪರಿಣಾಮವಾಗಿ ಬುಡಕಟ್ಟು ಜನರು ಅವರ ಶತ್ರುಗಳನ್ನು ಹತ್ಯೆ ಮಾಡಿದರು.

| | | |
|---|---|---|
| | ➢ ಇದರಿಂದಾಗಿ ಅನೇಕ ಜಮೀನ್ದಾರರು ಮತ್ತು ಲೇವಾದೇವಿದಾರರು ಪಲಾಯನ ಮಾಡಿದರು.<br>➢ ಸಂತಾಲರ ದಂಗೆಯನ್ನು ಹತ್ತಿಕ್ಕಲು ಬ್ರಿಟಿಷರು ಸೈನ್ಯವನ್ನು ಬಳಸಿಕೊಂಡರು.<br>➢ ಸಂತಾಲರ ದಂಗೆಯು ಅನೇಕ ಹೋರಾಟಗಳಿಗೆ ಪ್ರೇರಣೆಯಾಯಿತು. | |
| **35** | **1857 ರ ದಂಗೆಗೆ ಆರ್ಥಿಕ ಮತ್ತು ರಾಜಕೀಯ ಅಂಶಗಳು ಕಾರಣವಾದವು,ವಿಶ್ಲೇಷಿಸಿ.**<br>ಆರ್ಥಿಕ ಕಾರಣಗಳು<br>➢ ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯ ಪ್ರಭಾವ ದೇಶೀಯ ಕೈಗಾರಿಕೆಗಳು ಕ್ಷೀಣಿಸುವುದು<br>➢ ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು<br>➢ ಗೃಹ ಕೈಗಾರಿಕೆಗಳ ಅವನತಿ<br>➢ ಭಾರತದ ವಸ್ತುಗಳಿಗೆ ದುಬಾರಿ ಸುಂಕ<br>➢ ಜಮೀನ್ದಾರರು ಕೃಷಿಕರ ಶೋಷಣೆ<br>➢ ಇನಾಂ ಭೂಮಿ ವಾಪಸ್<br>➢ ಇದರಿಂದ ಕೃಷಿಕರಿಗೆ ತೀವ್ರ ಸಂಕಷ್ಟ<br><br>ರಾಜಕೀಯ ಕಾರಣಗಳು<br>➢ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಪದ್ಧತಿಯ ಮೂಲಕ ಸತಾರ,ಜೈಪುರ,ಝಾನ್ಸಿ,ಉದಯಪುರ ಬ್ರಿಟಿಷರ ವಶ<br>➢ ತಂಜಾವುರ್ ಮತ್ತು ಕರ್ನಾಟಿಕ್ ನವಾಬರ ರಾಜ ಪದವಿ ರದ್ದು<br>➢ ಮೊಘಲ್ ಚಕ್ರವರ್ತಿ,ಔದ್ ನವಾದನ ಪದಚ್ಯುತಿ<br>➢ ಇವುಗಳಿಂದ ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು | 4 |
| 36 | ಕಳ್ಳ ಸಾಗಣಿಕೆಯನ್ನು ನಿರ್ಮೂಲನಗೊಳಿಸಲು ಕೈಗೊಂಡಿರುವ ಕ್ರಮಗಳು ಯಾವುವು?<br>➢ ಪರ್ಯಾಯ ವಸ್ತುಗಳ ಪೊರೈಕೆ<br>➢ ಬೆಲೆ ನಿಯಂತ್ರಣ<br>➢ ಯೋಗ್ಯ ಆಮದು-ರಫ್ತು ಧೋರಣೆ<br>➢ ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ನೇಮಕ<br>➢ ಕಠಿಣ ಶಿಕ್ಷೆ<br>➢ ವ್ಯಾಪಾರ ಒಪ್ಪಂದಗಳು<br>➢ ಕಳ್ಳ ಸಾಗಾಣಿಕೆ ವಿರುದ್ಧ ಜನ ಜಾಗೃತಿ<br>➢ ಕಳ್ಳ ಸಾಗಾಣಿಕೆ ವಸ್ತುಗಳ ಸಾಮಾಜಿಕ ಬಹಿಷ್ಕರಿಸುವುದು<br>➢ ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ | 4 |
| 37 | ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?<br>➢ ಕಚ್ಚಾವಸ್ತು ಪೂರೈಕೆ | |

| | | |
|---|---|---|
| **VI.** 38 | ➢ ಕಾರ್ಮಿಕರ ಲಭ್ಯತೆ<br>➢ ಬಂಡವಾಳ<br>➢ ವಾಯುಗುಣ<br>➢ ಸಾರಿಗೆ ಸೌಲಭ್ಯ<br>➢ ಮಾರುಕಟ್ಟೆ ಸೌಲಭ್ಯ<br>➢ ಬಂದರು ಸೌಲಭ್ಯ<br>➢ ತಾಂತ್ರಿಕತೆ<br>➢ ಸರ್ಕಾರದ ನೀತಿ<br>➢ ಶಕ್ತಿ ಸಂಪನ್ಮೂಲದ ಲಭ್ಯತೆ<br>➢ ಭೂಮಿಯ ಲಭ್ಯತೆ | 4 |
| | ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.<br>**A.**82 1/2$^0$ ಪೂರ್ವ ರೇಖಾಂಶ.<br>**B.**ಕೊಚ್ಚಿನ್<br>**C**. ನರ್ಮದಾ ನದಿ<br>**D.**ದಾಮೋದರ ನದಿ ಯೋಜನೆ.<br> | 5 |

ಉಪನಿರ್ದೇಶಕರು (ಆಡಳಿತ)ರವರ ಕಚೇರಿ
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================

**ಅಭ್ಯಾಸ ಪತ್ರಿಕೆ–03**

****************************************************************************

**ಮಾದರಿ ಉತ್ತರಗಳು**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. | |
| 1 | ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ಜಾರಿಗೆ ತಂದವರು.<br>**A.** ಲಾರ್ಡ್ ಡಾಲ್ ಹೌಸಿ | 1 |
| 2 | ಪ್ರಾಂತ್ಯಗಳಲ್ಲಿ "ದ್ವಿ ಸರ್ಕಾರ" ಪದ್ಧತಿಗೆ ಅವಕಾಶ ಮಾಡಿಕೊಟ್ಟ ಕಾಯ್ದೆ.<br>B. 1919ರ ಭಾರತ ಸರ್ಕಾರ ಕಾಯ್ದೆ | 1 |
| 3 | ಅಂತರಾಷ್ಟ್ರೀಯ ನ್ಯಾಯಾಲಯವಿರುವ ಸ್ಥಳ.<br>C. ಹೇಗ್ | 1 |
| 4 | "ಮಾನವ ಕುಲ ತಾನೊಂದೇ ವಲಂ" ಎಂದು ಹೇಳಿದವರು.<br>**D.** ಆದಿಕವಿ ಪಂಪ | 1 |
| 5 | ಸಂಘಟಿತ ಕೆಲಸಗಾರರಿಗೆ ಉದಾಹರಣೆ.<br>C. ಶಿಕ್ಷಕರು | 1 |

| | | |
|---|---|---|
| 6 | ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ.<br><br>B. ಭಾಕ್ರಾ–ನಂಗಲ್ | 1 |
| 7 | ಭಾರತದ ಹಸಿರು ಕ್ರಾಂತಿಯ ಪಿತಾಮಹ.<br><br>C. ಎಂ.ಎಸ್.ಸ್ವಾಮಿನಾಥನ್ | 1 |
| 8 | ಠೇವಣಿಯನ್ನು ಒಂದು ನಿಗಧಿತ ಅವಧಿಗೆ ಇಡಬಹುದಾದ ಬ್ಯಾಂಕ್ ಖಾತೆ.<br><br>D. ನಿಶ್ಚಿತ ಠೇವಣಿ ಖಾತೆ | |
| II. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.<br><br>ಜೆ.ಎಸ್.ಮಿಲ್ ಬರವಣಿಗೆ ಭಾರತೀಯರ ಮೇಲೆ ಹೇಗೆ ಪ್ರಭಾವ ಬೀರಿತು? | 1 |
| 9. | ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ತಂದಿತು | |
| 10. | ಮೊದಲನೇ ಆಂಗ್ಲೋ–ಮೈಸೂರು ಯುದ್ಧವು ಕೊನೆಗೊಂಡ ಒಪ್ಪಂದ ಯಾವುದು?<br><br>ಮದ್ರಾಸ್ ಶಾಂತಿ ಒಪ್ಪಂದ | 1 |
| 11. | ಭಯೋತ್ಪಾದನೆ ಎಂದರೇನು?<br><br>ತಮ್ಮ ಉದ್ದೇಶ ಪೂರೈಕೆಗಾಗಿ ಭಯದ ವಾತಾವರಣ ಸೃಷ್ಟಿಸುವ ಉದ್ದೇಶ ಹೊಂದಿದ ರಾಜಕೀಯ ತಂತ್ರಗಾರಿಕೆ | 1 |
| 12. | "ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ" ಎಂದವರು ಯಾರು?<br><br>ಮಹಾತ್ಮ ಗಾಂಧಿಜೀ | 1 |
| 13. | ನೈರುತ್ಯ ಮಾನ್ಸೂನ್ ಮಾರುತದ ಎರಡು ಶಾಖೆಗಳನ್ನು ಹೆಸರಿಸಿ.<br><br>ನೈರುತ್ಯ ಮಾನ್ಸೂನ್ ಮಾರುತದ ಎರಡು ಶಾಖೆಗಳೆಂದರೆ<br>1.ಅರಬ್ಬಿ ಸಮುದ್ರ ಶಾಖೆ<br>2.ಬಂಗಾಳ ಕೊಲ್ಲಿ ಶಾಖೆ | 1 |
| 14. | ಗಣಿಗಾರಿಕೆ ಪ್ರದೇಶಗಳಲ್ಲಿ ಭೂ ಕುಸಿತ ಅಧಿಕವಾಗಿರುತ್ತದೆ,ಏಕೆ?<br><br>ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆಯುವುದರಿಂದ ಅಧಿಕ ಭೂ ಕುಸಿತವಾಗುತ್ತದೆ | 1 |

| | | |
|---|---|---|
| 15. | ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.<br><br>ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳೆಂದರೆ<br>1.ಜಿಲ್ಲಾ ಪಂಚಾಯಿತಿ<br>2. ತಾಲ್ಲೂಕು ಪಂಚಾಯತಿ<br>3.ಗ್ರಾಮ ಪಂಚಾಯಿತಿ. | 1 |
| 16. | ಬ್ಯಾಂಕ್ ಎಂದರೇನು?<br><br>ಹಣದ ವ್ಯವಹಾರಗಳು ನಡೆಯುವ ಸಂಸ್ಥೆ | 1 |
| III. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲಿ/ಅಂಶಗಳಲ್ಲಿ ಉತ್ತರಿಸಿ. | |
| 17. | ಸ್ವಾಮಿ ವಿವೇಕಾನಂದರು ಯುವ ಶಕ್ತಿಗೆ ಪ್ರೇರಕರಾಗಿದ್ದರು,ಹೇಗೆ?<br>➢ 1893 ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗಿ<br>➢ ಎಲ್ಲಾ ಧರ್ಮಗಳು ಸಮಾನ ಎಂದು ಸಾರಿದರು<br>➢ ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಪರಿಚಯಿಸಿದರು<br>➢ ಯುವ ಶಕ್ತಿಯ ಮೇಲೆ ಅಪರ ನಂಬಿಕೆ | 2 |
| 18. | ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮುಕ್ತಗೊಳಿಸಲಾಯಿತು?<br>➢ ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರ ಹೋರಾಟ<br>➢ ಪೋರ್ಚುಗೀಸರಿಂದ ತೀವ್ರ ವಿರೋಧ<br>➢ ಪೋರ್ಚುಗೀಸರು ಅನ್ಯ ರಾಷ್ಟ್ರಗಳಿಂದ ಸೇನಾ ತುಕಡಿ ತರಿಸಿಕೊಂಡರು<br>➢ ಗೋವಾ ವಿಮೋಚನಾ ಚಳುವಳಿ ಆರಂಭ<br>➢ 1961 ರಲ್ಲಿ ಭಾರತೀಯ ಸೈನ್ಯದಿಂದ ಗೋವಾ ವಶ<br>➢ 1987 ರ ವರೆಗೂ ಗೋವಾ ಕೇಂದ್ರಾಡಳಿತ ಪ್ರದೇಶ | 2 |
| 19. | ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ತಿಳಿಸಿ.<br>➢ ಬಡತನ<br>➢ ನಿರುದ್ಯೋಗ<br>➢ ಅನಕ್ಷರತೆ<br>➢ ಕಡಿಮೆ ತಲಾ ಆದಾಯ<br>➢ ಕಡಿಮೆ ರಾಷ್ಟ್ರೀಯ ಆದಾಯ<br>➢ ಅನಾರೋಗ್ಯ<br>ಅಥವಾ | 2 |

| | | |
|---|---|---|
| 20. | ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಮುಖ ಉದ್ದೇಶಗಳಾವುವು?<br>➢ ಕೃಷಿ ಅಭಿವೃದ್ಧಿ<br>➢ ಪೌಷ್ಟಿಕ ಆಹಾರ ಒದಗಿಸುವಿಕೆ<br>➢ ಜಾಗತಿಕ ಹಸಿವೆಯಿಂದ ಮುಕ್ತಿ<br>➢ ಗ್ರಾಮೀಣ ಜನರ ಜೀವನ ಸುಧಾರಣೆ<br><br>ಅಸಂಘಟಿತ ದುಡಿಮೆಗಾರರು ಎದುರಿಸುತ್ತಿರುವ ಸವಾಲುಗಳು ಯಾವುವು?<br>➢ ನಿರ್ದಿಷ್ಟ ಕಾಯ್ದೆ ಕಾನೂನುಗಳಿರುವುದಿಲ್ಲ.<br>➢ ನಿರ್ದಿಷ್ಟ ಸಮಯವಿರುವುದಿಲ್ಲ.<br>➢ ನಿರ್ದಿಷ್ಟ ಸ್ಥಳವಿರುವುದಿಲ್ಲ.<br>➢ ನಿರ್ದಿಷ್ಟ ವೇತನವಿರುವುದಿಲ್ಲ.<br>➢ ಆರೋಗ್ಯ ಸೌಲಭ್ಯವಿರುವುದಿಲ್ಲ.<br>➢ ಅಧಿಕಾರ ಶ್ರೇಣಿ ವ್ಯವಸ್ಥೆ ಇಲ್ಲ.<br>➢ ಉದ್ಯೋಗ ಭರವಸೆ ಇಲ್ಲ.<br>➢ ವಿಶೇಷ ಭತ್ಯೆ ಸೌಲಭ್ಯವಿರುವುದಿಲ್ಲ.<br>➢ ಬಾಲಕಾರ್ಮಿಕತನ<br>➢ ಮಾನಸಿಕ ಮತ್ತು ದೈಹಿಕ ಶೋಷಣೆ<br><br>ಅಥವಾ<br><br>ದೊಂಬಿಯ ಸ್ವರೂಪವನ್ನು ಬರೆಯಿರಿ.<br>➢ ದೊಂಬಿ ವಿನಾಶಕಾರಕ ಜನರ ಗುಂಪು<br>➢ ಆಕ್ರಮಣಕ್ಕೆ ನಿಶ್ಚಿತ ಗುರು ಇರುವುದಿಲ್ಲ<br>➢ ಉದಾಹರಣೆ–ಕೋಮುಗಲಭೆ,ಜನಾಂಗಿಯ ಕಲಹ<br>➢ ಕಾನೂನು ಸುವ್ಯವಸ್ಥೆಗೆ ಗಂಭೀರ ಸವಾಲು<br>➢ ಅಪಾರವಾದ ಹಾನಿ<br>➢ ದೊಂಬಿ ನಗರ ಪ್ರದೇಶಗಳಲ್ಲಿ ಅಧಿಕ | 2 |
| 21. | ಭಾರತದ ಪ್ರಮುಖ ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.<br>➢ ಕಾಜಿರಂಗ ನ್ಯಾಷನಲ್ ಪಾರ್ಕ್ (ಅಸ್ಸಾಂ)<br>➢ ಸುಂದರಬನ (ಪಶ್ಚಿಮ ಬಂಗಾಳ)<br>➢ ಗಿರ್ ನ್ಯಾಷನಲ್ ಪಾರ್ಕ್ (ಗುಜರಾತ್)<br>➢ ಕನ್ಹಾ ನ್ಯಾಷನಲ್ ಪಾರ್ಕ್ (ಮಧ್ಯ ಪ್ರದೇಶ)<br>➢ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್(ಕರ್ನಾಟಕ) | 2 |

| | | |
|---|---|---|
| 22. | ಕಲ್ಲಿದ್ದಲಿನ ನಾಲ್ಕು ವಿಧಗಳನ್ನು ತಿಳಿಸಿ.<br>➢ 1.ಅಂತ್ರಸೈಟ್<br>➢ 2.ಬಿಟುಮಿನಸ್<br>➢ 3.ಲಿಗ್ನೈಟ್<br>➢ 4.ಪೀಟ್ | 2 |
| 23. | ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?<br>➢ ಸಾವಯವ ಕೃಷಿ ಪದ್ಧತಿ<br>➢ ಜೈವಿಕ ಗೊಬ್ಬರ ಬಳಕೆ<br>➢ ಉತ್ತಮ ಬತ್ತನೆ ಬೀಜಗಳ ಬಳಕೆ<br>➢ ಜೈವಿಕ ಕ್ರಿಮಿನಾಶಕಗಳ ಬಳಕೆ | 2 |
| 24. | ಗ್ರಾಹಕ ಹಕ್ಕುಗಳನ್ನು ಪಟ್ಟಿ ಮಾಡಿ.<br>➢ ವಸ್ತುಗಳ ಆಯ್ಕೆಯ ಹಕ್ಕು<br>➢ ಮಾಹಿತಿ ಪಡೆಯುವ ಹಕ್ಕು<br>➢ ವಸ್ತುಗಳ ಆಯ್ಕೆಯ ಹಕ್ಕು<br>➢ ಶೋಷಣೆಯ ವಿರುದ್ಧದ ಹಕ್ಕು<br>➢ ಗ್ರಾಹಕ ಶಿಕ್ಷಣದ ಹಕ್ಕು | 2 |
| IV. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ. | |
| 25. | ಭಾರತದಲ್ಲಿ ಬ್ರಿಟಿಷ್ ಕಂದಾಯ ನೀತಿಗಳಿಂದ ಉಂಟಾದ ಪರಿಣಾಮಗಳಾವುವು?<br>➢ ರೈತರ ಶೋಷಣೆ<br>➢ ಜಮೀನ್ದಾರಿ ವರ್ಗ ಉಗಮ<br>➢ ಭೂಮಿ ಮಾರಾಟದ ವಸ್ತುವಾಯಿತು<br>➢ ಕೃಷಿ ಕ್ಷೇತ್ರ ವಾಣಿಜ್ಯೀಕರಣ<br>➢ ಇಂಗ್ಲೆಂಡಿನ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಮಾತ್ರ ಬೆಳೆಯಬೇಕಾಯಿತು<br>➢ ಹಣದ ಲೇವಾದೇವಿಗಾರರು ಬಲಿಷ್ಠರಾದರು<br>➢ ರೈತರು ನಿರ್ಗತಿಕರಾದರು | 3 |
| 26. | ದೋಂಡಿಯಾ ವಾಘ್ ಬ್ರಿಟೀಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ.<br>➢ ದೋಂಡಿಯಾ ಚನ್ನಗಿರಿಯ ಮಾರಾಠ ಕುಟುಂಬದಲ್ಲಿ ಜನನ<br>➢ ಹೈದರಾಲಿಯ ಸೈನ್ಯದಲ್ಲಿ ಅಶ್ವರೋಹಿ ಸೈನಿಕ<br>➢ ಟಿಪ್ಪುವಿನೊಂದಿಗೆ ಮನಸ್ತಾಪದಿಂದ ಸೆರೆಮನೆಗೆ | 3 |

- ನಾಲ್ಕನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಬಡುಗಡೆ
- ಟಿಪ್ಪುವಿನ ಅತೃಪ್ತ ಸೈನಿಕರನ್ನು ಸೇರಿಸಿ ಸೈನ್ಯ ಕಟ್ಟಿದನು
- ಶಿವಮೊಗ್ಗ ಮತ್ತು ಬಿದನೂರಿನ ಕೋಟೆ ವಶ
- ಚಿತ್ರದುರ್ಗ ಕೋಟೆ ವಶಕ್ಕೆ ವಿಫಲ ಯತ್ನ
- ಬ್ರಿಟಿಷರಿಂದ ತೀವ್ರ ಹೋರಾಟ
- ದೋಂಡಿಯಾ ನಿಯಂತ್ರಣದಲ್ಲಿದ್ದ ಶಿವಮೊಗ್ಗ,ಹೊನ್ನಾಳಿ,ಹರಿಹರ ಮತ್ತು ಶಿಕಾರಿಪುರ ಬ್ರಿಟಿಷರ ವಶ
- ಮರಾಠ ಮತ್ತು ನಿಜಾಮರು ದೊಂಡಿಯಾ ವಿರುದ್ಧ ಹೋರಾಟ
- ಫ್ರೆಂಚರಿಂದ ಸಹಾಯ ಹಸ್ತ
- ಆದರೂ ಬ್ರಟಿಷರ ವಿರುದ್ಧ ಸೋಲು
- ಕೋನ್‌ಗಲ್ ಎಂಬಲ್ಲಿ ಹತ್ಯೆ

ಅಥವಾ

ಮಾರ್ತಾಂಡ ವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು?

- ವೈನಾಡಿನ ರಾಜ ಮಾರ್ತಾಂಡ ವರ್ಮ
- 24 ನೇ ವಯಸ್ಸಿಗೆ ಮಾರ್ತಾಂಡ ವರ್ಮ ಅಧಿಕಾರಕ್ಕೆ ಬಂದನು
- 50 ಸಾವಿರ ಸಂಖ್ಯೆಯ ಸೈನ್ಯವನ್ನು ಕಟ್ಟಿದನು
- ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸಿದ ಡಚ್ಚರ ವಿರುದ್ಧ ಹೋರಾಟ
- ಡಚ್ಚರ ವಿರುದ್ಧ ಸುತ್ತಮುತ್ತಲ ಪಾಳೆಗಾರರ ಜೊತೆಗೂಡಿ ದಾಳಿ
- ನೆಡುಮಂಗಡ ಮತ್ತು ಕೊಟ್ಟಾರಕರ ವ್ಯಾಪಾರ ಕೇಂದ್ರಗಳ ವಶ
- “ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು” ಎಂದು ಪತ್ರ ಬರೆದನು
- 1741ರಲ್ಲಿ ಡಚ್ಚರು ತಿರುವಾಂಕೂರಿನ ಮೇಲೆ ಯುದ್ದ
- ಅಂತಿಮವಾಗಿ ಯುದ್ಧದಲ್ಲಿ ಮಾರ್ತಾಂಡ ವರ್ಮನಿಗೆ ಜಯ
- ಇಡೀ ದಕ್ಷಿಣ ಭಾರತದಿಂದ ಡಚ್ಚರ ಓಡಿಸಲು ಪಣ
- ಕೇರಳ ಮತ್ತು ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರ ಹಕ್ಕು ಸ್ಥಾಪಿಸಿದ
- ಡಚ್ಚರ ಹಿಡಿತದ ಬಂದರುಗಳ ವಶ
- ಅಂತಿಮವಾಗಿ 1753ರ ಒಪ್ಪಂದ ಪ್ರಕಾರ ಡಚ್ಚರು ಸಂಪೂರ್ಣ ಅಧಿಕಾರ ತಿರುವಂಕೂರಿಗೆ ಒಪ್ಪಿಸಿ ಶರಣಾದವು

27. “ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು” ಹೇಗೆ ?

- ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿ
- ಜರ್ಮನಿಯಲ್ಲಿ ರಾಜಕೀಯ ಪಕ್ಷಗಳ ನಿಷೇಧ
- ನಾಜಿ ಪಕ್ಷ ಜರ್ಮನಿಯ ಏಕೈಕ ಪಕ್ಷವೆಂದು ಘೋಷಣೆ 3
- ಯೆಹೂದಿಗಳ ವಿರುದ್ಧ ಮಾರಣಹೋಮ

| | | |
|---|---|---|
| | ➢ ಆರ್ಮನ್ ಜನಾಂಗ ಮಾತ್ರ ಆಳಲು ಯೋಗ್ಯರು ಉಳಿದವರು ಆಳಿಸಿಕೊಳ್ಳಲು ಮಾತ್ರ ಯೋಗ್ಯರು ಎಂದು ಘೋಷಣೆ<br>➢ ಗೊಬೆಲ್ಸ್– ಜನಾಂಗೀಯ ದ್ವೇಷವನ್ನು ಹರಡುವ ಮಂತ್ರಿ ನೇಮಕ<br>➢ ಬೂದು ಅಂಗಿದಳ ಕ್ರೌರಪಡೆ ರಚನೆ<br>➢ ಹೊಲೊಕಸ್ಟ್–ಸಾಮೂಹಿಕ ಕಗ್ಗೊಲೆ<br>➢ 1935ರಲ್ಲಿ ನ್ಯೂರೆಂಬರ್ಗ್ ಕಾನೂನು ಜಾರಿ<br>➢ ಸುಮಾರು 60 ಲಕ್ಷ ಯೆಹೂದಿಗಳು,ಒಂದು ಕೋಟಿಗೂ ಹೆಚ್ಚು ಇತರೆ ಜನರ ಕೊಲೆ<br>➢ ಸಾಮೂಹಿಕ ನರಮೇದ | |
| 28. | ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.<br>➢ ಭಾರತ ರಷ್ಯಾ ದೇಶದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ<br>➢ ಭಾರತ ಅಲಿಪ್ತ ನೀತಿ ಹೊಂದಿದ್ದರೂ ಕೂಡ ಭಾರತ ಮತ್ತು ರಷ್ಯಾ ಹದಗೆಡಲ್ಲಿಲ್ಲ<br>➢ ಭಾರತ–ಸೋವಿಯತ್ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು.<br>➢ 1961 ರಲ್ಲಿ ಗೋವಾ ವಿಮೋಚನೆಗೆ ಬೆಂಬಲ<br>➢ 1962ರಲ್ಲಿನ ಚೈನಾ ದಾಳಿ ರಷ್ಯಾ ಖಂಡಿಸಿತ್ತು.<br>➢ 1966ರ ತಾಷ್ಕೆಂಟಿನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.<br>➢ 1971 ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ<br>➢ ಭಾರತದ ಭಿಲ್ಲಾ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸೋವಿಯತ್ ರಷ್ಯಾ ಸಹಕಾರ<br>➢ ನಮ್ಮ ರಾಷ್ಟ್ರದ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ರಷ್ಯಾದಿಂದ ಹೆಚ್ಚಿನ ನೆರವು ಪಡೆದಿದ್ದೇವೆ.<br>➢ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ. | 3 |
| 29. | ಬಾಲ್ಯ ವಿವಾಹಕ್ಕೆ ಕಾರಣಗಳನ್ನು ತಿಳಿಸಿ.<br>➢ ಲಿಂಗ ತಾರತಮ್ಯ<br>➢ ಬಡತನ<br>➢ ಅನಕ್ಷರತೆ<br>➢ ಬಾಲಕಾರ್ಮಿಕತೆ<br>➢ ಮಕ್ಕಳ ಕಳ್ಳಸಾಗಾಣಿಕೆ | 3 |

| | | |
|---|---|---|
| | ➢ ಅರ್ಧದಲ್ಲೇ ಶಾಲೆ ಬಿಡುವುದು<br>➢ ಕಾನೂನಿನ ಅರಿವು ಕೊರತೆ<br>➢ ಸಾರ್ವಜನಿಕ ಅಸಹಕಾರ | |
| 30. | ಮಣ್ಣಿನ ಸವೆತ ಎಂದರೇನು? ಮಣ್ಣಿನ ಸವೆತಕ್ಕೆ ಕಾರಣಗಳನ್ನು ತಿಳಿಸಿ.<br>➢ ಭೂ ಮೇಲ್ಮೈ ಮಣ್ಣು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆ<br>ಮಣ್ಣಿನ ಸವೆತಕ್ಕೆ ಕಾರಣಗಳೆಂದರೆ<br>➢ ಅರಣ್ಯ ನಾಶ<br>➢ ಹೆಚ್ಚು ಮೇಯಿಸುವುದು<br>➢ ಅವೈಜ್ಞಾನಿಕ ಬೇಸಾಯ<br>➢ ಅಧಿಕ ನೀರಿನ ಬಳಕೆ<br>➢ ಮಾನವನ ಕೃತ್ಯಗಳು | 3 |
| 31. | ಗೋಧಿ ಬೆಳೆಯಲು ಅವಶ್ಯಕವಾಗಿರುವ ಅಂಶಗಳನ್ನು ಬರೆಯಿರಿ ಮತ್ತು ಅದರ ಹಂಚಿಕೆ ತಿಳಿಸಿ.<br>➢ 10–15$^0$ ಉಷ್ಣಾಂಶ<br>➢ 50–70 ಸೇ.ಮಿ ಮಳೆ<br>➢ ಮರಳು ಮಿಶ್ರಿತ ಜೇಡಿಮಣ್ಣು<br>➢ ಹಂಚಿಕೆ–ಪಂಜಾಬ್,ಹರಿಯಾಣ,ಉತ್ತರ ಪ್ರದೇಶ,ಮಧ್ಯಪ್ರದೇಶ,ಬಿಹಾರ<br>➢ ಪಂಜಾಬ್–ಗೋಧಿಯ ಕಣಜ<br>➢ ಉತ್ತರ ಪ್ರದೇಶ–ಉತ್ಪದನೆಯಲ್ಲಿ ಪ್ರಥಮ ಸ್ಥಾನ<br><br>ಅಥವಾ<br><br>ಭಾರತದ ಪ್ರಮುಖ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಪಟ್ಟಿ ಮಾಡಿ.<br>➢ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಬೆಂಗಳೂರು)<br>➢ ಇಂದಿರಾ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ದೆಹಲಿ)<br>➢ ಸಹರಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಮುಂಬೈ)<br>➢ ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಚನ್ನೈ)<br>➢ ಸುಭಾಷ್ ಚಂದ್ರಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಕಲ್ಕತಾ)<br>➢ ರಾಜೀವ್ ಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಹೈದರಾಬಾದ್)<br>➢ ಸರ್ದಾರ್ ವಲಭಬಾಯ್ ಪಟೇಲ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ(ಅಲಹಬಾದ್)<br>➢ ವೀರ ಸಾರ್ವಕರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ(ಪೋರ್ಟ್‌ಬ್ಲೇರ್) | 3 |

| | | |
|---|---|---|
| 32. | ಭಾರತದಲ್ಲಿ ಗ್ರಾಮಿಣಾಭಿವೃದ್ಧಿಯು ಮಹತ್ವವಾದದು,ಹೇಗೆ?<br>➢ ರಸ್ತೆ ನಿರ್ಮಾಣ<br>➢ ಚರಂಡಿ ನಿರ್ಮಾಣ<br>➢ ಕುಡಿಯುವ ನೀರು<br>➢ ಬೀದಿ ದೀಪ<br>➢ ಶೌಚಾಲಯ ನಿರ್ಮಾಣ<br>➢ ಶಾಲೆ & ಆಸ್ಪತ್ರೆ ಕಟ್ಟಡ ನಿರ್ಮಾಣ<br>➢ ಸ್ಥಳೀಯ ಮಾರುಕಟ್ಟೆ ನಿರ್ವಹಣೆ<br>➢ ಕೃಷಿ,ಪಶು ಸಂಗೋಪನೆ ಅಭಿವೃದ್ಧಿ<br>➢ ಗ್ರಂಥಾಲಯ ಸೌಲಭ್ಯ<br>➢ ಪಡಿತರ ವ್ಯವಸ್ಥೆ<br>➢ ಸುವರ್ಣ ಗ್ರಾಮೋದಯ ಯೋಜನೆ<br>➢ ವಸತಿ ಯೋಜನೆಗಳು<br>➢ ಎಸ್ ಸಿ,ಎಸ್ ಟಿ,ದುರ್ಬಲರು ಮತ್ತು ಮಹಿಳೆಯರಿಗೆ ಸರ್ಕಾರದ ಸೌಲಭ್ಯ ಒದಗಿಸಿವುದು.<br><br>ಅಥವಾ<br><br>ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರ್ವಜನಿಕ ಹಣಕಾಸಿನ ಪಾತ್ರ ಮಹತ್ವವಾದದು,ವಿಶ್ಲೇಷಿಸಿ.<br>➢ ಆರ್ಥಿಕ ಸ್ಥಿರತೆ<br>➢ ಆರ್ಥಿಕ ಅಭಿವೃದ್ಧಿ<br>➢ ಉದ್ಯೋಗ ಸೃಷ್ಟಿ<br>➢ ಕೃಷಿ ಅಭಿವೃದ್ಧಿ<br>➢ ಕೈಗಾರಿಕಾ ಅಭಿವೃದ್ಧಿ<br>➢ ಮೂಲ ಸೌಕರ್ಯಗಳ ವಿಸ್ತರಣೆ<br>➢ ಬಡತನ ನಿವಾರಣೆ<br>➢ ನೈಸರ್ಗೀಕ ಸಂಪನ್ಮೂಲಗಳ ಸದ್ಬಳಕೆ | 3 |
| 33. | ಪ್ರಸ್ತುತ ದಿನಗಳಲ್ಲಿ ಬ್ಯಾಂಕ್‌ಗಳು ನಿರ್ವಹಿಸುವ ಕಾರ್ಯಗಳು ವಿಸ್ತಾರಗೊಂಡಿವೆ,ಸಮರ್ಥಿಸಿ<br>➢ ಹಣದ ಉಳಿತಾಯ<br>➢ ಠೇವಣಿಗಳ ಅಂಗೀಕಾರ | 3 |

| | | | |
|---|---|---|---|
| | ➢ ಸಾಲಗಳನ್ನು ಕೊಡುವುದು.<br>➢ ಹಣದ ವರ್ಗಾವಣೆ.<br>➢ ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು<br>➢ ಹುಂಡಿಗಳ ಸೋಡಿ<br>➢ ಭದ್ರತಾ ಕಪಾಟುಗಳ ಸೌಲಭ್ಯ<br>➢ ವಿದೇಶಿ ವಿನಿಮಯದ ವ್ಯವಹಾರಗಳು<br>➢ ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿನಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.<br>➢ ಸಾಲಪತ್ರಗಳನ್ನು ನೀಡುವುದು<br>➢ ಸರ್ಕಾರದ (ಕೇಂದ್ರ ಹಾಗೂ ರಾಜ್ಯ) ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು<br><br>ಅಥವಾ<br><br>ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರ ಮಹತ್ವವಾದದು,ವಿಶ್ಲೇಷಿಸಿ.<br>➢ ಉದ್ದಿಮೆ ಸ್ಥಾಪಿಸಲು ಯೋಜನೆ ತಯಾರಿ<br>➢ ಯಂತ್ರಗಳ ಬಗ್ಗೆ ಮಾಹಿತಿ<br>➢ ಹೊಸ ಕೈಗಾರಿಕಾ ಪ್ರದೇಶ ರಚನೆ<br>➢ ಕಚ್ಚಾಪದಾರ್ಥಗಳ ಹಂಚಿಕೆ<br>➢ ಹಣಕಾಸಿನ ನೆರವು<br>➢ ಸಾಧನ ಸಲಕರಣೆಗಳ ಗುತ್ತಿಗೆ<br>➢ ಉದ್ದಿಮೆಗಳ ಆಧಿನಿಕರಣ<br>➢ ರಫ್ತು ಸಹಾಯ<br>➢ ಅತಂತ್ರ ಉದ್ದಿಮೆಗಳಿಗೆ ಸಹಾಯ<br>➢ ಅಸಂಪ್ರಾದಾಯಕ ಶಕ್ತಿ ಸಾಧನಗಳ ಬಳಕೆಗೆ ಉತ್ತೇಜನ | | |
| V. | ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ | | |
| 34. | ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.<br>➢ ತಿಲಕರು ತೀವ್ರವಾದಿಗಳಲ್ಲಿ ಪ್ರಮುಖರಾದವರು.<br>➢ 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂಬ ಘೋಷಣೆ | 4 | |

- ಈ ಘೋಷಣೆಯ ಮೂಲಕ ಬಹುಸಂಖ್ಯಾತ ಭಾರತೀಯರ ಮನದಾಳದ ಭಾವನೆಯನ್ನು ಹೊರಹಾಕಿದರು.
- ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಸಂಘಟಿಸುವ ಪ್ರಯತ್ನ
- ಧಾರ್ಮಿಕ ಆಚರಣೆಗಳ ಮೂಲಕ ಜನರನ್ನು ಸಂಘಟಿಸಿ ಬ್ರಿಟಿಷ್ ವಿರೋಧಿ ಹೋರಾಟಕ್ಕೆ ಅವರನ್ನು ಸಜ್ಜು
- ಗಣೇಶ, ಶಿವಾಜಿ, ದುರ್ಗಾ ಮುಂತಾದ ಉತ್ಸವಗಳ ಆರಂಭ
- ಮರಾಠಿ ಭಾಷೆಯಲ್ಲಿ 'ಕೇಸರಿ' ಮತ್ತು ಇಂಗ್ಲಿಷ್ ಭಾಷೆಯಲ್ಲಿ 'ಮರಾಠ' ಪತ್ರಿಕೆಗಳ ಸ್ಥಾಪನೆ
- ಈ ಪತ್ರಿಕೆಗಳ ಮೂಲಕ ಜನಸಾಮಾನ್ಯರನ್ನು ರಾಷ್ಟ್ರೀಯ ಹೋರಾಟಕ್ಕೆ ಪ್ರೇರೇಪಿಸಿದರು.
- ಅವರ ಕ್ರಾಂತಿಕಾರಕ ಬರವಣಿಗೆಗಳು ಜನರನ್ನು ಕೆರಳಿಸಿದವು.
- ಈ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿತು.
- ಜೈಲಿನಲ್ಲಿ ತಿಲಕರು 'ಗೀತಾರಹಸ್ಯ' ಗ್ರಂಥ ರಚನೆ
- ಈ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು

ಅಥವಾ

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರು ಹೇಗೆ ತಮ್ಮ ಪಾತ್ರವನ್ನು ವಹಿಸಿದರು?

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪಾತ್ರ


ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತ ಪ್ರತಿಭಟನೆಗಳು ಕೂಡಾ ಪ್ರಮುಖವಾಗಿವೆ.

- ಯುರೋಪಿಯನ್ ಪ್ಲಾಂಟರ್ ವಿರುದ್ಧ ರೈತರ ದಂಗೆ
- ಚಂಪಾರಣ್ಯ ನೀಲಿ ಬೆಳೆಗಾರರ ದಂಗೆ
- ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪ್ರಭಾವದಿಂದ ಮಲಬಾರ್ ತೇಭಾಗ್‌ದಲ್ಲಿ ರೈತರ ದಂಗೆ
- ರಜಕಾರರ ವಿರುದ್ಧ ತೆಲಂಗಾಣ ರೈತರ ದಂಗೆ
- ಜಮಿನ್ದಾರರ ವಿರುದ್ಧ ಬಂಗಾಳ ರೈತರ ದಂಗೆ
- ಕಡಿಮೆ ಕೂಲಿ ವಿರುದ್ದ ಮಹಾರಾಷ್ಟ್ರ ರೈತರ ದಂಗೆ
- ಅಸಹಕಾರ, ಕರ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ರೈತರ ಸಮಸ್ಯೆ ಬೆರೆತವು
- ಕಿಸಾನ್ ಸಭಾದಡಿಯಲ್ಲಿ ರೈತರ ಸಂಘಟನೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕಾರ್ಮಿಕರ ಪಾತ್ರ

- ಕಾರ್ಮಿಕರ ಹೋರಾಟವು 1827ರಲ್ಲಿ ಕಲ್ಕತ್ತದಲ್ಲಿ ಆರಂಭ

| | | |
|---|---|---|
| | ➢ ಸೆಣಬು, ಬಟ್ಟೆಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾಗತೊಡಗಿದರು.<br>➢ ರೈಲ್ವೆ ಕೂಲಿಗಳು ನಿಲ್ದಾಣದಲ್ಲಿ ಮುಷ್ಕರ ನಡೆಸಿ ಹೆಚ್ಚಿನ ಕೂಲಿಗಾಗಿ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ಘೋಷಣೆ<br>➢ ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್‌ನವರು ಮತ್ತು ಬಾಂಬೆ ಬಟ್ಟೆ ಗಿರಣಿಯ ಕಾರ್ಮಿಕರು ರಾಷ್ಟ್ರೀಯ ಜಾಗೃತಿ<br>➢ ಮದ್ರಾಸ್‌ನಲ್ಲಿ ಲೇಬರ್ ಯೂನಿಯನ್ ಸ್ಥಾಪನೆಗೊಂಡಿತು.<br>➢ ನಂತರದಲ್ಲಿ ಕಾರ್ಮಿಕ ಸಂಘಟನೆಗಳು ಸ್ಥಾಪನೆಗೊಂಡವು.<br>➢ ಕಾಂಗ್ರೆಸ್ ಕಾರ್ಮಿಕ ಸಂಘಟನೆಗಳ ಚಳವಳಿಗೆ ಬೆಂಬಲ<br>➢ ಸ್ವಾತಂತ್ರ ಚಳವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದದ್ದು. | |
| 35. | 1857 ರ ಭಾರತ ಸ್ವಾತಂತ್ರ್ಯ ಸಂಗ್ರಾಮ ನಿರ್ಧಿಷ್ಟ ಗುರಿ ತಲುಪಲು ವಿಫಲವಾಯಿತು,ವಿಶ್ಲೇಷಿಸಿ<br>➢ 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು.<br>➢ ಇದು ಇಡೀ ಭಾರತವನ್ನು ವ್ಯಾಪಿಸಿದ ದಂಗೆಯಾಗಿರಲಿಲ್ಲ<br>➢ ಇದು ಸ್ವಹಿತಾಸಕ್ತಿಗಾಗಿ ನಡೆದ ದಂಗೆಯಾಗಿತ್ತು<br>➢ ಇದು ಯೋಜಿತ ದಂಗೆಯಾಗಿರಲ್ಲಿಲ್ಲ<br>➢ ಬ್ರಿಟಿಷ್ ಸೈನಿಕರಲ್ಲಿನ ಒಗಟ್ಟು<br>➢ ಭಾರತೀಯ ಸೈನಿಕರಲ್ಲಿದ್ದ ಒಡಕು<br>➢ ಸೂಕ್ತ ಮಾರ್ಗದರ್ಶನದ ಕೊರತೆ<br>➢ ಸೂಕ್ತ ಸಂಘಟನೆಯ ಕೊರತೆ<br>➢ ಸೂಕ್ತ ನಾಯಕತ್ವದ ಕೊರತೆ<br>➢ ಭಾರತೀಯರಲ್ಲಿ ಯುದ್ಧ ತಂತ್ರದ ಕೊರತೆ<br>➢ ಭಾರತೀಯ ಸೈನಿಕ ಪರಿಣತಿ, ಶಿಸ್ತಿನ ಕೊರತೆ<br>➢ ಹೋರಾಟಗಾರರಲ್ಲಿ ನಿಶ್ಚಿತ ಗುರಿ ಇರಲಿಲ್ಲ<br>➢ ಹಲವಾರು ದೇಶೀಯ ಸಂಸ್ಥಾನಗಳ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ<br>➢ ಸಿಪಾಯಿಗಳು ಮಾಡಿದಂತಹ ಲೂಟಿ, ದರೋಡೆ ಮೊದಲಾದ ಗಂಭೀರವಾದ ತಪ್ಪುಗಳಿಂದಾಗಿ ಜನರ ವಿಶ್ವಾಸ ಕಳೆದುಕೊಂಡರು. | 4 |
| 36. | ಭಾರತದಲ್ಲಿ ಬಡತನ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ತಳಿಸಿ.<br>➢ ಬಿ.ಪಿ.ಎಲ್ ಕಾರ್ಡ್ ವಿತರಣೆ<br>➢ ಪಂಚವಾರ್ಷಿಕ ಯೋಜನೆಗಳು | |

| | | |
|---|---|---|
| | ➢ ಉತ್ಪಾದನಾ ಹೆಚ್ಚಳ<br>➢ ಸಮರ್ಪಕ ವಿತರಣಾ ವ್ಯವಸ್ಥೆ<br>➢ ಜವಾಹರ ರೋಜ್‌ಗಾರ್ ಯೋಜನೆ<br>➢ ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ<br>➢ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ<br>➢ ಸಂಪತ್ತಿನ ಸಮಾನ ವಿತರಣೆ<br>➢ ಉತ್ತಮ ತೆರಿಗೆ ಪದ್ಧತಿ | 4 |
| 37. | ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿ.<br><br>ಭಾರತದಲ್ಲಿ 8 ಪ್ರಮುಖ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ :<br>➢ 1)ಹೂಗ್ಲಿ–ಕೊಲ್ಕತ ಪ್ರದೇಶ.<br>➢ 2) ಮುಂಬಯಿ–ಪುಣೆ ಪ್ರದೇಶ.<br>➢ 3) ಅಹ್ಮದಾಬಾದ್–ವಡೋದರ ಪ್ರದೇಶ.<br>➢ 4) ಮಧುರೈ–ಕೊಯಮತ್ತೂರು–ಬೆಂಗಳೂರು ಪ್ರದೇಶ.<br>➢ 5) ಛೋಟಾನಾಗಪುರ ಪ್ರಸ್ಥಭೂಮಿ ಪ್ರದೇಶ.<br>➢ 6) ದೆಹಲಿ–ಮೀರತ್ ಪ್ರದೇಶ.<br>➢ 7) ವಿಶಾಖಪಟ್ಟಣ–ಗುಂಟೂರು ಪ್ರದೇಶ.<br>➢ 8) ಕೊಲ್ಲಂ–ತಿರುವನಂತಪುರ ಪ್ರದೇಶ. | 4 |
| VI.38. | ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.<br>A. ಕೊಂಕಣ ತೀರ<br>B.ಹಿರಾಕುಡ್ ವಿವಿದ್ದೋದ್ದೇಶ ನದಿ ಕಣಿವೆ ಯೋಜನೆ<br>C.ಅರಾವಳಿ ಪರ್ವತ ಶ್ರೇಣಿ<br>D.ವಿಶಾಖ ಪಟ್ಟಣ ಬಂದರು.<br> | 5 |

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**
**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================================

**ಅಭ್ಯಾಸ ಪತ್ರಿಕೆ–04**

****************************************************************************************

**ಮಾದರಿ ಉತ್ತರಗಳು**

| ಪ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8** | |
| 1 | **1. ಮೊದಲನೇ ಆಂಗ್ಲೋ – ಮರಾಠ ಯುದ್ಧ ಕೊನೆಗೊಂಡ ಒಪ್ಪಂದ.**<br>A. ಬೆಸ್ಸಿನ್ ಒಪ್ಪಂದ B. ಸಾಲಬಾಯ್ ಒಪ್ಪಂದ<br>C. ಮಂಗಳೂರು ಒಪ್ಪಂದ D. ಮದ್ರಾಸ್ ಒಪ್ಪಂದ<br>ಉತ್ತರ: B. ಸಾಲಬಾಯ್ ಒಪ್ಪಂದ | 1 |
| 2 | **2. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯ ಸ್ಥಾಪಿಸಿದವನು.**<br>A. ಲಾರ್ಡ್ ಡಾಲ್ ಹೌಸಿ B. ವಾರನ್ ಹೇಸ್ಟಿಂಗ್<br>C. ಲಾರ್ಡ್ ಕಾರ್ನ್‌ವಾಲಿಸ್ D. ಲಾರ್ಡ್ ವಿಲಿಯಂ ಬೆಚಿಟಂಗ್<br>ಉತ್ತರ: B. ವಾರನ್ ಹೇಸ್ಟಿಂಗ್ | 1 |
| 3 | **3. ವಿಶ್ವಸಂಸ್ಥೆಯ 'ಸಚಿವ ಸಂಪುಟ' ಎಂದು ಕರೆಯುವ ಅಂಗ.**<br>A. ಸಾಮಾನ್ಯ ಸಭೆ B. ಸಚಿವಾಲಯ<br>C. ಭದ್ರತಾ ಸಮಿತಿ D. ಧತ್ತಿ ಸಮಿತಿ<br>ಉತ್ತರ: C. ಭದ್ರತಾ ಸಮಿತಿ | 1 |
| 4 | **4. ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆಯನ್ನು ಜಾರಿಗೊಳಿಸಿದ ವರ್ಷ**<br>A. 1955 B. 1965<br>C. 1976 D. 1986<br>ಉತ್ತರ: C. 1976 | 1 |
| | | 1 |

| | | |
|---|---|---|
| 5 | **5. ಅಸಂಘಟಿತ ಕಾರ್ಮಿಕರಿಗೆ ಉದಾಹರಣೆ.**<br>A. ಕೃಷಿ ಕಾರ್ಮಿಕರು B. ಶಿಕ್ಷಕರು<br>C. ಬ್ಯಾಂಕ್ ಉದ್ಯಮಿ D. ಪೊಲೀಸ್<br>ಉತ್ತರ: A. ಕೃಷಿ ಕಾರ್ಮಿಕರು | 1 |
| 6 | **6. ಭಾರತದಲ್ಲಿಯೇ ಅತ್ಯಂತ ಉದ್ದವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ.**<br>A. ಭಾಕ್ರಾ-ನಂಗಲ್ B. ಹಿರಾಕುಡ್<br>C. ಕೋಸಿ D. ನಾಗಾರ್ಜುನಾ ಸಾಗರ<br>ಉತ್ತರ: B. ಹಿರಾಕುಡ್ | 1 |
| 7 | **7. ಭಾರತದ ಯೋಜನಾ ಆಯೋಗದ ಬದಲಿಗೆ ಅಸ್ಥಿತ್ವಕ್ಕೆ ಬಂದ ಸಂಸ್ಥೆ**<br>A. ಮಾನವ ಅಭಿವೃದ್ಧಿ ಇಲಾಖೆ B. ಹಣಕಾಸು ಸಚಿವಾಲಯ<br>C. ನೀತಿ ಆಯೋಗ D. ಜಿಲ್ಲಾ ಆಯೋಗ<br>ಉತ್ತರ: C. ನೀತಿ ಆಯೋಗ | 1 |
| 8 | **8. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಬ್ಯಾಂಕು ಖಾತೆ.**<br>A. ಉಳಿತಾಯ ಖಾತೆ B. ಆವರ್ತ ಠೇವಣಿ ಖಾತೆ<br>C. ನಿಶ್ಚಿತ ಠೇವಣಿ ಖಾತೆ D. ಚಾಲ್ತಿ ಖಾತೆ<br>ಉತ್ತರ: D. ಚಾಲ್ತಿ ಖಾತೆ | 1 |
| | **II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 8x1=8** | |
| 9 | 9. 1909ರ ಕಾಯ್ದೆಯು ಒಡೆದು ಆಳುವ ನೀತಿಗೆ ಉದಾಹರಣೆಯಾಗಿದೆ.ಹೇಗೆ?<br>ಮುಸ್ಲಿಂರಿಗೆ ಪ್ರತ್ಯೇಕ ರಾಜಕೀಯ ಪ್ರಾತಿನಿಧ್ಯ ನೀಡುವ "ಪ್ರತ್ಯೇಕ ಚುನಾವಣಾ ಮತಗಟ್ಟೆ" ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. | 1 |
| 10 | 10. 'ಅಭಿನವ ಕಾಳಿದಾಸ' ಎಂಬ ಬಿರುದು ಹೊಂದಿರುವವರು ಯಾರು?<br>ಬಸಪ್ಪ ಶಾಸ್ತ್ರಿ | 1 |
| 11 | 11. ನಿಶ್ಶಸ್ತ್ರೀಕರಣ ಎಂದರೇನು?<br>ನಿಶ್ಶಸ್ತ್ರೀಕರಣ ಎಂದರೆ ನಿರ್ದಿಷ್ಟ ಅಥವಾ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣ ಇಲ್ಲವಾಗಿಸುವ ನೇರ ಪ್ರಕ್ರಿಯೆ | 1 |
| 12 | 12. ಸಾಮಾಜಿಕ ಸ್ತರ ವಿನ್ಯಾಸ ಎಂದರೇನು?<br>ಸಾಮಾಜಿಕ ಸ್ತರವಿನ್ಯಾಸವೆಂದರೆ ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ, ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು-ಕೀಳು ಎಂದು ವಿಂಗಡಿಸುವುದಾಗಿದೆ. | 1 |

| | | |
|---|---|---|
| 13 | 13. ಭಾರತವು ಯಾವ ಬಗೆಯ ವಾಯುಗುಣವನ್ನು ಹೊಂದಿದೆ?<br>ಭಾರತವು ಉಷ್ಣವಲಯದ ಮಾನ್ಸೂನ್ ಮಾದರಿಯ ವಾಯುಗುಣವನ್ನು ಹೊಂದಿದೆ. | 1 |
| 14 | 14. ಚಂಡಮಾರುತಗಳು ಬಂಗಾಳ ಕೊಲ್ಲಿಯಲ್ಲಿಯೇ ಉಂಟಾಗುತ್ತವೆ,ಏಕೆ?<br>ಮೂರು ಕಡೆಗಳಲ್ಲಿ ಭೂಭಾಗವಿದ್ದು ಭೂಮಿ ಸಾಗರ ಭಾಗಗಳ ನಡುವೆ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದು ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಉಂಟಾಗಲು ಕಾರಣವಾಗಿವೆ. | 1 |
| 15 | 15. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.<br>‘ಇಂದಿರಾ ಆವಾಸ್ ಯೋಜನೆ’, ‘ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ ’, ‘ಆಶ್ರಯಯೋಜನೆ. | 1 |
| 16 | 16. ರಾಷ್ಟ್ರೀಯ ಉಳಿತಾಯ ಪತ್ರವನ್ನು ನೀಡುವ ಸಂಸ್ಥೆ ಯವುದು?<br>ಅಂಚೆ ಇಲಾಖೆ | |
| | **III.ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿ.8x2 = 16** | |
| 17 | **17. ಸತ್ಯ ಶೋಧಕ ಸಮಾಜದ ಸಮಾಜದ ಬೋಧನೆಗಳಾವುವು?**<br>ಸತ್ಯ ಶೋಧಕ ಸಮಾಜದ ಸಮಾಜದ ಬೋಧನೆಗಳೆಂದರೆ:<br>• ಸ್ವಾತಂತ್ರ್ಯವಿಲ್ಲದಿದ್ದರೆ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಸಾದ್ಯವಿಲ್ಲ<br>• ಪಾನನಿಷೇಧವನ್ನು ಒತ್ತಾಯಿಸಿತು.<br>• ಸ್ತ್ರೀಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆಯನ್ನು ವಿರೋಧಿಸಿತು.<br>• ಜನರನ್ನು ಶೋಷಿಸುವುದು, ಅಸ್ಪೃಶ್ಯತಾ ಆಚರಣೆಗಳನ್ನು ವಿರೋಧಿಸಿತು.<br>• ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿಯನ್ನು ನಡೆಸಿತು<br>• ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ಶಾಲೆ ತೆರೆದರು.<br>• ಗುಲಾಮಗಿರಿಯನ್ನು ಖಂಡಿಸಿತು.<br>• ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿತು. (ಯಾವುದಾದರೂ ೪) | 2 |
| 18 | **18. ಪಾಂಡಿಚೇರಿಯನ್ನು ಹೇಗೆ ವಿಮುಕ್ತಿಗೊಳಿಸಲಾಯಿತು?**<br>• ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರೈಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು.<br>• ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ಭಾರತಕ್ಕೆ ಸೇರಬೇಕೆಂದು ಹೋರಾಟ ನಡೆಯಿತು.<br>• 1954ರಲ್ಲಿ ಹೋರಾಟದ ಫಲವಾಗಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು.<br>• 1962ರಲ್ಲಿ ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಯಿತು. | 2 |
| 19 | **19. ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳು ಯಾವುವು?**<br>ದ್ವಿತೀಯ ಮಹಾಯುದ್ಧದ ಬಳಿಕ ಎದುರಾದ ಮುಖ್ಯ ಸಮಸ್ಯೆಗಳೆಂದರೆ:<br>• ಮಾನವ ಹಕ್ಕುಗಳ ನಿರಾಕರಣೆ<br>• ಶಸ್ತ್ರಾಸ್ತ್ರಗಳ ಪೈಪೋಟಿ | 2 |

| | | |
|---|---|---|
| | • ಆರ್ಥಿಕ ಅಸಮಾನತೆ<br>• ವರ್ಣಭೇಧ ನೀತಿ<br>• ಭಯೋತ್ಪಾದಕತೆ<br>ಅಥವಾ<br>**ಸಾಮಾನ್ಯ ಸಭೆಯ ರಚನೆಯನ್ನು ಬರೆಯಿರಿ.**<br>ಸಾಮಾನ್ಯ ಸಭೆಯ ರಚನೆ ಹೀಗಿದೆ:<br>• ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ ಇದಾಗಿದೆ.<br>• ಪ್ರತಿಯೊಂದು ಸದಸ್ಯ ರಾಷ್ಟ್ರವು ೫ ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ.<br>• ಆದರೆ ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ.<br>• ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ.<br>• ೧೭ ಉಪಾಧ್ಯಕ್ಷರನ್ನು ಹಾಗೂ ೭ ಸ್ಥಾಯಿ ಸಮಿತಿಗಳಿಗೆ ಏಳು ಮಂದಿ ಅಧ್ಯಕ್ಷರು<br>• ಅಧಿವೇಶನ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಂಡು ಡಿಸಂಬರ್ ಮಧ್ಯಭಾಗದವರೆಗೆ ಜರಗುತ್ತದೆ.<br>• ಎಲ್ಲಾ ಹೆಚ್ಚಿನ ಪ್ರಮುಖ ನಿರ್ಧಾರಗಳಿಗೆ ಮೂರನೇ ಎರಡಂಶದಷ್ಟು ಹಾಜರಾದ ಸದಸ್ಯರ ಅನುಮೋದನೆ ಅವಶ್ಯಕ ಆಗಿರುತ್ತದೆ. (ಯಾವುದಾದರೂ ४) | 2 |
| 20 | **20. ನಿರುದ್ಯೋಗ ಸಮಸ್ಯೆಗೆ ಪರಿಹಾರಗಳೇನು?**<br>ನಿರುದ್ಯೋಗ ಸಮಸ್ಯೆಗೆ ಪರಿಹಾರಗಳೆಂದರೆ:<br>• ಜನಸಂಖ್ಯಾ ನಿಯಂತ್ರಣ ಕ್ರಮಗಳು<br>• ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ<br>• ಕೃಷಿ ಕ್ಷೇತ್ರದ ಅಭಿವೃದ್ಧಿ<br>• ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ<br>• ಶೈಕ್ಷಣಿಕ ಸುಧಾರಣಾ ಯೋಜನೆಗಳು<br>• ಪಂಚವಾರ್ಷಿಕ ಯೋಜನೆಗಳು<br>• ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ<br>• ಗ್ರಾಮೀಣಾಭಿವೃದ್ಧಿ ಯೋಜನೆಗಳು<br>• ಉದ್ಯೋಗ ಖಾತರಿ ಯೋಜನೆ (ಯಾವುದಾದರೂ ४) | 2 |
| | ಅಥವಾ<br>**ಭಾರತದ ಪ್ರಮುಖ ಪರಿಸರ ಚಳುವಳಿಗಳನ್ನು ತಿಳಿಸಿ.**<br>ಭಾರತದ ಪ್ರಮುಖ ಪರಿಸರ ಚಳುವಳಿಗಳೆಂದರೆ:<br>• ಚಿಪ್ಕೋ ಚಳವಳಿ<br>• ಅಪ್ಪಿಕೋ ಚಳವಳಿ<br>• ನರ್ಮದಾ ಆಂದೋಲನ<br>• ಮೌನ ಕಣಿವೆ ಆಂದೋಲನ<br>• ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳವಳಿ<br>• ಕೈಗಾ ವಿರೋಧಿ ಚಳವಳಿ | 2 |

| | | |
|---|---|---|
| 21 | **21. ಮ್ಯಾಂಗ್ರೋವ್ ಅರಣ್ಯಗಳ ಲಕ್ಷಣಗಳನ್ನು ಬರೆಯಿರಿ.**<br>ಮ್ಯಾಂಗ್ರೋವ್ ಅರಣ್ಯಗಳ ಲಕ್ಷಣಗಳು:<br>• ತೀರ ಪ್ರದೇಶಗಳ ತಗ್ಗುವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ.<br>• ನದಿ ಮುಖಜ ಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡು ಬರುತ್ತವೆ.<br>• ಗಂಗಾ, ಮಹಾನದಿ, ಗೋದಾವರಿ,ಕೃಷ್ಣಾನದಿ ಮುಖಜಭೂಮಿಯಲ್ಲಿ ಕಂಡುಬರುತ್ತವೆ.<br>• ಗಂಗಾನದಿಯ ಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವದರಿಂದ ಈ ಪ್ರದೇಶವನ್ನು ಸುಂದರಬನ್ ಎಂದು ಕರೆಯುತ್ತಾರೆ. | 2 |
| 22 | **22. ಭಾರತದಲ್ಲಿ ಉತ್ಪಾದಿಸುವ ಕಬ್ಬಿಣದ ಅದಿರಿನ ವಿಧಗಳನ್ನು ತಿಳಿಸಿ.**<br>ಭಾರತದಲ್ಲಿ ಉತ್ಪಾದಿಸುವ ಕಬ್ಬಿಣದ ಅದಿರಿನ ವಿಧಗಳು:<br>೧) ಮ್ಯಾಗ್ನಟೈಟ್,೨) ಹೆಮಟೈಟ್, ೩) ಲಿಮೊನೈಟ್, ೪) ಸಿಡರೈಟ್ | 2 |
| 23 | **23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ಬರೆಯಿರಿ.**<br>ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳೆಂದರೆ:<br>• ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.<br>• ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.<br>• ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.<br>• ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.<br>• ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು (ಯಾವುದಾದರೂ ೪) | 2 |
| 24 | **24. ಬಳಕೆದಾರರ ಶೋಷಣೆಗೆ ಕಾರಣಗಳಾವುವು?**<br>ಬಳಕೆದಾರರ ಶೋಷಣೆಗೆ ಕಾರಣಗಳೆಂದರೆ:<br>• ಪ್ರಾರಂಭದ ಹಂತದಲ್ಲಿ ಉತ್ಪಾದಕರು ಸೇವೆ ಮತ್ತು ಸರಕುಗಳನ್ನು ಗ್ರಾಹಕರಿಗೆ ನೇರವಾಗಿ ತಲುಪಿಸುತ್ತಿದ್ದರು. ಉದಾಹರಣೆಗೆ: ಹಾಲು, ಹಣ್ಣು, ತರಕಾರಿ ಮುಂತಾದವು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರಲಿಲ್ಲ.<br>• ಬೇಸಾಯದ ಉದ್ಯಮ ಹಲವು ರೀತಿಗಳಲ್ಲಿ ಬೆಳೆದಂತೆ ಮಾರಾಟ ವಿಧಾನವು ಬದಲಾಯಿತು.<br>• ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿ ಇವರಿಬ್ಬರ ನಡುವೆ ನೇರ ವ್ಯವಹಾರ ಇಲ್ಲವಾಯಿತು.<br>• ಉತ್ಪಾದಕರು ಹಾಗೂ ಗ್ರಾಹಕರು ಕೂಡಿ ನಿರ್ಧರಿಸಬೇಕಾದ ಬೆಲೆಯನ್ನು ಮಧ್ಯವರ್ತಿಗಳೇ ನಿರ್ಧರಿಸತೊಡಗಿದರು.<br>• ಇದರಿಂದ ಗ್ರಾಹಕರಿಗೆ ಕಷ್ಟ, ನಷ್ಟ ಮತ್ತು ಸಮಸ್ಯೆಗಳಾದವು. | 2 |
| 25 | **IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲಿ/ಅಂಶಗಳಲ್ಲಿ ಉತ್ತರಿಸಿ. 9 x 3 = 27**<br>**25. ಬ್ರಿಟಿಷ್ ಕಾಲದ ನ್ಯಾಯಾಂಗ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?**<br>ಬ್ರಿಟಿಷ್ ಕಾಲದ ನ್ಯಾಯಾಂಗ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳೆಂದರೆ: | 3 |

| | | |
|---|---|---|
| | • ವಾರನ್ ಹೇಸ್ಟಿಂಗ್ಸ್ 'ದಿವಾನಿ ಅದಾಲತ್' ಮತ್ತು 'ಫೌಜದಾರಿ ಅದಾಲತ್' ನ್ಯಾಯಾಲಯಗಳನ್ನು ಜಾರಿಗೆ ತಂದನು.<br>• ನಾಗರಿಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು<br>• ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು.<br>• ಅಪರಾಧ ಪ್ರಕರಣಗಳಿಗೆ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು.<br>• ಕ್ರಮೇಣ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು.<br>• ನಾಗರಿಕ ನ್ಯಾಯಾಲಯಗಳು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.<br>• ಅಪರಾಧ ನ್ಯಾಯಾಲಯಗಳು 'ಕಾಜಿ'ಗಳ ಅಧೀನದಲ್ಲಿದ್ದವು. | |
| 26 | **26. ಚಿಕ್ಕ ದೇವರಾಜ ಒಡೆಯರ ಕಾಲದ ಸಾಧನೆಗಳು ಅವಿಸ್ಮರಣೆಯವಾದವು,ವಿಶ್ಲೇಷಿಸಿ.**<br>ಚಿಕ್ಕ ದೇವರಾಜ ಒಡೆಯರ ಕಾಲದ ಸಾಧನೆಗಳು:<br>• ಶಿವಾಜಿಯ ಸೇನೆಯನ್ನು ಮಧುರೆ, ಇಕ್ಕೇರಿ ಮತ್ತು ಬಿಜಾಪುರಗಳಲ್ಲಿ ಹಿಮ್ಮೆಟ್ಟಿಸಿದರು.<br>• ಮಾಗಡಿ, ಮಧುಗಿರಿ, ಕೊರಟಗೆರೆ ಮತ್ತಿತರ ಪ್ರಾಂತ್ಯಗಳನ್ನು ವಶಪಡಿಸಿಕೊಂಡರು.<br>• ಬೆಂಗಳೂರನ್ನು ಮೊಗಲರ ಸೇನಾನಿಯಿಂದ ಕೊಂಡುಕೊಂಡರು.<br>• ಕರ್ನಾಟಕ ಕವಿಚಕ್ರವರ್ತಿ, ಅಪ್ರತಿಮ ವೀರ, ತೆಂಕಣರಾಜ, ನವಕೋಟಿ ನಾರಾಯಣ<br>• ಒಂದು ಸಚಿವ ಸಂಪುಟ (ಅಠಾರ ಕಛೇರಿ)ವನ್ನು ನೇಮಕ ಮಾಡಿದ್ದರು.<br>• ಅಂಚೆ ವ್ಯವಸ್ಥೆಯು ಇವರ ಕಾಲದಲ್ಲಿ ಜಾರಿಯಾಯಿತು.<br>• ಚಿಕ್ಕದೇವರಾಜ ನಾಲೆ ಮತ್ತು ದೊಡ್ಡ ದೇವರಾಜ ನಾಲೆ<br>• ಅನೇಕ ಕವಿಗಳಿಗೆ ಮತ್ತು ಪಂಡಿತರಿಗೆ ಆಶ್ರಯ ನೀಡಿದರು. | 3 |
| | **ಅಥವಾ**<br>**ಎರಡನೇ ಕರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.**<br>**ಎರಡನೇ ಕರ್ನಾಟಿಕ್ ಯುದ್ಧಕ್ಕೆ ಕಾರಣ:**<br>• ಫ್ರೆಂಚರ ಬೆಂಬಲದಿಂದ ಚಂದಾಸಾಹೇಬನು ಕಾರ್ನಾಟಿಕ್‌ನ ನವಾಬನಾಗಿದ್ದನು.<br>• ರಾಬರ್ಟ್ ಕ್ಲೈವನು ಫ್ರೆಂಚರು ಮತ್ತು ಚಂದಾಸಾಹೇಬನನ್ನು ಸೋಲಿಸಿದನು.<br>• ಚಂದಾಸಾಹೇಬನನ್ನು ಬಂಧಿಸಿ ಹತ್ಯೆ ಮಾಡಲಾಯಿತು.<br>**ಎರಡನೇ ಕರ್ನಾಟಿಕ್ ಯುದ್ಧದ ಪರಿಣಾಮಗಳು:**<br>• ಬ್ರಿಟಿಷರು ಮಹಮ್ಮದ್ ಅಲಿಯನ್ನು ನವಾಬನಾಗಿ ನೇಮಕ ಮಾಡಿದರು.<br>• 'ಪಾಂಡಿಚೇರಿ ಒಪ್ಪಂದ'ದೊಂದಿಗೆ ಯುದ್ಧ ಮುಕ್ತಾಯವಾಯಿತು | 3 |
| 27 | **27. 1857 ರ ದಂಗೆಯ ಪರಿಣಾಮಗಳಾವುವು?**<br>1857 ರ ದಂಗೆಯ ಪರಿಣಾಮಗಳೆಂದರೆ:<br>• ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕೊನೆಗೊಂಡಿತು<br>• ಬ್ರಿಟನ್ ಸಾಮ್ರಾಜ್ಞಿಗೆ ಆಡಳಿತವು ವರ್ಗಾವಣೆಗೊಂಡಿತು.<br>• ಭಾರತದ ವ್ಯವಹಾರವನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.<br>• ಬ್ರಿಟನ್ ರಾಣಿಯು ಒಂದು ಘೋಷಣೆ ಹೊರಡಿಸಿದರು. | 3 |

- ಒಪ್ಪಂದಗಳನ್ನು ಅಂಗೀಕರಿಸಲಾಯಿತು.
- ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
- ಕಾನೂನಿನ ಮುಂದೆ ಸಮಾನತೆ.
- ಭಾರತೀಯರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ.

(ಯಾವುದಾದರೂ ೬)

28

**28. ಭಾರತ ಮತ್ತು ಪಾಕಿಸ್ತಾನದ ಸಂಬಂಧವನ್ನು ವಿವರಿಸಿ.** 3

ಭಾರತ ಮತ್ತು ಪಾಕಿಸ್ತಾನದ ಸಂಬಂಧಗಳೆಂದರೆ:

- ಭೌಗೋಳಿಕ ಸಾಮಿಪ್ಯ ಹಾಗೂ ಸಮಾನ ನಾಗರಿಕ ಪರಂಪರೆ ಇದೆ.
- ಪಾಕಿಸ್ತಾನದೊಂದಿಗೆ ಉತ್ತಮ ಬಾಂಧವ್ಯವನ್ನು ಭಾರತ ಬಯಸುತ್ತದೆ.
- ಮಿಲಿಟರಿ–ಶಾಹಿತ್ವ ಹಾಗೂ ರಾಜಕೀಯ ಅಸ್ಥಿರತೆಯಿಂದಾಗಿ ಪಾಕಿಸ್ತಾನದೊಂದಿಗೆ ಒಳ್ಳೆಯ ಸಂಬಂಧವನ್ನು ಇರಿಸಿಕೊಂಡಿಲ್ಲ.
- ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಕಾರ್ಗಿಲ್‌ಯುದ್ಧ ಯುದ್ಧಗಳು ಸಂಭವಿಸಿದವು.
- ಈ ಎಲ್ಲಾ ಯುದ್ಧಗಳಲ್ಲಿ ಭಾರತ ವಿಜಯ ಗಳಿಸಿತು.
- ಕಾಶ್ಮೀರ ಸಮಸ್ಯೆ ಹಾಗೂ ಭಯೋತ್ಪಾದನೆ
- ಭಾರತ – ಪಾಕಿಸ್ತಾನದ ನಡುವೆ ಶಾಂತಿಯುತ ಸಂಬಂಧ ಸೂಕ್ತವಾಗಿ ಇನ್ನೂ ಮೂಡಿಬಂದಿಲ್ಲ.

29

**29. ವರದಕ್ಷಿಣೆ ದುಷ್ಪರಿಣಾಮಗಳನ್ನು ತಿಳಿಸಿ.** 3

ವರದಕ್ಷಣೆಯ ದುಷ್ಪರಿಣಾಮಗಳೆಂದರೆ:

- ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ
- ಕೌಟುಂಬಿಕ ಕಲಹಗಳನ್ನುಂಟು ಮಾಡುತ್ತದೆ.
- ಸ್ತ್ರೀ ಪುರುಷರ ನಡುವೆ ಒಡಕು
- ಅನೈತಿಕತೆ ಮತ್ತು ಕ್ರೌರ್ಯ ಹೆಚ್ಚುವುದು
- ಕೌಟುಂಬಿಕ ಸಂಬಂಧಗಳು ಹಾಳಾಗುವುವು
- ಮೋಸದ ವಿವಾಹಗಳು
- ಹೆಣ್ಣು ಭ್ರೂಣ ಹತ್ಯೆ
- ಹೆಣ್ಣು ಶಿಶು ಹತ್ಯೆ
- ವಿವಾಹ ವಿಚ್ಛೇದನ (ಯಾವುದಾದರೂ ೬)

30

**30. ಲ್ಯಾಟ್‌ರೈಟ್ ಮಣ್ಣಿನ ಬಗ್ಗೆ ಬರೆಯಿರಿ.** 3


- ಜಂಬಿಟ್ಟಿಗೆ ಮಣ್ಣು ಸಾಮಾನ್ಯವಾಗಿ ೨೦೦ ಸೆಂ.ಮೀಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ನಿರ್ಮಿತಗೊಂಡಿದೆ.
- ಅಧಿಕ ಮಳೆಯಿಂದ ಮಣ್ಣಿನಲ್ಲಿರುವ ಲವಣಾಂಶಗಳು ತೊಳೆಸಲ್ಪಟ್ಟು ಕೇವಲ ಕಬ್ಬಿಣದ ಆಕ್ಸೈಡ್ ಮತ್ತು ಅಲ್ಯುಮಿನಿಯಂಗಳು ಮಾತ್ರ ಮೇಲ್ಪದರಿನಲ್ಲಿ ಉಳಿದಿರುವುದು.

| | | |
|---|---|---|
| | • ಇದರಿಂದಾಗಿ ಈ ಮಣ್ಣು ಕೆಂಪು ಬಣ್ಣವನ್ನು ಹೊಂದಿರುವುದು. ಮಳೆಯ ನೀರು ಲವಣಗಳನ್ನು ಕರಗಿಸಿ ದ್ರಾವಣದ ರೂಪದಲ್ಲಿ ಭೂಮಿಯ ಹೆಚ್ಚು ಆಳದವರೆಗೆ ಸಾಗಿಸಿರುವುದು.<br>• ಆದುದರಿಂದ ಮೇಲ್ಪದರದ ಮಣ್ಣಿನಲ್ಲಿ ನೀರಿನಲ್ಲಿ ಕರಗದ ಕಬ್ಬಿಣ ಆಕ್ಸೈಡ್ ಮತ್ತು ಅಲ್ಯೂಮಿನಿಯಂಗಳು ಮಾತ್ರ ಕಂಡು ಬರುತ್ತವೆ.<br>• ಜಂಬಿಟ್ಟಿಗೆ ಮಣ್ಣಿನಲ್ಲಿ ಫಲವತ್ತತೆ ಅತಿ ಕಡಿಮೆ ಸಾರಜನಕ ಮತ್ತು ಲವಣಗಳ ಕೊರತೆಯನ್ನು ಈ ಮಣ್ಣಿನಲ್ಲಿ ಕಾಣಬಹುದು.<br>• ಇದು ಭಾರತದಲ್ಲಿ ಸುಮಾರು ೨.೪೮ ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡು ಬರುವುದು.<br>• ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ಈ ಮಣ್ಣು ವ್ಯಾಪಕವಾಗಿ ಹರಡಿದೆ.<br>• ಇದು ಕಾಫಿ ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹು ಉಪಯುಕ್ತವಾಗಿದೆ.<br>(ಯಾವುದಾದರೂ ೬) | 3 |
| 31 | **31. ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು ಯಾವುವು?**<br>ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು:<br>• ಭೂಸ್ವರೂಪ<br>• ವಾಯುಗುಣ<br>• ಮಣ್ಣು<br>• ನೀರಿನ ಪೂರೈಕೆ<br>• ಆರ್ಥಿಕ ಅಂಶಗಳು<br>• ಸಾಮಾಜಿಕ ಅಂಶಗಳು<br>• ತಂತ್ರಜ್ಞಾನ<br><br>ಅಥವಾ<br>**ದೂರ ಸಂವೇದಿ ತಂತ್ರಜ್ಞಾನದ ಉಪಯೋಗವನ್ನು ಬರೆಯಿರಿ.**<br>ದೂರ ಸಂವೇದಿ ತಂತ್ರಜ್ಞಾನದ ಉಪಯೋಗ:<br>• ಈ ಚಿತ್ರಗಳಿಂದ ಆ ಕಾಲದ ಅವಧಿಯಲ್ಲಿನ ನೈಜ ಹಾಗೂ ನಂಬಲರ್ಹವಾದ ಸ್ಪಷ್ಟ ಮಾಹಿತಿ ದೊರೆಯುವುದು.<br>• ಇದು ಭೂ ಮೇಲ್ಮೈನ ಸರ್ವೇಕ್ಷಣೆಗಿಂತ ಅತಿ ಶೀಘ್ರ, ಅಲ್ಪಾವಧಿ ಹಾಗೂ ಕಡಿಮೆ ವೆಚ್ಚದ ಮಾಹಿತಿ ಸಂಗ್ರಹಣೆಯ ವಿಧಾನವಾಗಿದೆ.<br>• ಇದರಿಂದ ಪಡೆಯುವ ಮಾಹಿತಿಯನ್ನು ಸುಲಭವಾಗಿ ಕಂಪ್ಯೂಟರುಗಳಿಂದ ವಿಶ್ಲೇಷಿಸಬಹುದು.<br>• ಹವಾಮಾನದ ವೈಪರೀತ್ಯ ಹಾಗೂ ಭೂ ಮೇಲ್ಮೈ ಅಡಚಣೆಗಳಿದ್ದರೂ ದೂರ ಸಂವೇದಿ ಚಿತ್ರಗಳನ್ನು ಉಪಗ್ರಹಗಳಿಂದ ಪಡೆಯಬಹುದು.<br>• ಚಂಡಮಾರುತ, ಬಿರುಗಾಳಿ, ಪ್ರವಾಹ, ಬರಗಾಲ ಮೊದಲಾದ ನೈಸರ್ಗಿಕ ಪ್ರಕೋಪಗಳ ಪ್ರಭಾವದ ಪ್ರದೇಶ ಹಾಗೂ ಅವುಗಳ ಅನಾಹುತಗಳ ತೀವ್ರತೆಯ ಅಧ್ಯಯನಗಳಿಗೆ ದೂರಸಂವೇದಿ ಚಿತ್ರಗಳು ಅತ್ಯಂತ ಉಪಯುಕ್ತವಾಗಿವೆ.<br>• ಉಪಗ್ರಹ ಚಿತ್ರಗಳು, ಭೂಬಳಕೆ, ಅರಣ್ಯ ಪ್ರದೇಶ, ಜಲರಾಶಿಗಳು, ವಸತಿ ಪ್ರದೇಶಗಳು, ಬೆಳೆಗಳ ಹಂಚಿಕೆ, ಭೂ ಸವೆತ, ಕನಿಜ ನಿಕ್ಷೇಪಗಳು. | 3<br><br>3 |

| | | |
|---|---|---|
| 32 | **32. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ, ವಿಶ್ಲೇಷಿಸಿ.**<br>• ಗ್ರಾಮಗಳ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು<br>• ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ವಯಸ್ಕ ಶಿಕ್ಷಣದ ಮೂಲಕ ಮಾನವ ಸಂಪನ್ಮೂಲಗಳ ಅಭಿವೃದ್ಧಿ<br>• ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ<br>• ಕೃಷಿ ನೀರಾವರಿಯನ್ನು ವಿಸ್ತರಿಸಬಹುದಾಗಿದೆ<br>• ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು.<br>• ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡಬಹುದು.<br>• ಸಮ್ಮೇಳನಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿಯನ್ನು ಏರ್ಪಡಿಸಬಹುದು<br>• ಸಮಾಜ ಕಲ್ಯಾಣ ಸೇವೆಗಳನ್ನು ಒದಗಿಸಬಹುದಾಗಿದೆ.<br>• ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದು.<br>• ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಬಹುದು.<br>• ಗ್ರಾಮೀಣ ಸಂಸ್ಕೃತಿ ಶ್ರೀಮಂತಗೊಳ್ಳುತ್ತದೆ (ಯಾವುದಾದರೂ ೬)<br><br>ಅಥವಾ<br>**ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳನ್ನು ಪಟ್ಟಿ ಮಾಡಿ.**<br>ಕೇಂದ್ರ ಸರ್ಕಾರದ ಯೋಜನಾ ವೆಚ್ಚಗಳೆಂದರೆ:<br>• ನಾಗರಿಕ ಆಡಳಿತ ವೆಚ್ಚ,<br>• ರಕ್ಷಣಾ ವೆಚ್ಚ,<br>• ಬಡ್ಡಿ ಪಾವತಿ ರಾಜ್ಯಗಳಿಗೆ ಯೋಜನೇತರ ಸಹಾಯ,<br>• ಸಹಾಯಧನದ ಮೇಲಿನ ವೆಚ್ಚ | 3<br><br>3 |
| 33 | **33. ನೀವು ಬ್ಯಾಂಕಿನಲ್ಲಿ ಖಾತೆ ತೆರೆಯಲು ಯಾವ ವಿಧಾನಗಳನ್ನು ಅನುಸರಿಸುವಿರಿ?**<br>ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸುವ ವಿಧಾನಗಳು:<br>• ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು<br>• ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು<br>• ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬಿ<br>• ಪರಿಚಿತರ ಉಲ್ಲೇಖನವನ್ನು ಕೊಡುವುದು<br>• ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು<br>• ಅಧಿಕಾರಿಯ ಒಪ್ಪಿಗೆ<br>• ಪ್ರಾರಂಭಿಕ ಠೇವಣಿ<br>ಅಥವಾ<br><br>**ಪ್ರಸ್ತುತ ದಿನಗಳಲ್ಲಿ ಉದ್ಯಮಿಗಳಿಗೆ ಸ್ವಯಂ ಉದ್ದಿಮೆಗಳನ್ನು ಸ್ಥಾಪಿಸಲು ಅಪಾರ ಅವಕಾಶಗಳಿವೆ,ಚರ್ಚಿಸಿ**<br>ಪ್ರಸ್ತುತ ದಿನಗಳಲ್ಲಿ ಉದ್ಯಮಿಗಳಿಗೆ ಸ್ವಯಂ ಉದ್ದಿಮೆಗಳನ್ನು ಸ್ಥಾಪಿಸಲು ಅಪಾರ ಅವಕಾಶಗಳಿವೆ. ಏಕೆಂದರೆ: | 3<br><br>3 |

| | | |
|---|---|---|
| | • ಜಾಹಿರಾತು ಸೇವಾಸಂಸ್ಥೆಗಳು<br>• ಮಾರುಕಟ್ಟೆ ಸಲಹಾ ಸಂಸ್ಥೆ<br>• ಕೈಗಾರಿಕಾ ಸಲಹಾ ಸಂಸ್ಥೆ<br>• ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆಗೆ ನೀಡುವ ಸಂಸ್ಥೆಗಳು<br>• ಛಾಯಾಪ್ರತಿ ತೆಗೆಯುವ ಕೇಂದ್ರಗಳು<br>• ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು<br>• ಕೈಗಾರಿಕಾ ವಸ್ತುಗಳ ಗುಣಮಟ್ಟ ಪ್ರಯೋಗಾಲಯಗಳು<br>• ಅಂತರ್ಜಾಲ ಮತ್ತು ಸಂಹವನ ಅಂಗಡಿಗಳು<br>• ದೂರದರ್ಶನ ಜಾಲ ಬಂದದ ಸೇವಾಕ್ಷೇತ್ರಗಳು<br>• ಕ್ರೆಚ್ ಮತ್ತು ಬ್ಯೂಟಿಪಾರ್ಲರ್‌ಗಳು (ಯಾವುದಾದರೂ ೬) | |
| 34 | **V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲಿ/ಅಂಶಗಳಲ್ಲಿ ಉತ್ತರಿಸಿ 4x4 = 16.**<br>**34. ಸ್ವಾತಂತ್ರ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳನ್ನು ವಿವರಿಸಿ.**<br>ಸ್ವಾತಂತ್ರ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಸಾಧನೆಗಳೆಂದರೆ:<br>• ಇವರು 'ನೇತಾಜಿ' ಎಂದು ಜನಪ್ರಿಯರಾದರು.<br>• ವಿದೇಶದಲ್ಲಿ ನೆಲೆಗೊಂಡ ಭಾರತೀಯರನ್ನು ಸಂಘಟಿಸಿದರು<br>• ವಿಯನ್ನಾ, ಬರ್ಲಿನ್, ರೋಮ್, ಇಸ್ತಾಂಬುಲ್ ಮುಂತಾದ ಕಡೆಗಳಲ್ಲಿ ಪ್ರವಾಸ ಬೆಳೆಸಿದರು<br>• ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು.<br>• ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದಲ್ಲಿ ಅಧ್ಯಕ್ಷರಾದರು.<br>• 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು.<br>• ಬ್ರಿಟಿಷ್ ಸರ್ಕಾರವು ಸುಭಾಷ್ ಚಂದ್ರ ಬೋಸರನ್ನು ಬಂಧಿಸಿತು.<br>• ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು.<br>• ಜರ್ಮನಿಯಲ್ಲಿ ಭಾರತೀಯ ಯುದ್ಧ ಕೈದಿಗಳನ್ನು ಸಂಘಟಿಸಿದರು.<br>• 'ಅಜಾದ್ ಹಿಂದ್ ರೇಡಿಯೋ' ಮೂಲಕ ತಮ್ಮ ಭಾಷಣಗಳನ್ನು ಪ್ರಸರಣ ಮಾಡಿದರು.<br>• ಐ.ಎನ್.ಎ ಯ ಮುಖಂಡತ್ವವನ್ನು ವಹಿಸಿದರು<br>• 'ದೆಹಲಿ ಚಲೋ'ಗೆ ಕರೆಯನ್ನು ನೀಡಿದರು.<br>• 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು.<br>• ರಂಗೂನಿನ ಮೂಲಕ ಬ್ರಿಟಿಷರ ಕೈಯಲ್ಲಿದ್ದ ದೆಹಲಿಯನ್ನು ವಶಪಡಿಸಿಕೊಳ್ಳಲು ಯುದ್ಧ ತಂತ್ರವನ್ನು ರೂಪಿಸಿದ್ದರು.<br>• ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು (ಯಾವುದಾದರೂ ೮) | 4 |
| | ಅಥವಾ<br>**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ತಿಳಿಸಿ.**<br>ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರಗಳೆಂದರೆ:<br>• ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸನ್ನು ಕಂಡಿದ್ದರು.<br>• ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಮಾತ್ರ ಓಡಿಸಬಹುದೆಂದು ನಂಬಿದ್ದರು.<br>• ರಹಸ್ಯಸಂಘಗಳ ಮೂಲಕ ತಮ್ಮ ಶಾಖೆಗಳನ್ನು ಸ್ಥಾಪಿಸಿದರು | 4 |

| | | |
|---|---|---|
| | • ಕ್ರಾಂತಿಕಾರಿಗಳಿಗೆ ತರಬೇತಿ ನೀಡುವಲ್ಲಿ ನಿರತರಾಗಿದ್ದರು.<br>• 'ಅನುಶೀಲನ ಸಮಿತಿ' ಮತ್ತು 'ಅಭಿನವ ಭಾರತ' ಇಂತಹ ರಹಸ್ಯ ಸಂಘಟನೆಗಳು<br>• ಬಾಂಬುಗಳು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.<br>• ಬ್ರಿಟಿಷರು ಕ್ರಾಂತಿಕಾರಿಗಳನ್ನು ಕೊಲೆ ಸಂಚಿನ ಆರೋಪದ ಮೇಲೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತು.<br>• ಈ ಸಂದರ್ಭದಲ್ಲಿ ಅನೇಕರನ್ನು ಗಲ್ಲಿಗೇರಿಸಲಾಯಿತು. | |
| 35 | **35. ಎರಡನೇ ಮಹಾಯುದ್ಧದ ಪರಿಣಾಮಗಳಾವುವು?**<br>ಎರಡನೇ ಮಹಾಯುದ್ಧದ ಪರಿಣಾಮಗಳೆಂದರೆ:<br>• ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯನ್ನು ಬದಲಾವಣೆ ಮಾಡಿತು.<br>• ವಿಶ್ವಸಂಸ್ಥೆ ರಚನೆಯಾಯಿತು.<br>• ಫ್ರಾನ್ಸ್,ರಷ್ಯಾ,ಅಮೇರಿಕಾ,ಚೀನಾ,ಇಂಗ್ಲೆಂಡ್ ದೇಶಗಳು ವಿಶ್ವಸಂಸ್ಥೆಯ ರಕ್ಷಣಾ ಮಂಡಳಿಯ ಖಾಯಂ ಸದಸ್ಯರಾದರು.<br>• ಸೋವಿಯತ್ ರಷ್ಯಾ ಮತ್ತು ಅಮೆರಿಕ ಪರಸ್ಪರ ವಿರೋಧಿಯಾದ ಶಕ್ತಿಶಾಲಿ ದೇಶಗಳಾದವು.<br>• ಶೀತಲ ಸಮರಕ್ಕೆ ಇದು ನಾಂದಿಯಾಯಿತು.<br>• ಏಷ್ಯಾ ಮತ್ತು ಆಫ್ರಿಕಾದ ವಸಾಹತುಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು.<br>• ಬ್ರಿಟನ್, ಫ್ರಾನ್ಸ್ ತಮ್ಮ ಹಿಡಿತದಲ್ಲಿದ್ದ ಬಹುತೇಕ ವಸಾಹತುಗಳನ್ನು ಕಳೆದುಕೊಂಡವು.<br>• ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು. | 4 |
| 36 | **36. ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ,ಸಮರ್ಥಿಸಿ**<br>ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ.ಹೇಗೆಂದರೆ:<br>• ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ<br>• ವಿಕಲ ಚೇತನರ ಶಿಕ್ಷಣ ಮತ್ತು ಮಹಿಳಾ ಶಿಕ್ಷಣ<br>• ರಾಷ್ಟ್ರೀಯ ಸಾಕ್ಷರತಾ ಮಿಷನ್<br>• ಸಾಕ್ಷರ ಭಾರತ<br>• ಸಂವಿಧಾನದ ೨೧ಎ ವಿಧಿಯನ್ವಯಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ.<br>• ೨೦೦೯ರಲ್ಲಿ ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದೆ. | 4 |
| 37 | **37. ಭಾರತದ ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಇರುವ ಸ್ಥಳಗಳಾವುವು?**<br>• ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಜಮ್‌ಶೆಡ್‌ಪುರ (ಜಾರ್ಖಂಡ್)<br>• ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪನಿ (IISCO), ಬರ್ನಪುರ–ಪಶ್ಚಿಮಬಂಗಾಳ<br>• ವಿಶ್ವೇಶ್ವರಯ್ಯ ಐರನ್ ಮತ್ತು ಸ್ಟೀಲ್ ಕಂಪನಿ (VISCO), ಭದ್ರಾವತಿ, ಕರ್ನಾಟಕ<br>• ಬಿಲಾಯಿ ಐರನ್ ಮತ್ತು ಸ್ಟೀಲ್ ಕಂಪನಿ, ಬಿಲಾಯಿ, ಛತ್ತೀಸ್‌ಘಡ್<br>• ಐರನ್ ಮತ್ತು ಸ್ಟೀಲ್ ಕಂಪನಿ, ರೂರ್ಕೆಲ ಒರಿಸ್ಸಾ<br>• ಐರನ್ ಮತ್ತು ಸ್ಟೀಲ್ ಕಂಪನಿ, ದುರ್ಗಾಪುರ – ಪಶ್ಚಿಮ ಬಂಗಾಳ | 4 |

| | | |
|---|---|---|
| 38 | **VI.38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.1 + 4 = 5**<br>A. ಕೋರಮಂಡಲ ತೀರ<br>B. ಕೆ–೨(ಗಾಡ್ವಿನ್ ಆಸ್ಟಿನ್)<br>C. ನರ್ಮದಾ ನದಿ<br>D. ಇಂದಿರಾ ಪಾಯಿಂಟ್<br><br> | 1+4=5 |

ಉಪನಿರ್ದೇಶಕರು ( ಆಡಳಿತ ) ರವರ ಕಛೇರಿ ,ಶಾಲಾ ಶಿಕ್ಷಣ ಇಲಾಖೆ ,ಬೆಂಗಳೂರು ಉತ್ತರ ಜಿಲ್ಲೆ,ಬೆಂಗಳೂರು
2023–24 ನೇ ಸಾಲಿನ ಹತ್ತನೇ ತರಗತಿ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸಲು ರಚಿಸಲಾಗಿರುವ
ಅಭ್ಯಾಸ ಪತ್ರಿಕೆಗಳು ಮತ್ತು ಮಾದರಿ ಉತ್ತರಗಳು

ವಿಷಯ : ಸಮಾಜ ವಿಜ್ಞಾನ –85 ಕೆ

ಗರಿಷ್ಠ ಅಂಕಗಳು : 80 ಅಬ್ಯಾಸ ಪತ್ರಿಕೆ : 05 ಸಮಯ : 3 :15 ಗಂಟೆಗಳು

| ಪ್ರ.ಸಂ | ಉತ್ತರಗಳು | ಅಂಕ |
|---|---|---|
| I. | **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** 8X1=8 | |
| 1 | **ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದವರು**<br>ಎ)ಸರ್ದಾರ್ ವಲ್ಲಭಬಾಯ್ ಪಟೇಲ್<br>ಬಿ)ಡಾ. ಬಿ .ಆರ್ .ಅಂಬೇಡ್ಕರ್<br>ಸಿ)ಲಾಲ ಲಜಪತರಾಯ್<br>ಡಿ)ಸುಭಾಷ್ ಚಂದ್ರ ಬೋಸ್<br>**ಉತ್ತರ : ಡಿ)ಸುಭಾಷ್ ಚಂದ್ರ ಬೋಸ್** | 1 |
| 2 | **ರಾಜ್ಯ ಪುನರ್ವಿಂಗಡಣಾ ಆಯೋಗ ಜಾರಿಗೆ ಬಂದ ವರ್ಷ**<br>ಎ)1953<br>ಬಿ)1956<br>ಸಿ)1950<br>ಡಿ)1973<br>**ಉತ್ತರ : ಎ)1953** | 1 |
| 3 | **ಸಂವಿಧಾನದ ಇತ್ತೀಚಿನ ಈ ವಿಧಿಯನ್ವಯ, ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ**<br>ಎ)14 ನೇ ವಿಧಿ<br>ಬಿ)16ನೇ ವಿಧಿ<br>ಸಿ)22 ನೇ ವಿಧಿ<br>ಡಿ)21 ಎ ವಿಧಿ<br>**ಉತ್ತರ : ಡಿ)21 ಎ ವಿಧಿ** | 1 |
| 4 | **ಅಸ್ಪೃಶ್ಯತೆಯು ಒಂದು ಪಿಡುಗು.**<br>ಎ)ಇದು ಲಿಂಗ ಅಸಮಾನತೆ ಸೂಚಿಸುತ್ತದೆ<br>ಬಿ)ಇದು ವರ್ಗ ಸಂಘರ್ಷಕ್ಕೆಡೆ ಮಾಡಿಕೊಡುತ್ತದೆ | 1 |

| | | |
|---|---|---|
| | ಸಿ)ಇದು ಹುಟ್ಟಿನ ಆಧಾರದಲ್ಲಿ ಸಾಮಾಜಿಕ ಅಸಮಾನತೆಗೆ ಕಾರಣವಾಗುತ್ತದೆ<br>ಡಿ)ಇದು ದಾರ್ಮಿಕ ಕಾರಣ ಅಸಮಾನತೆಗೆ ಕಾರಣವಾಗುತ್ತದೆ<br>**ಉತ್ತರ :ಬಿ)ಇದು ವರ್ಗ ಸಂಘರ್ಷಕ್ಕೆಡೆ ಮಾಡಿಕೊಡುತ್ತದೆ** | |
| 5 | **ಮೌನ ಕಣಿವೆ ಆಂದೋಲನ ನಡೆದ ಸ್ಥಳ**<br>ಎ)ಕರ್ನಾಟಕದ ಕರಾವಳಿ<br>ಬಿ)ಕೇರಳದ ಪಾಲ್ಘಾಟ್<br>ಸಿ)ಉತ್ತರಪ್ರದೇಶದ ತೆಹ್ರಿ ಘರ್ ವಾಲ್<br>ಡಿ)ಕರ್ನಾಟಕದ ಸಲ್ಯಾನಿ<br>**ಉತ್ತರ : ಬಿ)ಕೇರಳದ ಪಾಲ್ಘಾಟ್** | 1 |
| 6 | **ಭಾರತದ ಮೊದಲ ಕಾಗದ ಕಾರ್ಖಾನೆಯು ಸ್ಥಾಪನೆಯಾದ ಸ್ಥಳ**<br>ಎ)ಕರ್ನಾಟಕದ ದಾಂಡೇಲಿ<br>ಬಿ)ಆಂಧ್ರಪ್ರದೇಶದ ರಾಜಮಂಡ್ರಿ<br>ಸಿ)ಪಶ್ಚಿಮ ಬಂಗಾಳದ ಸೆರಾಂಪುರ<br>ಡಿ)ಉತ್ತರ ಪ್ರದೇಶದ ಮೀರತ್<br>**ಉತ್ತರ : ಸಿ)ಪಶ್ಚಿಮ ಬಂಗಾಳದ ಸೆರಾಂಪುರ** | 1 |
| 7 | **ಪ್ರತ್ಯಕ್ಷ ತೆರಿಗೆಯ ಮೂಲಗಳ ಸರಿಯಾದ ಆಯ್ಕೆ**<br>ಎ)ಆದಾಯ ತೆರಿಗೆ, ಕಂಪೆನಿತೆರಿಗೆ, ಸಂಪತ್ತುತೆರಿಗೆ<br>ಬಿ)ಕೇಂದ್ರಅಬಕಾರಿ ತೆರಿಗೆ, ಕಂಪೆನಿತೆರಿಗೆ, ಸೇವಾತೆರಿಗೆ<br>ಸಿ)ಕೇಂದ್ರಅಬಕಾರಿತೆರಿಗೆ, ಆಮದು–ರಫ್ತುತೆರಿಗೆ, ಸೇವಾತೆರಿಗೆ<br>ಡಿ)ಆದಾಯ ತೆರಿಗೆ, ಕಂಪೆನಿತೆರಿಗೆ, ಸೇವಾತೆರಿಗೆ<br>**ಉತ್ತರ : ಎ)ಆದಾಯ ತೆರಿಗೆ, ಕಂಪೆನಿತೆರಿಗೆ, ಸಂಪತ್ತುತೆರಿಗೆ** | 1 |
| 8 | **ಒಬ್ಬ ವ್ಯಕ್ತಿಯು 15 ಲಕ್ಷ ಬೆಲೆಯಕಾರನ್ನು ಕೊಂಡಿರುತ್ತಾನೆ. ಆ ಕಾರಿನಲ್ಲಿ ಕೆಲವುತೊಂದರೆಗಳಿದ್ದರೂ ಕಂಪನಿಯವರು ಸರಿಯಾಗಿ ಸ್ಪಂದಿಸುತ್ತಿಲ್ಲ .ಆಗ ಆ ವ್ಯಕ್ತಿಯು ಯಾವ ವೇದಿಕೆ ಆಯೋಗಕ್ಕೆದೂರು ಸಲ್ಲಿಸಬೇಕು**<br>ಎ)ಜಿಲ್ಲಾಗ್ರಾಹಕರ ವೇದಿಕೆ<br>ಬಿ)ರಾಜ್ಯ ಗ್ರಾಹಕರ ಆಯೋಗ<br>ಸಿ)ರಾಷ್ಟ್ರೀಯ ಗ್ರಾಹಕರ ಆಯೋಗ<br>ಡಿ)ಅಂತರರಾಜ್ಯ ಗ್ರಾಹಕರ ಆಯೋಗ .<br>**ಉತ್ತರ : ಎ)ಜಿಲ್ಲಾಗ್ರಾಹಕರ ವೇದಿಕೆ** | 1 |
| II | **ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿರಿ : 8 x 1 = 8** | |
| 9 | **ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಯಾರು?**<br>ಉತ್ತರ : ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟಿಷ್ ಅಧಿಕಾರಿ ಲಾರ್ಡ್ ವಿಲಿಯಂ ಬೆಂಟಿಂಕ್ | 1 |

| | | |
|---|---|---|
| 10 | **ಮಹಾತ್ಮಗಾಂಧೀಜಿ, ಯವರು ಯಾರನ್ನು ರಾಜರ್ಷಿ ಎಂದು ಕರೆದಿದ್ದಾರೆ ?**<br>ಉತ್ತರ : ಮಹಾತ್ಮಗಾಂಧಿಯವರು ನಾಲ್ವಡಿ ಕೃಷ್ಣರಾಜ ಒಡೆಯರ್‌ನ್ನು ರಾಜರ್ಷಿ ಎಂದು ಕರೆದಿದ್ದಾರೆ | 1 |
| 11 | **ಭಾರತ ಮತ್ತು ಪಾಕಿಸ್ತಾನ ರಾಷ್ಟ್ರಗಳ ನಡುವೆ ಯಾವಾಗ ತಾಷ್ಕೆಂಟ್ ಒಪ್ಪಂದ ನಡೆಯಿತು?**<br>ಉತ್ತರ :ಭಾರತ ಮತ್ತು ಪಾಕಿಸ್ತಾನ ರಾಷ್ಟ್ರಗಳ ನಡುವೆ 1966 ರಲ್ಲಿ ರಷ್ಯಾದ ಮಧ್ಯಸ್ಥಿಕೆಯಲ್ಲಿ ತಾಷ್ಕೆಂಟ್ ಒಪ್ಪಂದ ನಡೆಯಿತು. | 1 |
| 12 | **ಸಾಮಾಜಿಕ ಸ್ತರವಿನ್ಯಾಸ ಅತ್ಯಂತ ಪುರಾತನವಾದುದು ಈ ಹೇಳಿಕೆಯನ್ನು ಸಮರ್ಥಿಸಿ.**<br>ಉತ್ತರ : ಭಾರತದಲ್ಲಿ ಸಾವಿರಾರು ವರ್ಷಗಳಿಂದ ಜಾತಿ ಪದ್ದತಿ ಅಸ್ತಿತ್ವದಲ್ಲಿದೆ –ಈ ವಾಕ್ಯವು ಸಾಮಾಜೀಕ ಸ್ತರ ವಿನ್ಯಾಸ ಅತ್ಯಂತ ಪುರಾತನವಾದುದು ಎನ್ನುವುದನ್ನು ಸಮರ್ಥಿಸುತ್ತದೆ . | 1 |
| 13 | **ಮಣ್ಣಿನ ಸಂರಕ್ಷಣೆ ಎಂದರೇನು?**<br>ಉತ್ತರ ; ಮಣ್ಣಿನ ಸವೆತವನ್ನು ತಡೆಗಟ್ಟುವುದು ಮತ್ತು ಫಲವತ್ತತೆಯನ್ನು ಕಾಪಾಡುವುದೇ ಮಣ್ಣಿನ ಸಂರಕ್ಷಣೆ. | |
| 14 | **ಒರಿಸ್ಸಾದ ಕಣ್ಣೀರಿನ ನದಿ ಎಂದು ಯಾವ ನದಿಯನ್ನು ಕರೆಯುತ್ತಾರೆ ?**<br>ಉತ್ತರ : ಮಹಾನದಿಯನ್ನು ಒರಿಸ್ಸಾದ ಕಣ್ಣೀರಿನ ನದಿ ಎಂದು ಕರೆಯುತ್ತಾರೆ | 1 |
| 15 | **ಕೊರತೆ ಆಯ–ವ್ಯಯ ಎಂದರೇನು ?**<br>ಉತ್ತರ : ಆಯ–ವ್ಯಯದಲ್ಲಿ ಸರ್ಕಾರದ ಆದಾಯವು ಅದರ ವೆಚ್ಚಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಕೊರತೆ ಆಯ–ವ್ಯಯ ಎನ್ನುತ್ತಾರೆ . | 1 |
| 16 | **ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು ?**<br>ಉತ್ತರ : ಗ್ರಾಹಕರಿಗೆ ಉಂಟಾಗುವ ಶೋಷಣೆಯನ್ನು ತಪ್ಪಿಸುವುದು | |
| III | **ಕೆಳಗಿನ ಪ್ರಶ್ನೆಗಳಿಗೆ 3 / 4 ವಾಕ್ಯಗಳಲ್ಲಿ ಉತ್ತರಿಸಿ. :** 8X2=16 | |
| 17 | **ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಭಾರತೀಯ ರಾಜರು ಬ್ರಿಟಿಷ್‌ಇಂಡಿಯಾ ಕಂಪನಿಯ ಕೈಗೊಂಬೆ ಆಗಿದ್ದರು ಸಮರ್ಥಿಸಿ .**<br>✓ ಬಾರತೀಯ ರಾಜನು ಬ್ರಿಟೀಷ್ ಸೈನ್ಯದ ತುಕಡಿಯನ್ನು ತನ್ನ ಆಸ್ಥಾನದಲ್ಲಿ ಇರಿಸಿಕೊಳ್ಳಬೇಕು<br>✓ ಸೇನೆಯ ಸಂಪೂರ್ಣ ಖರ್ಚು–ವೆಚ್ಚಗಳನ್ನು ದೇಶೀಯ ರಾಜರು ನೋಡಿಕೊಳ್ಳಬೇಕು<br>✓ ತಮ್ಮ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್ ನ್ನು ನೇಮಿಸಿಕೊಳ್ಳಬೇಕು<br>✓ ಬ್ರಿಟಿಷರ ಅನುಮತಿಯಿಲ್ಲದೆ ಬೇರೆ ಯಾರೊಂದಿಗೂ ರಾಜಿ–ಸಂಧಾನ ಮಾಡಿಕೊಳ್ಳುವಂತಿಲ್ಲ | 2 |

| | | |
|---|---|---|
| 18 | ಈ ಎಲ್ಲಾ ಕಾರಣಗಳಿಂದ ಸಹಾಯಕ ಸೈನ್ಯ ಪದ್ದತಿಗೆ ಸಹಿ ಹಾಕಿದ ಭಾರತೀಯ ರಾಜರು ಬ್ರಿಟಿಷ್ ಇಂಡಿಯಾ ಕಂಪನಿಯ ಕೈಗೊಂಬೆ ಆಗಿದ್ದರು<br><br>**ಮಹಾಯುದ್ಧಗಳಲ್ಲಿ ಭಾಗವಹಿಸಿದ ಮೈಸೂರಿನ ಮುಖ್ಯ ಕಮಾಂಡೆಂಟ್ ಗಳನ್ನು ಹೆಸರಿಸಿ.**<br>ಉತ್ತರ : ಮಹಾಯುದ್ಧಗಳಲ್ಲಿ ಭಾಗವಹಿಸಿದ ಮೈಸೂರಿನ ಮುಖ್ಯ ಕಮಾಂಡೆಂಟ್‌ಗಳು ಯಾರೆಂದರೆ<br>• ಎ .ಟಿ.ತ್ಯಾಗರಾಜ್<br>• ಎ.ಲಿಂಗರಾಜ್ ಅರಸ್<br>• ಸುಬ್ಬರಾಜ ಅರಸ್<br>• ಬಿ.ಪಿ.ಕೃಷ್ಣೇ ಅರಸ್<br>• ವೀರ್ ತುರಾಬ್ ಆಲಿ<br>• ಸರ್ದಾರ್ ಬಹದ್ದೂರ್<br>• ಬಿ. ಚಾಮರಾಜ ಅರಸ್<br>• ಕರ್ನಲ್ ದೇಸಿರಾಜ ಅರಸ್ | 2 |
| 19 | **ಕರ್ನಾಟಕದಲ್ಲಿ ಬಡತನವನ್ನು ನಿವಾರಿಸಲು ತೆಗೆದುಕೊಂಡಿರುವ ಯೋಜನೆಗಳನ್ನು ಬರೆಯಿರಿ.**<br>**ಅಥವಾ**<br>**ಭಾರತದಲ್ಲಿ ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವುವು ?**<br>ಉತ್ತರ : ಕರ್ನಾಟಕದಲ್ಲಿ ಬಡತನವನ್ನು ನಿವಾರಿಸಲು ತೆಗೆದುಕೊಂಡಿರುವ ಯೋಜನೆಗಳು ಯಾವುವೆಂದರೆ<br>• ಬಡತನದ ರೇಖೆಯಿಂದ ಕೆಳಗಿರುವವರಿಗೆ .ಬಿ.ಪಿ.ಎಲ್. ಕಾರ್ಡಗಳನ್ನು ವಿತರಿಸಲಾಗಿದೆ.<br>• ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಗಿದೆ<br>• ಜವಹಾರ್ ರೋಜಗಾರ್ ಯೋಜನೆ ಮೂಲಕ ಉದ್ಯೋಗಾವಕಾಶ<br>• ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ<br>• ಪ್ರಧಾನ ಮಂತ್ರಿ ಗ್ರಾಮೋದಯ ಯೋಜನ್<br>**ಅಥವಾ**<br>**ಭಾರತದಲ್ಲಿ ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವುವೆಂದರೆ**<br>• 2001 ರಲ್ಲಿ ಜಾರಿಗೆ ಬಂದ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದ ಮೂಲಕ 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ<br>• ವಿಕಲ ಚೇತನರ ಮತ್ತು ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ<br>• 1988 ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪನೆ<br>• ಸಾಕ್ಷರ ಭಾರತ ಕಾರ್ಯಕ್ರಮದ ಮೂಲಕ ಅನಕ್ಷರತೆ ಹೋಗಲಾಡಿಸಲು ಕ್ರಮ | 2 |

| | | |
|---|---|---|
| 20 | **ಅಸಂಘಟಿತ ನೌಕರರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?**<br>**ಅಥವಾ**<br>**ದುಡಿಮೆಯಲ್ಲಿನ ತಾರತಮ್ಯವನ್ನು ಹೇಗೆ ನಿವಾರಿಸಬಹುದು?**<br>ಉತ್ತರ : ಅಸಂಘಟಿತ ನೌಕರರು ಎದುರಿಸುತ್ತಿರುವ ಸಮಸ್ಯೆಗಳು ಈ ಕೆಳಕಂಡಂತಿವೆ<br>• ಯಾವುದೇ ನಿಗದಿತ ನಿಯಮ, ಕಾಯ್ದೆಗಳಿರುವುದಿಲ್ಲ<br>• ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ<br>• ಕೆಲಸಕ್ಕೆ ಭದ್ರತೆ, ನಿಗದಿತ ವೇತನ ,ವಿರಾಮ ವೇತನ ,ಇತರೆ ಭತ್ಯೆಗಳ ಸೌಲಭ್ಯವಿರುವುದಿಲ್ಲ<br>• ಉದ್ಯೋಗಪತಿಗಳಿಂದ ಹಲವಾರು ರೀತಿಗಳಲ್ಲಿ ಶೋಷಣೆಗೆ ಒಳಗಾಗುತ್ತಾರೆ.<br>**ಅಥವಾ**<br>**ದುಡಿಮೆಯಲ್ಲಿನ ತಾರತಮ್ಯವನ್ನು ಹೋಗಲಾಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಬಹುದು**<br>• 1976 ರಲ್ಲಿ ಕೇಂದ್ರ ಸರ್ಕಾರವು ಸಮಾನ ವೇತನ ಕಾಯ್ದೆ ಜಾರಿಗೆ ತಂದಿದೆ<br>• ಅಕ್ಷರತೆಯ ಪ್ರಮಾಣ ಹೆಚ್ಚಾದಂತೆಲ್ಲಾ ತಾರತಮ್ಯದ ಪ್ರಮಾಣ ಕಡಿಮೆಯಾಗುತ್ತದೆ.<br>• ಸ್ತ್ರೀ ಪುರುಷರ ನಡುವಿನ ನಡುವಿನ ಬೇಧ ಬಾವವನ್ನು ಕಡಿಮೆ ಮಾಡಲು ಯತ್ನಿಸುತ್ತದೆ.<br>• ಏಕರೂಪವಾದ ಉದ್ಯೋಗವಕಾಶ,ಸಮಾನತೆ ಅಂಶಗಳ ಜಾರಿ | 2<br>2 |
| 21 | **“ಭಾರತದ ವ್ಯವಸಾಯವು ಮಾನ್ಸೂನ್ ಜೊತೆ ಆಡುವ ಜೂಜಾಟವಾಗಿದೆ ”. ಚರ್ಚಿಸಿ.**<br>• ದೇಶದ ಆರ್ಥಿಕತೆಯ ಬೆಳವಣಿಗೆಯ ಮೇಲೆ ವಾಯುಗುಣವು ಹೆಚ್ಚಿನ ಪ್ರಬಾವ ಬೀರುತ್ತದೆ.<br>• ನೈರುತ್ಯ ಮಾನ್ಸೂನ್ ಮಾರುತಗಳು ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ<br>• ದೇಶದ ಬಹುತೇಕ ಜನರ ಉದ್ಯೋಗ ಕೃಷಿ ಆಗಿದೆ<br>• ಮಳೆ ವಿಫಲವಾದರ ಬರಗಾಲ, ಹೆಚ್ಚಾದರೆ ಪ್ರವಾಹ, ಪ್ರಾಣಹಾನಿ ಮತ್ತು ಆಸ್ತಿಗೆ ಹಾನಿ ಉಂಟಾಗುತ್ತದೆ .<br>• ಆದುದರಿಂದ ಬಾರತದ ವ್ಯವಸಾಯವನ್ನು ಮಾನ್ಸೂನ್ ಜೊತೆಯಲ್ಲಿನ ಜೂಜಾಟ ಎನ್ನುತ್ತಾರೆ. | 2 |
| 22 | **ಭಾರತದಲ್ಲಿರುವ ರಾಷ್ಟ್ರೀಯ ಉದ್ಯಾನವನಗಳನ್ನು ಪಟ್ಟಿಮಾಡಿ.**<br>ಭಾರತದಲ್ಲಿರುವ ರಾಷ್ಟ್ರೀಯ ಉದ್ಯಾನವನಗಳು ಈ ಕೆಳಕಂಡಂತಿದೆ .<br>• ಕಾಜಿರಂಗ ನ್ಯಾಷನಲ್ ಪಾರ್ಕ –ಅಸ್ಸಾಂ<br>• ಸುಂದರ ಬನ –ಪಶ್ಚಿಮ ಬಂಗಾಳ | |

| | | |
|---|---|---|
| | • ಹಜಾರಿಭಾಗ ನ್ಯಾಷನಲ್ ಪಾರ್ಕ್– ಬಿಹಾರ<br>• ಗಿರ್ ನ್ಯಾಷನಲ್ ಪಾರ್ಕ್– ಗುಜರಾತ್<br>• ಕನ್ಹಾ ನ್ಯಾಷನಲ್ ಪಾರ್ಕ್– ಮಧ್ಯ ಪ್ರದೇಶ<br>• ತಾಂಡೋವಾ ನ್ಯಾಷನಲ್ ಪಾರ್ಕ – ಮಹಾರಾಷ್ಟ್ರ | 2 |
| 23 | **ಭಾರತದಲ್ಲಿ ಕಂಡುಬರುವ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಬರೆಯಿರಿ.**<br>ಉತ್ತರ : ಭಾರತದಲ್ಲಿ ಕಂಡುಬರುವ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಯಾವುವೆಂದರೆ<br>• ಜಿಲ್ಲಾ ಪಂಚಾಯತ್<br>• ತಾಲ್ಲೂಕ್ ಪಂಚಾಯತ್<br>• ಗ್ರಾಮ ಪಂಚಾಯತ್ | 2 |
| 24 | **ಉದ್ಯಮಿಗಳಿಗೆ ನೆರವಾಗುವ ಯಾವುದಾದರೂ ನಾಲ್ಕು ಪ್ರವರ್ತಕ ಸಂಸ್ಥೆಗಳನ್ನು ಹೆಸರಿಸಿ.**<br>ಉತ್ತರ : ಉದ್ಯಮಿಗಳಿಗೆ ನೆರವಾಗುವ ಯಾವುದಾದರೂ ನಾಲ್ಕು ಪ್ರವರ್ತಕ ಸಂಸ್ಥೆಗಳು ಈ ಕೆಳಕಂಡಂತಿವೆ.<br>• ಜಿಲ್ಲಾ ಕೈಗಾರಿಕಾ ಕೇಂದ್ರಗಳು<br>• ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ<br>• ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ<br>• ಕೈಗಾರಿಕಾ ಪ್ರದೇಶಗಳು<br>• ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ<br>• ತಾಂತ್ರಿಕ ಸಲಹಾ ಸಂಸ್ಥೆಗಳು | |
| IV<br>25 | **ಕೆಳಗಿನ ಪ್ರಶ್ನೆಗಳಿಗೆ 5 / 6 ವಾಕ್ಯಗಳಲ್ಲಿ /ಅಂಶಗಳಲ್ಲಿ ಉತ್ತರಿಸಿರಿ :** **9x3=27**<br>**1858 ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು**?<br>ಉತ್ತರ: 1858 ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವೆಂದರೆ<br>• ಕಂಪೆನಿಯು ದೇಶಿ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.<br>• ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈ ಬಿಡುವುದು .<br>• ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು<br>• ಕಾನೂನಿನ ಮುಂದೆ ಸಹಿಷ್ಣುತೆ<br>• ಧಾರ್ಮಿಕ ಸಹಿಷ್ಣುತೆಯೊಂದಿಗೆ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ | 3 |

| | | |
|---|---|---|
| 26 | **ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು,ಹೇಗೆ ? ವಿವರಿಸಿ**<br>**ಅಥವಾ**<br>**"ಅನಿಬೆಸೆಂಟ್‌ರವರು ಭಾರತೀಯ ಇತಿಹಾಸದಲ್ಲಿ ಮರೆಯಲಾಗದ ಮಹಿಳೆ" ಏಕೆ?**<br>ಉತ್ತರ :ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು, ಹೇಗೆಂದರೆ<br>• ಸ್ವಾಮಿ ವಿವೇಕಾನಂದರು ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಬಾರತೀಯರನ್ನು ಎಚ್ಚರಗೊಳಿಸಿದ ವೀರ ಸನ್ಯಾಸಿ<br>• ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಬಯಸಿದರು<br>• ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ ,ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು<br>• ರಾಮಕೃಷ್ಣಾಶ್ರಮವು ಶಿಕ್ಷಣ ಮತ್ತು ಸಮಾಜ ಸೇವೆಯ ಮೂಲಕ ಸಂಸ್ಕೃತಿಯ ಬೆಳವಣಿಗೆಯನ್ನು ಮುಂದುವರೆಸುತ್ತದೆ .<br>• ವಿವೇಕಾನಂದರ ಚಿಂತನೆಗಳಿಂದ ಗಾಂಧೀಜಿಯವರು ಸೇರಿದಂತೆ ಅನೇಕ ರಾಷ್ಟ್ರ ನಾಯಕರು ಪ್ರೇರಣೆಗೊಂಡರು<br>• 1893 ರಲ್ಲಿ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಣುತೆ ,ಸಕಲ ಧರ್ಮಗಳು ಸತ್ಯ ಎಂದು ಪ್ರತಿಪಾದಿಸಿದರು.<br>• ದಮನಕಾರಿ ರಿಲಿಜನ್ ಗಳಿಗೆ ಅಪವಾದವೆಂಬಂತೆ ಹಿಂದೂ ಧರ್ಮವು ಹೇಗೆ ವಿಶ್ವಭ್ರಾತೃತ್ವವನ್ನು ಸಾರಿದೆ ಎಂದು ತಿಳಿಸಿದರು .<br>• ಇವರು ಯುವ ಶಕ್ತಿಯ ಪ್ರೇರಕರಾಗಿದ್ದರು<br>**ಅಥವಾ**<br>**ಭಾರತದ ಇತಿಹಾಸದಲ್ಲಿ ಅನಿಬೆಸೆಂಟ್ ಮರೆಯಲಾಗದ ಮಹಿಳೆಯಗಿದ್ದಾರೆ.ಹೇಗೆಂದರೆ**<br>• ಐರ್ಲೆಂಡ್ ದೇಶದ ಮಹಿಳೆ ಅನಿಬೆಸೆಂಟ್ ರವರು ಥಿಯಾಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಗಳನ್ನು ಬಾರತದಲ್ಲಿ ಆರಂಭಿಸಿ ಅದಕ್ಕೆ ನವ ಚೈತನ್ಯ ನೀಡಿದರು.<br>• ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸಿದರು<br>• ಸಮಾಜದಲ್ಲಿ ಸಮಾನತೆ ಮತ್ತು ವಿಶ್ವಸೋದರತೆಯನ್ನು ವೃದ್ದಿಸುವುದು ಮತ್ತು ಸಾಮರಸ್ಯ ಸಾಧಿಸಲು ಪ್ರಯತ್ನಿಸಿದರು<br>• ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ವ್ಯಾಪಕವಾಗಿ ಬೆಂಬಲಿಸಿದರು<br>• 'ನ್ಯೂ ಇಂಡಿಯಾ ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು<br>• 1916 ರ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷೆಯಾಗಿದ್ದರು<br>• ಭಾರತೀಯ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಇವರು ಅಪಾರ ಕೊಡುಗೆಯನ್ನು ನೀಡಿದರು. | 3<br><br>3 |


| | | |
|---|---|---|
| 27 | **ಭಾರತಕ್ಕೆ ಬಂದ ಪ್ರಮುಖ ಯುರೋಪಿಯನ್ನರು ಯಾರು? ಅವರ ಪ್ರಮುಖ ವ್ಯಾಪಾರ ಕೇಂದ್ರಗಳನ್ನು ಬರೆಯಿರಿ.**<br>ಉತ್ತರ : ಭಾರತಕ್ಕೆ ಬಂದ ಪ್ರಮುಖ ಯುರೋಪಿಯನ್ನರು ಯಾರೆಂದರ<br>• ಪೋರ್ಚುಗೀಸರು<br>• ಡಚ್ಚರು<br>• ಫ್ರೆಂಚರು<br>• ಬ್ರಿಟೀಷರು<br>ವ್ಯಾಪಾರ ಕೇಂದ್ರಗಳು<br>ಪೋರ್ಚುಗೀಸರು : ಗೋವಾ ,ಸೂರತ್ ,ಕಣ್ಣಾನೂರು ,ಕಲ್ಲಿಕೋಟೆ<br>ಡಚ್ಚರು : ಸೂರತ್ ,ಬ್ರೋಚ್,ಕಾಂಬೆ, ನಾಗಪಟ್ಟಣ ,ಮಚಲೀಪಟ್ಟಣ ,ಚಿನ್ಸುರ<br>ಫ್ರೆಂಚರು ;ಪಾಂಡಿಚೇರಿ ,ಕಾರೈಕಲ್ ,ಯಾನಂ ,ಮಚಲಿ ಪಟ್ಟಣ ,ಗೋಲ್ಕಂಡ<br>ಬ್ರಿಟೀಷರು : ಕೊಲ್ಕತ್ತ ,ಅಹಮದಾಬಾದ್ ,ಮುಂಬೈ ,ಮದ್ರಾಸ್ ,ಢಾಕಾ | 3 |
| 28 | **“ಭಾರತವು ಒಂದು ಪ್ರಗತಿಪರ ರಾಷ್ಟ್ರವಾಗಿದ್ದು ಆರ್ಥಿಕ ನ್ಯಾಯ ಮತ್ತು ಸಮಾನತೆಯನ್ನು ಪ್ರತಿಪಾದಿಸುತ್ತಿದೆ” ಹೇಗೆ? ಸಮರ್ಥಿಸಿ.**<br>ಉತ್ತರ :“ಭಾರತವು ಒಂದು ಪ್ರಗತಿಪರ ರಾಷ್ಟ್ರವಾಗಿದ್ದು ಆರ್ಥಿಕ ನ್ಯಾಯ ಮತ್ತು ಸಮಾನತೆಯನ್ನು ಪ್ರತಿಪಾದಿಸುತ್ತಿದೆ” ಹೇಗೆಂದರೆ<br>• ಸರ್ಕಾರಗಳು ಎಲ್ಲಾ ಜನರಿಗೆ ಆಹಾರ ,ಬಟ್ಟೆ ,ವಸತಿ ,ಶಿಕ್ಷಣ ,ಆರೋಗ್ಯ , ನೈರ್ಮಲ್ಯ ,ಸಾರಿಗೆ ,ಸಂಪರ್ಕ ಮುಂತಾದ ಸೌಕರ್ಯಗಳನ್ನು ಒದಗಿಸುತ್ತಿದೆ.<br>• ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾತ್ರ ವಹಿಸುವುದು<br>• ಆದಾಯ ಮತ್ತು ಸಂಪತ್ತಿನ ಸಮಾನ ಹಂಚಿಕೆ ಯಾಗುವಂತೆ ನೋಡಿಕೊಳ್ಳಿತಿದೆ<br>• ಆರ್ಥಿಕ ಸ್ಥಿರತೆ ಮತ್ತು ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಅಬಿವೃದ್ಧಿಯನ್ನು ಸಾಧಿಸುತ್ತಿದೆ .<br>• ನಿರುದ್ಯೋಗ ,ಬಡತನ ,ಕೃಷಿಯ ಅಬಿವೃದ್ಧಿ ಮುಂತಾದ ಕ್ಷೇತ್ರಗಳ ಅಬಿವೃದ್ಧಿಗೆ ಶ್ರಮಿಸುತ್ತಿದೆ.<br>• ಪಂಚವಾರ್ಷಿಕ ಯೊಜನೆಗಳ ಜಾರಿಯ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿದೆ. | 3 |
| 29 | **ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕೈಗೊಳ್ಳಬಹುದಾದ ಪರಿಹಾರ ಕ್ರಮಗಳು ಯಾವುವು?**<br>ಉತ್ತರ : ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಕೈಗೊಳ್ಳಬಹುದಾದ ಪರಿಹಾರ ಕ್ರಮಗಳು ಈ ಕೆಳಕಂಡಂತಿವೆ . | |

| | | |
|---|---|---|
| | • ಬಾಲ ಕಾರ್ಮಿಕ ಪುನರ್ವಸತಿ ಕಲ್ಯಾಣ ನಿಧಿಯ ಸ್ಥಾಪನೆ<br>• 1986 ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯ ಜಾರಿ<br>• 24ನೇ ವಿಧಿಯು 14 ವಯಸ್ಸಿನೊಳಗಿನ ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ<br>• 1988ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯನ್ನು ಜಾರಿಗೊಳಿಸಿದೆ<br>• ಕೂಲಿಯಿಂದ ಶಾಲೆಗೆ ಕಾರ್ಯಕ್ರಮ<br>• 1987ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ರಾಷ್ಟ್ರೀಯ ನೀತಿ | 3 |
| 30 | **ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು ಯಾವುವು?**<br>ಉತ್ತರ : ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು<br>• ಭಾರತಕ್ಕೆ ಶತೃಗಳಿಂದ ರಕ್ಷಣೆ ಒದಗಿಸುತ್ತಿದೆ<br>• ಸೈಬಿರಿಯಾದ ಕಡೆಯಿಂದ ಬೀಸುವ ಶೀತಗಾಳಿಯನ್ನು ತಡೆಯುತ್ತದೆ<br>• ಅನೇಕ ನದಿಗಳ ಉಗಮ ಸ್ಥಾನವಾಗಿದೆ<br>• ಜಲವಿದ್ಯುತ್ ಶಕ್ತಿ ಉತ್ಪಾದನೆಗೆ ಅನುಕೂಲವಾಗಿದೆ<br>• ವಿವಿಧ ಸಸ್ಯ ಮತ್ತು ಪ್ರಾಣಿಗಳ ವಾಸ ಸ್ಥಾನವಾಗಿದೆ<br>• ಅಪಾರವಾದ ಖನಿಜ ಸಂಪನ್ಮೂಲಗಳ ತಾಣವಾಗಿದೆ<br>• ಅನೇಕ ಪ್ರವಾಸಿ ತಾಣಗಳು ಮತ್ತು ಧಾರ್ಮಿಕ ಕೇಂದ್ರಗಳಿವೆ. | 3 |
| 31 | **ಶಕ್ತಿ ಸಂಪನ್ಮೂಲಗಳ ಕೊರತೆ ನಿವಾರಿಸಲು ನಿಮ್ಮ ಸಲಹೆಗಳೇನು?**<br>**ಅಥವಾ**<br>**ಪ್ರವಾಹಗಳು ಉಂಟಾಗಲು ಕಾರಣಗಳನ್ನು ಪಟ್ಟಿಮಾಡಿ.**<br>ಉತ್ತರ : ಭಾರತದಲ್ಲಿ ಉಂಟಾಗುತ್ತಿರುವ ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನೀಗಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಬಹುದಾಗಿದೆ .<br>• ಅಸಂಪ್ರಾದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು<br>• ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯ ನೀಡುವುದು<br>• ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು<br>• ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸಿವುದು<br>• ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು<br>• ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು | 3 |
| 32 | **ನೀತಿ ಆಯೋಗದ ಧ್ಯೇಯೋದ್ದೇಶಗಳು ಮತ್ತು ನೀತಿ ಆಯೋಗದ ಚಟುವಟಿಕೆಗಳನ್ನು ತಿಳಿಸಿ.**<br>ಉತ್ತರ ; ನೀತಿ ಆಯೋಗದ ಧ್ಯೇಯೋದ್ದೇಶಗಳು | |

| | | |
|---|---|---|
| | • ಭಾರತ ಸರಕಾರದ ಅತ್ಯುನ್ನತ ಸಾರ್ವಜನಿಕ ನೀತಿ ಚಿಂತಕರ ಛಾವಡಿಯಾಗಿ ಕಾರ್ಯ ನಿರ್ವಹಿಸುವುದು<br>• ಆರ್ಥಿಕ ಅಭಿವೃದ್ದಿಯನ್ನು ವೇಗಗೊಳಿಸುವ ಕಾರ್ಯವನ್ನು ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುವುದು<br>• ಕೆಲಮಟ್ಟದಿಂದ ಸಂಪನ್ಮೂಲಗಳನ್ನು ಬಳಸಿಕೊಂಡು ಆರ್ಥಿಕ ನೀತಿ ನಿರ್ಮಾಣ ಪ್ರಕ್ರಿಯೆಯಲ್ಲಿ ಬಾರತದ ರಾಜ್ಯ ಸರ್ಕಾರಗಳ ಒಳಗೊಳ್ಳುವಿಕೆಯ ಮೂಲಕ ಸಹಕಾರಿ ಫೆಡರಿಲಿಸಂ ಉತ್ತೇಜಿಸುತ್ತದೆ .<br>ನೀತಿ ಆಯೋಗದ ಚಟುವಟಿಕೆಗಳು<br>• ನೀತಿ ಮತ್ತು ಕಾರ್ಯಕ್ರಮ ಚೌಕಟ್ಟು<br>• ಸಹಕಾರಿ ಒಕ್ಕೂಟ ವ್ಯವಸ್ಥೆ<br>• ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ<br>• ಚಿಂತಕರ ಕೂಟ ಮತ್ತು ಜ್ಞಾನ ಮತ್ತು ನಾವೀನ್ಯ ಸಮೂಹ | 3 |
| 33 | **ಬ್ಯಾಂಕ್‌ನಲ್ಲಿ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳೇನು?**<br>**ಅಥವಾ**<br>**ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು ?**<br>ಉತ್ತರ : ಬ್ಯಾಂಕ್ ನಲ್ಲಿ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳು<br>• ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ<br>• ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ<br>• ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ<br>• ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ<br>• ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಹಕರಿಸುತ್ತದೆ<br>• ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು<br>**ಅಥವಾ**<br>**ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ದೂರಿನಲ್ಲಿ ಇರಬೇಕಾದ ಮಾಹಿತಿಗಳು**<br>• ದೂರುಗಳು ಕೈ ಬರಹ ಅಥವಾ ಬೆರಳಚ್ಚಿನ ಮಾದರಿಯಲ್ಲಿರಬೇಕು<br>• ಈ ಮಾಹಿತಿಯಲ್ಲಿ ದೂರು ಕೊಡುವವನ ಹೆಸರು ,ವಿಳಾಸ ಮತ್ತು ದೂರವಾಣಿಯ ಸಂಖ್ಯೆ ಸರಿಯಾಗಿ ನಮೂದಿಸರಬೇಕು<br>• ಯಾವ ವ್ಯಾಪಾರಿ ಅಥವಾ ಪೂರೈಕೆದಾರನ ವಿರುದ್ಧ ದೂರು ಕೊಡಬೇಕೆಂಬುದನ್ನು ಪೂರ್ಣವಾಗಿ ನಮೂದಿಸರಬೇಕು<br>• ಯಾವ ವಸ್ತುವಿನಿಂದ ನಷ್ಟವಾಗಿದೆ ಅತವಾ ಮೋಸವಾಗಿದೆ ಎಂಬುದು ಮತ್ತು ನಷ್ಟ ಹೊಂದಿರುವ ಮೊಬಲಗೆಷ್ಟೆಂಬುದನ್ನು ಸರಿಯಾಗಿ ನಮೂದಿಸಿರಬೇಕು | 4 |

| | | |
|---|---|---|
| | • ನಷ್ಟದ ಸೂಕ್ತ ಪರಿಹಾರದ ಮೊಬಲಗು ಹಾಗೂ ಇದಕ್ಕೆ ಸಂಬಂಧಪಟ್ಟ ರಸೀದಿ ಅಥವಾ ಬಿಲ್ಲನ್ನು ಲಗತ್ತಿಸಬೇಕು<br>• ದೂರಿಗೆ ಯಾವುದೇ ಶುಲ್ಕ ಅಥವಾ ನೊಂದಣಿ ಶುಲ್ಕ ಇರುವುದಿಲ್ಲ<br>• ಗ್ರಾಹಕನೇ ನೇರವಾಗಿ ತನ್ನ ದೂರನ್ನು ಅಧ್ಯಕ್ಷರ ಮುಂದೆ ವಾದಿಸಬಹುದು ,ವಕೀಲರು ಬೇಕಾಗಿಲ್ಲ | |
| **V**<br>34 | **ಕೆಳಗಿನ ಪ್ರಶ್ನೆಗಳಿಗೆ 7 / 8 ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ : 4X4=16**<br>**ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂರವರ ಪಾತ್ರವನ್ನು ವಿವರಿಸಿ.**<br>**ಅಥವಾ**<br>**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರ ಮಹತ್ತರವಾದುದು. ವಿಶ್ಲೇಷಿಸಿ.**<br>ಉತ್ತರ : ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂರವರ ಪಾತ್ರ<br>• ಸಮಾಜವಾದಿ ಪಕ್ಷದ ಸ್ಥಾಪನೆ<br>• ಕೈಗಾರೀಕರಣ & ನವಭಾರತದ ಶಿಲ್ಪಿ ಹಾಗೂ ಬಾರತದ ಮೊದಲ ಪ್ರಧಾನ ಮಂತ್ರಿ<br>• ಹೋಂರೂಲ್ ಚಳುವಳಿಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ<br>• 1929 ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ<br>• ಸಂಸ್ಥಾನಗಳ ವಿಲೀನೀಕರಣ ಒತ್ತು ಭಾಷಾವಾರು ಪ್ರಾಂತ್ಯಗಳ ರಚನೆ<br>• ಮಿಶ್ರ ಆರ್ಥಿಕ ನೀತಿಯ ಜಾರಿ<br>• ಆರ್ಥಿಕ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು<br>• ವಿದೇಶಾಂಗ ನೀತಿ ಮತ್ತು ಆಲಿಪ್ತ ನೀತಿಗೆ ಪ್ರೋತ್ಸಾಹ<br>• ಚೀನಾದೊಂದಿಗೆ ಪಂಚಶೀಲ ತತ್ವಗಳಿಗೆ ಒಪ್ಪಂದ<br>**ಅಥವಾ**<br>**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರ**<br>• ಬಂಗಾಳದ ವಿಭಜನೆಯನ್ನು ವಿರೋಧಿಸಿದರು<br>• ಸ್ವದೇಶಿ ಚಳುವಳಿಗೆ ಕರೆ ನೀಡಿದರು<br>• ಪೂರ್ಣ ಸ್ವರಾಜ್ಯ ಪಡೆಯುವ ಗುರಿ<br>• ತಿಲಕರು 'ಸ್ವರಾಜ್ಯ ನನ್ನ ಆಜನ್ಮ ಸಿದ್ದ ಹಕ್ಕು 'ಎಂದು ಘೋಷಿಸಿದರು<br>• ಧಾರ್ಮಿಕ ಹಬ್ಬಗಳ ಆಚರಣೆ<br>• ಗಣೇಶ ,ಶಿವಾಜಿ ಹಬ್ಬಗಳಿಗೆ ಕರೆ ನೀಡಿದರು<br>• ಕೇಸರಿ ಮತ್ತು ಮರಾಠ ಪತ್ರಿಕೆಗಳ ಪ್ರಕಟಣೆ<br>• ಹೋಂ ರೂಲ್ ಚಳುವಳಿ ನೆಡೆಸಿದರು<br>• ತಿಲಕರು ಗೀತಾ ರಹಸ್ಯ ಪುಸ್ತಕ ಬರೆದರು | 4 |

| | | |
|---|---|---|
| 35 | **"ಖಾಯಂ ಜಮೀನ್ದಾರಿ ಪದ್ಧತಿಯು ರೈತರನ್ನು ಸಾಲದಲ್ಲೆ ಹುಟ್ಟಿ,ಸಾಲದಲ್ಲೆ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು"ಹೇಗೆ ?ವಿಮರ್ಶಿಸಿ.**<br>ಉತ್ತರ : ಬ್ರಿಟೀಷ್ ಅಧಿಕಾರಿ ಲಾರ್ಡ ಮೆಟ್ ಕಾಫ್ ಅವರ ಹೇಳಿಕೆಯಂತೆ "ಖಾಯಂ ಜಮೀನ್ದಾರಿ ಪದ್ದತಿಯು ರೈತರನ್ನು ಸಾಲದಲ್ಲೆ ಹುಟ್ಟಿ,ಸಾಲದಲ್ಲೆ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು"<br>• ಜಮೀನ್ದಾರಿ ವರ್ಗ ಸೃಷ್ಟಿಯಾಯಿತು<br>• ರೈತರ ಮೇಲಿನ ಶೋಷಣೆ ಹೆಚ್ಚಾಯಿತು<br>• ಭೂಮಿ ಮಾರಾಟದ ವಸ್ತು ಆಯಿತು<br>• ಜಮೀನ್ದಾರರು ಜಮೀನನ್ನು ಪರಭಾರೆ ಮಾಡಬೇಕಾಯಿತು<br>• ರೈತರು ಕೈಗಾರಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು<br>• ಲೇವಾದೇವಿಗಾರರು & ಶ್ರೀಮಂತರು ಬಲಿಷ್ಠರಾದರು | 4 |
| 36 | **ವಿಶ್ವಸಂಸ್ಥೆಯ ಸಾಧನೆಗಳನ್ನು ಪಟ್ಟಿಮಾಡಿ.**<br>ಉತ್ತರ :ವಿಶ್ವಸಂಸ್ಥೆಯ ಸಾಧನೆಗಳು ಈ ಕೆಳಗಿನಂತಿವೆ<br>• ವಿಶ್ವಶಾಂತಿ ಮತ್ತು ಮಾನವ ಹಕ್ಕುಗಳ ರಕ್ಷಣೆ<br>• ಸುಯೇಜ್ ಕಾಲುವೆ,ಕಾಶ್ಮೀರ ,ಕಾಂಗೋ,ಮುಂತಾದ ಸನಸ್ಯೆಗಳಿಗೆ ಪರಿಹಾರ<br>• ಅಣ್ವಸ್ತ್ರ ಮತ್ತು ನಿಶ್ಯಸ್ತ್ರೀಕೃಣದ ನಿರಂತರ ಪ್ರಯತ್ನ<br>• ರಾಜಕೀಯ ಸಂಘರ್ಷಗಳ ನಿವಾರಣೆ ಆರ್ಥಿಕ ಮತ್ತು ಹಣಕಾಸಿನ ಸಾಧನೆ<br>• ಸಾಮಾಜಿಕ ಪ್ರಗತಿ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಯತ್ನಿಸಬೇಕು ಎಂಬ ಘೋಷಣೆ<br>• ಆರ್ಥಿಕ ಕ್ಷೇತ್ರದಲ್ಲಿ ಸುಂಕ ಮತ್ತು ವ್ಯಾಪಾರದ ಸಾಮಾನ್ಯ ಒಪ್ಪಂದ<br>• ಸಾಮಾಜಿಕ ಕಳಿಕಳಿಗಾಗಿ ಯುನೆಸ್ಕೋ ,ಯುನಿಸೆಫ್ ನಂತಹ ಸೇವಾ ಸಂಸ್ಥೆಗಳು<br>• 1948ರಲ್ಲಿ ಮಾನವ ಹಕ್ಕುಗಳ ಘೋಷಣೆ<br>• ವರ್ಣಬೇಧ ನೀತಿ ,ಸಾಮ್ರಾಜ್ಯ ಶಾಹಿತ್ವ ,ವಸಾಹತು ಶಾಹಿತ್ವಗಳ ರದ್ದತಿ | 4 |
| 37 | **ವ್ಯವಸಾಯ ಎಂದರೇನು? ಭಾರತದಲ್ಲಿ ಕಂಡು ಬರುವ ವ್ಯವಸಾಯದ ಪ್ರಕಾರಗಳನ್ನು ಹೆಸರಿಸಿ.**<br>ಉತ್ತರ : ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದೇ ವ್ಯವಸಾಯ ಅಥವಾ ಕೃಷಿ ಎನ್ನುತ್ತಾರೆ.<br>ವ್ಯವಸಾಯದ ಪ್ರಕಾರಗಳು<br>• ಸಾಂದ್ರ ಬೇಸಾಯ<br>• ಜೀವನಾಧಾರ ಬೇಸಾಯ | 4 |

| | | |
|---|---|---|
| | • ವಾಣಿಜ್ಯ ಬೇಸಾಯ<br>• ಮಿಶ್ರ ಬೇಸಾಯ<br>• ತೋಟಗಾರಿಕಾ ಬೇಸಾಯ<br>• ಪುಷ್ಪ ಬೇಸಾಯ | |
| VI<br>38 | **ಭಾರತದ ನಕಾಶೆಯನ್ನು ಬರೆದು ಕೆಳಗಿನ ಸ್ಥಳಗಳನ್ನು ಗುರುತಿಸಿರಿ :** **1+4=5**<br>ಎ .ನವಶೇವ<br>ಬಿ . ನೇತಾಜಿ ಸುಭಾಷ್ ಚಂದ್ರ ಬೋಸ್ ವಿಮಾನ ನಿಲ್ದಾಣ<br>ಸಿ . ಕನ್ಯಾಕುಮಾರಿ<br>ಡಿ . ಚೆನ್ನೈ<br> | 5 |

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================

**ಅಭ್ಯಾಸ ಪತ್ರಿಕೆ–6**

*****************************************************************************

# ಮಾದರಿ ಉತ್ತರಗಳು

| ಪ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕ ಗಳು |
|---|---|---|
| I | **ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ.1X8=8** | |
| 1. | ಭಾರತದಲ್ಲಿ ಫ್ರೆಂಚರ ರಾಜಧಾನಿ.<br>ಬಿ. ಪಾಂಡಿಚೇರಿ | 1 |
| 2. | ಬ್ರಿಟೀಷರು ಜಾರಿಗೊಳಿಸಿದ ಈ ಕಾಯ್ದೆಯು ಭಾರತದಲ್ಲಿ ರಿಸರ್ವ್‌ಬ್ಯಾಂಕ್ ಸ್ಥಾಪನಗೆ ಅವಕಾಶ ಮಾಡಿಕೊಟ್ಟಿತು<br>ಬಿ. 1935 ರ ಭಾರತ ಸರ್ಕಾರದ ಕಾಯ್ದೆ | 1 |
| 3. | ಭಾರತದಲ್ಲಿ ಅತೀ ಹೆಚ್ಚು ಮಳೆ ಬೀಳುವ ಪ್ರದೇಶ .<br>ಡಿ. ಮಾಸಿನ್ ರಾಮ್ | 1 |
| 4. | ಇದು ಹಿಂದೂ ಸಮಾಜಕ್ಕೆ ಅಂಟಿದ ಕಳಂಕ.<br>ಬಿ . ಅಸ್ಪೃಶ್ಯತೆ | 1 |
| 5. | ಬೇಸಿಗೆ ಕಾಲದಲ್ಲಿ ಭಾರತದ ಉತ್ತರಾರ್ಧಗೋಳದ ಮೇಲೆ ಸೂರ್ಯನ ಕಿರಣಗಳು ನೇರವಾಗಿ ಬೀಳುವುದರಿಂದ ಉಂಟಾಗುವ ಪರಿಣಾಮ.<br>ಎ. ದೀರ್ಘಹಗಲು, ಚಿಕ್ಕ ರಾತ್ರಿ | 1 |
| 6. | 'ಭಾರತಕ್ಕಾಗಿ ಯೋಜಿತ ಅರ್ಥವ್ಯವಸ್ಥೆ' ಪುಸ್ತಕವನ್ನು ಬರೆದವರು.<br>ಸಿ. ಸರ್. ಎಂ.ವಿಶ್ವೇಶ್ವರಯ್ಯ | 1 |
| 7. | ಕೆಳಗಿನ ಈ ವಿವಿಧೋದ್ದೇಶ ನದಿ ಯೋಜನೆಯ ಜಲಾಶಯವು 'ಪಂಪಸಾಗರ'ವಾಗಿದೆ.<br>ಬಿ . ತುಂಗಭದ್ರಾ ನದಿ ಯೋಜನೆ | 1 |

| | | |
|---|---|---|
| **8.** | ಬ್ಯಾಂಕ್‌ನಲ್ಲಿ ಒಂದು ದಿನದಲ್ಲಿ ಅನಿಯಮಿತವಾಗಿ ವ್ಯವಹರಿಸಬಹುದಾದ ಬ್ಯಾಂಕು ಖಾತೆ.<br>ಬಿ. ಚಾಲ್ತಿ ಖಾತೆ | 1 |
| **II** | **ಕೆಳಗಿನ ಪ್ರಶ್ನೆಗಳಿಗೆ ಒಂದು ಪದ / ವಾಕ್ಯದಲ್ಲಿ ಉತ್ತರಿಸಿರಿ : 8X1=8** | |
| 9. | 'ಮಾನವಕುಲಂ ತಾನೊಂದೆ ವಲಂ' ಎಂದು ಹೇಳಿದವರು<br>– ಪಂಪ | 1<br>1 |
| 10 | ಸಾಮಾಜಿಕ ಸ್ತರ ವಿನ್ಯಾಸ ಎಂದರೆ<br>–ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ ಮುಂತಾದ ಆಧಾರದ ಮೇಲೆ ಮೇಲು–ಕೀಳು ಎಂದು ವಿಂಗಡಿಸುವುದು. | 1 |
| 11. | ಭಾರತದ ಅರ್ಥಿಕತೆಯ ಪಿತಾಮಹ – ಸರ್ ಎಂ. ವಿಶ್ವೇಶ್ವರಯ್ಯ | |
| 12. | ರಾಣಿ ಚೆನ್ನಮ್ಮನನ್ನು ಬೈಲಹೊಂಗಲ ಬಂಧಿಖಾನೆಯಲ್ಲಿ ಸೆರೆಯಲ್ಲಿಡಲಾಯಿತು. | |
| 13. | ದಾಮೋದರ ನದಿಯನ್ನು ಬಂಗಾಳದ ಕಣ್ಣೀರಿನ ನದಿ ಎನ್ನುತ್ತಾರೆ. ಏಕೆಂದರೆ– ದಾಮೋದರ ನದಿಯು ಪಶ್ಚಿಮ ಬಂಗಾಳದಲ್ಲಿ ಪ್ರವಾಹವನ್ನುಂಟುಮಾಡಿ ಅಪಾರವಾದ ಬೆಳೆ ಹಾನಿ, ಆಸ್ತಿ ಹಾನಿ ಮತ್ತು ಪ್ರಾಣ ಹಾನಿ ಕಾರಣವಾಗಿದೆ. | 1 |
| 14. | ಭಾರತದಲ್ಲಿ ಇತ್ತೀಚೆಗೆ ರಚನೆಯಾಗಿರುವ ಭೂ ಭಾಗ– ಶಿವಾಲಿಕ್ ಶ್ರೇಣಿ | 1 |
| 15. | ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯುತ್ತಾರೆ. ಏಕೆಂದರೆ– ದೇಶೀಯ ಸಂಸ್ಥಾನಗಳ ವಿಲೀನೀಕರಣ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದರಿಂದ | 1 |
| **16.** | ನೀಲಿ ನೀರಿನ ನೀತಿ ' ಯನ್ನು ಜಾರಿಗೆ ತಂದವರು – ಫ್ರಾನ್ಸಿಸ್ಕೋ ಡಿ ಆಲ್ಮೇಡ | |
| **III** | **ಕೆಳಗಿನ ಪ್ರಶ್ನೆಗಳಿಗೆ 3 / 4 ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ : 8X2=16** | |
| 17. | ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ:<br>➢ ಲಾರ್ಡ್ ಡಾಲ್‌ಹೌಸಿಯು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದನು<br>➢ ಯಾವುದೇ ಭಾರತೀಯ ರಾಜನು ಪುತ್ರ ಸಂತಾನವಿಲ್ಲದೆ ಸತ್ತರೆ ಅವನ ದತ್ತು ಪುತ್ರನಿಗೆ ಉತ್ತರಾಧಿಕಾರತ್ವದ ಹಕ್ಕಿಲ್ಲ<br>➢ ಅಂತಹ ರಾಜ್ಯವನ್ನು ಬ್ರಿಟೀಷ್ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಲಾಗುತ್ತಿತ್ತು<br>➢ ಸತಾರ, ಝಾನ್ಸಿ, ಜೈಪುರ್, ಸಂಬಲ್‌ಪುರ್, ಉದಯಪುರ್, ನಾಗಪುರಗಳು ಬ್ರಿಟೀಷರ ವಶವಾದವು | 2 |

| | | |
|---|---|---|
| **18.** | ಮೊದಲನೇ ಆಂಗ್ಲೋ–ಮರಾಠ ಯುದ್ದಕ್ಕೆ ಕಾರಣಗಳು:<br>➢ ಮೊಘಲ್ ಚಕ್ರವರ್ತಿ ಮೊದಲು ಬ್ರಿಟೀಷರಿಗೆ ನೀಡಿದ್ದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ಕೊಟ್ಟನು<br>➢ ಮರಾಠರು ಮತ್ತು ಬ್ರಿಟೀಷರ ನಡುವೆ ವೈರತ್ವ ಉಂಟಾಯಿತು<br>➢ ಪೇಶ್ವೆ ಸ್ಥಾನಕ್ಕೆ ಏರ್ಪಟ್ಟ ಕಲಹ<br><br>ಅಥವಾ<br><br>ಲಾಭಕೋರತನಕ್ಕೆ ಮುಖ್ಯ ಕಾರಣಗಳು:<br>➢ ಏಕಸ್ವಾಮ್ಯ ವ್ಯವಸ್ಥೆ<br>➢ ಬಹು ರಾಷ್ಟ್ರೀಯ ಕಂಪನಿಗಳ ವ್ಯಾಪಕತೆ<br>➢ ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು<br>➢ ಅಕ್ರಮ ದಾಸ್ತಾನು<br>➢ ಕಳ್ಳ ವ್ಯಾಪಾರ | 2 |
| **19** | ನಿರುದ್ಯೋಗಕ್ಕೆ ಕಾರಣಗಳು:<br>➢ ಅತಿಯಾದ ಜನಸಂಖ್ಯೆ<br>➢ ಯಾಂತ್ರೀಕರಣ<br>➢ ಅತಿಯಾದ ಶ್ರಮವಿಭಜನೆ<br>➢ ಸಾಮಾಜಿಕ ಅಸಮಾನತೆ<br>➢ ಬಂಡವಾಳದ ಕೊರತೆ<br>➢ ಅನಕ್ಷರತೆ | 2 |
| **20.** | ಅಸ್ಪೃಶ್ಯತೆಯ ನಿವಾರಣೆಗಾಗಿ ಕೈಗೊಂಡಿರುವ ಸಂವಿಧಾನತ್ಮಾಕ ಕ್ರಮಗಳು:<br>➢ ಸಂವಿಧಾನದ 17ನೇಯವಿಧಿಯು ಅಸ್ಪೃಷ್ಯತಾ ಆಚರಣೆಯನ್ನು ನಿಷೇಧಿಸಿದೆ.<br>➢ ಭಾರತ ಸರ್ಕಾರಅಸ್ಪೃಷ್ಯತಾ ಅಪರಾದಗಳ ಕಾಯ್ದೆಯನ್ನು 1955ರಲ್ಲಿ ಜಾಗೊಳಿಸಿದೆ.<br>➢ ಇದರಲ್ಲಿ ಕಂಡುಬಂದ ಕೆಲವು ಲೋಪ ದೋಷಗಳನ್ನು ತಿದ್ದುಪಡಿಮಾಡಿ ‘ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು 1976ರಲ್ಲಿ ಮಾರ್ಪಾಡುಗೊಳಿಸಲಾಯಿತು.<br>➢ ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ.<br>➢ ಅಲ್ಲದೆ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ. | 2 |

- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ·ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯಸರ್ಕಾರಗಳಿಗೆ ವಹಿಸಿದೆ.

**ಅಥವಾ** 2

ಗ್ರಾಹಕರ ಶೋಷಣೆಗೆ ಪ್ರಮುಖ ಕಾರಣಗಳ ಪಟ್ಟಿ:

- ಮಧ್ಯವರ್ತಿಗಳ ಹಾವಳಿ
- ಮಧ್ಯವರ್ತಿಗಳೇ ಬೆಲೆಯನ್ನು ನಿರ್ಧರಿಸುವುದು
- ಗ್ರಾಹಕ ಮತ್ತು ಪೂರೈಕೆದಾರರ ನಡುವಿನ ಅಂತರ ಹೆಚ್ಚಾಗಿರುವುದು
- ಗ್ರಾಹಕ–ಪೂರೈಕೆದಾರರ ನಡುವೆ ನೇರ ವ್ಯವಹಾರವಿಲ್ಲ

2

21 ಕರ್ನಾಟಕದ ನಾಲ್ಕು ಪ್ರಮುಖ ರಾಷ್ಟ್ರೀಯ ಉದ್ಯಾನವನಗಳೆಂದರೆ:

- ಬಂಡೀಪುರ ರಾಷ್ಟ್ರೀಯ ಉದ್ಯಾನವನ
- ನಾಗರಹೊಳೆ ರಾಷ್ಟ್ರೀಯ ಉದ್ಯಾನವನ
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ
- ಅನ್ಷಿ ರಾಷ್ಟ್ರೀಯ ಉದ್ಯಾನವನ

22 ಭಾರತದಲ್ಲಿ ರೂಢಿಯಲ್ಲಿರುವ ಬೆಳೆ ಮಾದರಿಗಳೆಂದರೆ:

- ಆಹಾರ ಬೆಳೆಗಳು
- ಆಹಾರೇತರ ಅಥವಾ ವಾಣಿಜ್ಯ ಬೆಳೆಗಳು

2

23 ಭಾರತದಲ್ಲಿ ಕಂಡು ಬರುವ ಗ್ರಾಹಕ ನ್ಯಾಯಾಲಯಗಳ ವಿವಿಧ ಹಂತಗಳು:

- ಜಿಲ್ಲಾ ವೇದಿಕೆ
- ರಾಜ್ಯ ಆಯೋಗ
- ರಾಷ್ಟ್ರೀಯ ಆಯೋಗ

24

ಬ್ಯಾಂಕ್ ನಲ್ಲಿ ತೆರೆಯಬಹುದಾದ ವಿವಿಧ ಖಾತೆಗಳೆಂದರೆ: 2

- ಉಳಿತಾಯ ಖಾತೆ
- ಚಾಲ್ತಿ ಖಾತೆ
- ಆವರ್ತ ಠೇವಣಿ ಖಾತೆ
- ನಿಶ್ಚಿತ ಠೇವಣಿ ಖಾತೆ

| | | |
|---|---|---|
| **IV** | **ಕೆಳಗಿನ ಪ್ರಶ್ನೆಗಳಿಗೆ 5 / 6 ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ :** **9X3=27** | |
| **25** | ಬಕ್ಸಾರ್ ಕದನಕ್ಕೆ ಕಾರಣ ಮತ್ತು ಪರಿಣಾಮಗಳು<br>**ಕಾರಣಗಳು:**<br>➢ ಮೀರ್ ಖಾಸಿಂನು ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕಮುಕ್ತ ಎಂದು ಘೋಷಿಸಿದನು<br>➢ ಪರಿಣಾಮವಾಗಿ ಬ್ರಿಟೀಷರ ವ್ಯಾಪಾರಕ್ಕೆ ಹೊಡೆತ ಬಿದ್ದಿತು<br>➢ ಇದರಿಂದಾಗಿ, ಮೀರ್ ಖಾಸಿಂನನ್ನು ಅಧಿಕಾರದಿಂದ ಕೆಳಗಿಳಿಸಿ ಮೀರ್ ಜಾಫರ್‌ನನ್ನು ನವಾಬನನ್ನಾಗಿ ಮಾಡಿದರು<br>➢ ಮೀರ್ ಖಾಸಿಂನು ಬ್ರಿಟೀಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು<br>**ಪರಿಣಾಮಗಳು:**<br>➢ ಎರಡನೇಷಾ ಆಲಂನುಈಸ್ಟ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ದಿವಾನಿಹಕ್ಕನ್ನುನೀಡಿದನು.<br>➢ ಷಾ ಅಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲಾ ಬಿಟ್ಟುಕೊಡಬೇಕಾಯಿತು.<br>➢ ಷೂಜ–ಉದ್–ದೌಲನು ಕಂಪನಿಗೆ ಯದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.<br>➢ ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಲಾಯಿತು.<br>➢ ಬಂಗಾಳದ ಪೂರ್ಣ ಆಡಳತವನ್ನು ಕಂಪನಿಯು ನಿರ್ವಹಿಸತೊಡಗಿತು<br>**ಅಥವಾ**<br>ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನವನ್ನು ಕುರಿತು:<br>**ಸುಗ್ಗಿ ಪೂರ್ವ ತಂತ್ರಜ್ಞಾನ:**<br>➢ ಅಧಿಕ ಇಳುವರಿಯ ಬೀಜಗಳ ಬಳಕೆ<br>➢ ರಾಸಾಯನಿಕ ಗೊಬ್ಬರ ಬಳಕೆ<br>➢ ಕ್ರಿಮಿನಾಶಕಗಳ ಬಳಕೆ<br>➢ ನೀರಾವರಿ ಸೌಲಭ್ಯಗಳ ಬಳಕೆ<br>**ಸುಗ್ಗಿ ನಂತರದ ತಂತ್ರಜ್ಞಾನ:**<br>➢ ಕೃಷಿ ಉತ್ಪನ್ನಗಳ ಸಂಗ್ರಹಣೆ<br>➢ ಕೃಷಿ ಉತ್ಪನ್ನಗಳ ಸಂಸ್ಕರಣೆ<br>➢ ಮಾರಾಟದಲ್ಲಿ ಸುಧಾರಣೆ | **3** |

| | | |
|---|---|---|
| 26 | ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸಲು ಅನುಸರಿಸಬೇಕಾದ ಹಂತಗಳು:<br>➢ ದೂರು ಕೈ ಬರಹ/ಬೆರಳಚ್ಚು ಮಾದರಿಯಲ್ಲಿರಬೇಕು<br>➢ ದೂರು ಕೊಡುವವನ ಹೆಸರು, ವಿಳಾಸ, ದೂರವಾಣಿ<br>➢ ಯಾವ ವ್ಯಾಪಾರಿಯ ವಿರುದ್ಧ ದೂರು ಕೊಡಬೇಕು ಎಂಬ ಮಾಹಿತಿ<br>➢ ಯಾವ ವಸ್ತುವಿನಿಂದ ನಷ್ಟ/ಮೋಸವಾಗಿದೆ<br>➢ ನಷ್ಟವಾಗಿರುವ ಮೊತ್ತ<br>➢ ದೂರಿಗೆ ಸಂಬಂಧಿಸಿದ ರಶೀದಿ/ಬಿಲ್ಲು<br>➢ ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ | 3 |
| 27. | 1857ರ ದಂಗೆಗೆ ಆರ್ಥಿಕ ಕಾರಣಗಳು ಹೇಗೆ ಪೂರಕವಾದವು. ವಿವರಿಸಿ<br>1857ರ ದಂಗೆಗೆ ಆರ್ಥಿಕ ಕಾರಣಗಳು:<br>➢ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ<br>➢ ಭಾರತದ ಕರಕುಶಲಮತ್ತು ದೇಶೀಯ ಕೈಗಾರಿಕೆಗಳ ಅವನತಿ<br>➢ ಕರಕುಶಲಕಾರರು ನಿರುದ್ಯೋಗಿಗಳಾದರು<br>➢ ಭಾರತದ ಗುಡಿ ಕೈಗಾರಿಕೆಗಳ ನಷ್ಟ ಅನುಭವಿಸಿ ನಾಶವಾದವು<br>➢ ಜಮೀನ್ದಾರರಿಂದ ರೈತರ ಶೋಷಣೆ<br>➢ ಇನಾಂ ಭೂಮಿ ವಾಪಸ್ ಪಡೆದಿದ್ದು<br>➢ ಕೃಷಿಕರು ಆರ್ಥಿಕ ಸಂಕಷ್ಟ ಅನುಭವಿಸಿದರು | 3 |
| 28. | ಶ್ರೀರಂಗಪಟ್ಟಣ ಒಪ್ಪಂದದ ಪ್ರಮುಖ ಅಂಶಗಳೆಂದರೆ:<br>➢ 1792ರಲ್ಲಿ ಶ್ರೀರಂಗಪಟ್ಟಣ ಒಪ್ಪಂದದೊಂದಿಗೆ ಮೂರನೇ ಮೈಸೂರುಯುದ್ಧ ಅಂತ್ಯ<br>➢ ಟಿಪ್ಪುವನ್ನು ಮಣಿಸಲು ಅಸಮಾನ ಷರತ್ತುಗಳನ್ನು ಹೇರಲಾಯಿತು<br>➢ ಟಿಪ್ಪು ತನ್ನ ಅರ್ಧರಾಜ್ಯವನ್ನು ಬಿಟ್ಟುಕೊಡಬೇಕಾಯಿತು<br>➢ ಮೂರು ಕೋಟಿ ರೂಪಾಯಿಯುದ್ಧ ನಷ್ಟ ಪರಿಹಾರವಾಗಿ ನೀಡಬೇಕಾಯಿತು<br>➢ ತನ್ನಇಬ್ಬರು ಮಕ್ಕಳನ್ನು ಒತ್ತೆಯಾಳುಗಳಾಗಿ ಇಡಬೇಕಾಯಿತು<br>➢ ಸೆರೆ ಸಿಕ್ಕ ಸೈನಿಕರ ಬಿಡುಗಡೆಗೊಳಿಸಲಾಯಿತು.<br>➢ ಬ್ರಿಟಿಷ್ ಸೈನ್ಯ ಹಿಂತೆಗೆದು ಕೊಳ್ಳಲಾಯಿತು. | |
| 29. | ದ್ವಿತೀಯ ಮಹಾಯುದ್ಧಕ್ಕೆ ಭಾರತದ ಕೊಡುಗೆಗಳು:<br>➢ ಭಾರತ ಯುದ್ಧದಲ್ಲಿ ತನ್ನದೇ ರೀತಿಯಲ್ಲಿ ಭಾಗವಹಿಸಿತು<br>➢ ಭಾರತದ ಸೇನೆಯು ಪಶ್ಚಿಮ ಏಷಿಯಾ, ಬರ್ಮಾ, ಇರಾಕ್, ಇರಾನ್, ಸಿರಿಯಾ, ಆಫ್ರಿಕಾ, ಇಟಲಿಗಳಲ್ಲಿ ಹೋರಾಡಿತು | 3 |

| | | |
|---|---|---|
| | ➢ ಭಾರತವು ಪಶ್ಚಿಮ ಜರ್ಮನಿ ಹಾಗೂ ಪೂರ್ವ ಜಪಾನ್‌ಗೆ ಯುದ್ಧ ವಿಭಜನಾ ರೇಖೆಯಾಗಿತ್ತು<br>➢ ಭಾರತೀಯ ಸಂಪನ್ಮೂಲಗಳು, ಸಿಪಾಯಿಗಳು ಮಿತ್ರರಾಷ್ಟ್ರಗಳು ಜಯಗಳಿಸಲು ಸಹಾಯಕವಾದವು<br>➢ ಭಾರತೀಯ ಸೇನೆಯ ಭಾಗವಹಿಸುವಿಕೆಯಿಂದ ಜರ್ಮನಿಯನ್ನು ಸೋಲಿಸಲು ಕಾರಣವಾಯಿತು<br>➢ ಈ ಯುದ್ಧಕ್ಕಾಗಿ ಬ್ರಿಟನ್ ಭಾರತದ ಕೃಷಿ ವಸ್ತುಗಳು, ಕೈಗಾರಿಕಾ ಪದಾರ್ಥಗಳನ್ನು ಬಳಸಿಕೊಂಡಿತು<br>➢ ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸಲು ಆರ್ಡಿನೆನ್ಸ್ ಕಾರ್ಖಾನೆಗಳನ್ನು ಮೇಲ್ದರ್ಜೆಗೇರಿಸಿತು<br>➢ ದೊಡ್ಡ, ಉತ್ತಮ ಯುದ್ಧ ಸಾಮಗ್ರಿಗಳ ಉಪಯೋಗವನ್ನು ಪಡೆದುಕೊಳ್ಳಲಾಯಿತು | |
| **30** | ಭಾರತ ಮತ್ತು ಚೀನಾ ನಡುವಿನ ಬಾಂಧವ್ಯವನ್ನು ಕುರಿತು:<br>➢ ಇತಿಹಾಸದ ಉದ್ದಕ್ಕೂ ಈ ರಾಷ್ಟ್ರಗಳು ಪರಸ್ಪರ ಸಂಬಂಧಗಳನ್ನು ಬೆಳೆಸಿಕೊಂಡಿವೆ<br>➢ ಭಾರತದ ಧೋರಣೆಯ ವಿರುದ್ಧ ಚೀನಾ ಟಿಬೇಟ್‌ನ ವಶ<br>➢ 1962 ರಲ್ಲಿ ಟಿಬೆಟ್ ವಿವಾಧ ಉಲ್ಬಗೊಂಡು ಎರಡು ರಾಷ್ಟ್ರಗಳ ನಡುವೆ ಯುದ್ಧ ನಡೆದ ನಂತರದಲ್ಲಿಗಡಿ ಸಮಸ್ಯೆಯು ಉಲ್ಬಣಗೊಂಡಿತು.<br>➢ ಭಾರತ ಚೀನಾದ ಮಧ್ಯದ ಗಡಿ ಅಂತಿಮವಾಗಿಲ್ಲ<br>➢ ಎರಡು ರಾಷ್ಟ್ರಗಳ ಮಧ್ಯೆ ಗಡಿರೇಖೆ ನಿಖರವಾಗಿಲ್ಲ<br>➢ ಚೀನಾವು ಭಾರತದ ಭಾಗವಾಗಿರುವ ಅರುಣಾಚಪ್ರದೇಶ ತನಗೆ´ಸೇರಬೇಕೆಂದು ಪ್ರತಿಪಾದಿಸುತ್ತಿದೆ<br>➢ ಅಣ್ವಸ್ತ್ರಗಳ ತಯಾರಿಕೆ<br>➢ ವಿದೇಶಿ ವ್ಯಾಪಾರದ ಸವಾಲುಗಳು<br>➢ ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ | **3** |
| **31** | ಭಾರತದ ಗಡಿರೇಖೆಗಳನ್ನು ಮತ್ತು ನೆರೆ–ಹೊರೆ ದೇಶಗಳು:<br>ಭಾರತದ ಗಡಿರೇಖೆಗಳು:<br>➢ ರ್‍ಯಾಡ್‌ಕ್ಲಿಫ್ ರೇಖೆ – ಭಾರತ ಮತ್ತು ಪಾಕಿಸ್ತಾನದ ನಡುವೆ<br>➢ ಮ್ಯಾಕ್ ಮೋಹನ್ ರೇಖೆ – ಭಾರತ ಮತ್ತು ಚೀನಾದ ನಡುವೆ<br>➢ ಡ್ಯೂರಾಂಡ್ ರೇಖೆ – ಭಾರತ ಮತ್ತು ಆಫ್ಘಾನಿಸ್ತಾನದ ನಡುವೆ<br>ನೆರೆ–ಹೊರೆ ದೇಶಗಳು:<br>➢ ಪಾಕಿಸ್ತಾನ<br>➢ ಆಫ್ಘಾನಿಸ್ತಾನ<br>➢ ಚೀನಾ<br>➢ ನೇಪಾಳ<br>➢ ಭೂತಾನ್<br>➢ ಬಾಂಗ್ಲಾದೇಶ<br>➢ ಮ್ಯಾನ್ಮಾರ್<br>➢ ಶ್ರೀಲಂಕಾ | **3** |

ಅಥವಾ

**ಸಾರ್ವಜನಿಕ ಹಣಕಾಸು ಮತ್ತು ವೈಯುಕ್ತಿಕ ಹಣಕಾಸಿನ ನಡುವೆ ಇರುವ ವ್ಯತ್ಯಾಸಗಳು**

| ಸಾರ್ವಜನಿಕ ಹಣಕಾಸು | ವೈಯುಕ್ತಿಕ ಹಣಕಾಸು |
|---|---|
| 1. ಸರ್ಕಾರದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ | 1. ಒಬ್ಬ ವ್ಯಕ್ತಿ/ಕುಟುಂಬದ ಆದಾಯ-ವೆಚ್ಚಗಳಿಗೆ ಸಂಬಂಧಿಸಿದೆ |
| 2. ಸರ್ಕಾರವು ಮೊದಲು ತನ್ನ ವೆಚ್ಚವನ್ನುಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಆದಾಯ ಹೊಂದಿಸುತ್ತದೆ | 2. ಮೊದಲು ತನ್ನ ಆದಾಯ ಅಂದಾಜು ಮಾಡಿ, ಅದಕ್ಕನುಗುಣವಾಗಿ ವೆಚ್ಚ ಮಾಡುತ್ತಾರೆ |
| 3. ಇದನ್ನು ಶಾಸನ ಸಭೆಗಳಲ್ಲಿ ಚರ್ಚಿಲಾಗುತ್ತದೆ ಹಾಗೂ ಮಾಧ್ಯಮಗಳಲ್ಲಿ ಪ್ರಚಾರವಾಗುತ್ತದೆ | 3. ವೈಯುಕ್ತಿಕ ಹಣಕಾಸಿನ ವ್ಯವಹಾರಗಳನ್ನು ಆದಷ್ಟೂ ಗೌಪ್ಯವಾಗಿಡಲಾಗುತ್ತದೆ |
| 4. ಸರ್ಕಾರವು ಉಳಿತಾಯ ಮಾಡಿದರೆ ದೇಶದ ಪ್ರಗತಿ ಕುಂಠಿತವಾಗುತ್ತದೆ | 4. ವ್ಯಕ್ತಿ/ಕುಟುಂಬ ಉಳಿತಾಯ ಮಾಡಿದರೆ ಅದು ಅವರ ಪ್ರಗತಿಗೆ ಪೂರಕವಾಗುತ್ತದೆ |

**32** ಭಾರತದಲ್ಲಿರುವ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳೆಂದರೆ:

- ಕರ್ನಾಟಕ – ಶಿವನಸಮುದ್ರ, ತುಂಗಭದ್ರಾ, ಜೋಗ, ಆಲಮಟ್ಟಿ, ಕಾಳಿ
- ಆಂದ್ರಪ್ರದೇಶ – ನಾಗಾರ್ಜುನ ಸಾಗರ, ಶ್ರೀಶೈಲ, ಸಿಲೇರು ಯೋಜನೆ
- ತಮಿಳುನಾಡು – ಮೆಟ್ಟೂರು, ಪೈಕಾರ ವಿದ್ಯುತ್ ಯೋಜನೆ
- ಮಧ್ಯಪ್ರದೇಶ – ಬನ್ ಸಾಗರ, ಗಾಂಧಿ ಸಾಗರ
- ಮಹಾರಾಷ್ಟ್ರ – ಕೊಯ್ನಾ ಯೋಜನೆ, ಟಾಟಾ ಜಲ ವಿದ್ಯುತ್ ಯೋಜನೆ **3**
- ಒಡಿಶಾ – ಹಿರಾಕುಡ್ ಯೋಜನೆ, ಕೋಲಾಜ ಯೋಜನೆ
- ಬಿಹಾರ – ಕೋಸಿ ಯೋಜನೆ
- ಗುಜರಾತ್ – ಕಕ್ರಪಾರ ಯೋಜನೆ, ಕಾಡನ ಯೋಜನೆ

ಅಥವಾ

ಬ್ಯಾಂಕಿನಲ್ಲಿ ಖಾತೆ ತೆರೆಯುವುದರಿಂದ ಆಗುವ ಅನುಕೂಲಗಳೆಂದರೆ:

- ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು
- ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
- ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು
- ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
- ಹುಂಡಿಗಳನ್ನು ಸೋಡಿ ಮಾಡುವುದು.
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.

| | | |
|---|---|---|
| 33 | ➢ ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು<br>➢ ಬೆಲೆಬಾಳುವ ವಸ್ತುಗಳನ್ನು ತಮ್ಮ ಸುಪರ್ದಿನಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು<br><br>ಸಂಪರ್ಕ ಮಾಧ್ಯಮ ಎಂದರೆ – ಒಬ್ಬರಿಂದ ಮತ್ತೊಬ್ಬರಿಗೆ ಅಥವಾ ಸ್ಥಳದಿಂದ ಸ್ಥಳಕ್ಕೆ ಸುದ್ದಿ, ಸಮಾಚಾರಗಳನ್ನು ವಿನಿಯಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.<br><br>ಸಂಪರ್ಕ ಮಾಧ್ಯಮದ ಮಹತ್ವ:<br>➢ ಒಬ್ಬರಿಂದ ಮತ್ತೊಬ್ಬರಿಗೆ & ಸ್ಥಳದಿಂದ ಸ್ಥಳಕ್ಕೆ ತ್ವರಿತವಾಗಿ ಸಮಾಚಾರವನ್ನು ವಿನಿಮಯ ಮಾಡುವುದು.<br>➢ ಸರ್ಕಾರದ ನೀತಿ ನಿಯಮ & ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಸಂಪರ್ಕ ಮಾಧ್ಯಮ ನೆರವಾಗುತ್ತದೆ.<br>➢ ನೈಸರ್ಗಿಕ ಸಂಪತ್ತು & ವಿನಾಶಗಳು ಹವಾಗುಣ ಮುನ್ಸೂಚನೆಗಳನ್ನು ನಾವು ತಿಳಿಯಲು ಸಹಾಯಕವಾಗತ್ತದೆ.<br>➢ ವ್ಯಾಪಾರ, ವಾಣಿಜ್ಯ ಕೈಗಾರಿಕೆ ಕೃಷಿ ಇತ್ಯಾದಿಗಳ ಅಭಿವೃದ್ಧಿಗೂ ನೆರವಾಗುವುದು.<br>➢ ಮನರಂಜನೆ, ಪ್ರಪಂಚದ ದಿನನಿತ್ಯ ಮಾಹಿತಿಗಳನ್ನು ಪೂರೈಸುತ್ತದೆ.<br>➢ ದೇಶದ ಏಕತೆ & ಸಮಗ್ರತೆ ನಿರ್ವಹಣೆಗೂ ನೆರವಾಗುತ್ತದೆ<br><br>ಅಥವಾ<br>ಗ್ರಾಮೀಣಾಭಿವೃದ್ಧಿಯ ಮಹತ್ವ:<br>➢ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸುವುದು<br>➢ ಗ್ರಾಮೀಣ ಜನರ ದುಡಿಯುವ ಸಾಮರ್ಥ್ಯವನ್ನು ಹೆಚ್ಚಿಸುವುದು<br>➢ ಗ್ರಾಮೀಣ ಜನರು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದು<br>➢ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡುವುದು<br>➢ ಕೃಷಿ & ಕೃಷಿಯೇತರ ವಲಯಗಳ ಅಭಿವೃದ್ಧಿ<br>➢ ರಾಷ್ಟ್ರೀಯ ಆದಾಯ & ತಲಾದಾಯ ಹೆಚ್ಚಾಗುತ್ತದೆ.<br>➢ ಸಂಪತ್ತಿನ ಸಮಾನ ಹಂಚಿಕೆಯನ್ನು ಮಾಡುತ್ತದೆ<br>➢ ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ<br>➢ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಳ್ಳಿಗರು ಭಾಗವಹಿಸುವಂತೆ ಮಾಡುವುದು | 3 |

**V** **ಕೆಳಗಿನ ಪ್ರಶ್ನೆಗಳಿಗೆ 7 / 8 ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ : 4X4=16**

**34.** ರೆಗ್ಯುಲೇಟಿಂಗ್ ಆಕ್ಟ್‌ನ ಪ್ರಮುಖ ಅಂಶಗಳು: **4**

- 1773ರಲ್ಲಿ ರೆಗ್ಯುಲೇಟಿಂಗ್ ಆಕ್ಟ್‌ನ್ನು ಜಾರಿಗೆ ತರಲಾಯಿತು
- ಕಂಪನಿಯ ಮೇಲೆ ನಿಯಂತ್ರಣ ಸಾಧಿಸಲು ಈ ಕಾಯ್ದೆ ಜಾರಿಗೊಂಡಿತು
- ಬಂಗಾಳದ ಪ್ರಸಿಡೆನ್ಸಿಯು ಉಳಿದ ಎರಡು ಪ್ರಸಿಡೆನ್ಸಿಗಳ ಮೇಲೆ ಅಧಿಕಾರವನ್ನು ಪಡೆಯಿತು
- ಬಂಗಾಳದ ಗವರ್ನರನು ಮೂರು ಪ್ರಸಿಡೆನ್ಸಿಗಳಿಗೆ ಗವರ್ನರ್ ಜನರಲ್ ಆದನು
- ಗವರ್ನರ್‌ನಿಗೆ ಬಾಂಬೆ ಮತ್ತು ಮದರಾಸು ಪ್ರಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ ನೀಡಿತು
- ಬಂಗಾಳದ ಸರ್ಕಾರ ಮತ್ತು ನಿರ್ದೇಶಕರ ಮಂಡಳಿಯ ಅನುಮತಿಯಿಲ್ಲದೆ ಯಾರ ಮೇಲೂ ಯುದ್ಧ ಘೋಷಿಸುವಂತಿಲ್ಲ ಹಾಗೂ ಸಂಧಾನ ನಡೆಸುವಂತಿಲ್ಲ
- ಕಲ್ಕತ್ತಾದಲ್ಲಿ ಈ ಕಾಯ್ದೆಯ ಮೇರೆಗೆ ಸುಪ್ರೀಂ ಕೋರ್ಟ್ ಅನ್ನು ಸ್ಥಾಪಿಸಲಾಯಿತು
- ಭಾರತದ ಆಡಳಿತ ವ್ಯವಸ್ಥೆಯನ್ನು ಇಂಗ್ಲೆಂಡಿನ ಸರ್ಕಾರದ ಅಧೀನಕ್ಕೆ ತರುವ ಬಹುದೊಡ್ಡ ನಿರ್ಣಯ

**ಅಥವಾ**

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಮಹತ್ವ:


- 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭ
- ಕ್ರಿಪ್ಸ್ ಆಯೋಗವು ಕೆಲವು ಸಲಹೆಗಳನ್ನು ಭಾರತೀಯರು ಮುಂದಿಟ್ಟರು
- ಕಾಂಗ್ರೇಸ್ ಇದನ್ನು ಒಪ್ಪದೆ ಚಳುವಳಿಗೆ ಕರೆ ನೀಡಿದರು
- ಬ್ರೀಟಿಷರೇ ಭಾರತ ಬಿಟ್ಟು ತೊಲಗಿ ಈ ಚಳುವಳಿಯ ಆಶಯವಾಗಿತ್ತು
- ಗಾಂಧೀಜಿಯವರು ಮಾಡು ಇಲ್ಲವೇ ಮಡಿ ಕರೆ ನೀಡಿದರು
- ಬಹುತೇಕ ಕಾಂಗ್ರೇಸ್ ನಾಯಕರ ಬಂಧನವಾಯಿತು
- ಜಯಪ್ರಕಾಶ್ ನಾರಾಯಣ ಚಳುವಳಿಯನ್ನು ಮುಂದುವರಿಸಿದರು
- ದೇಶದ ಗಡಿಯಾಚೆಗೂ ಚಳುವಳಿಗಳು ಪ್ರಾರಂಭವಾದವು

**35.**

ವಿಶ್ವಸಂಸ್ಥೆಯ ಸಾಧನೆಗಳೆಂದರೆ:

- ವಿಶ್ವಸಂಸ್ಥೆ ಹಲವಾರು ರಾಜಕೀಯ ಸಂಘರ್ಷಗಳನ್ನು ನಿವಾರಿಸಿದೆ.
- ಸುಯೆಜ್ ಕಾಲುವೆ ಬಿಕ್ಕಟ್ಟು, ಇರಾನ್ ಸಂಘರ್ಷಗಳ ಶಮನ
- ಇಂಡೋನೇಷ್ಯಾ, ಕಾಶ್ಮೀರ, ಪ್ಯಾಲೆಸ್ಟೈನ್, ಕೊರಿಯಾ ಸಮಸ್ಯೆಗಳಿಗೆ ಪರಿಹಾರ
- ಹಂಗೇರಿ, ಕಾಂಗೋ, ಸೈಪ್ರೆಸ್, ಅರಬ್–ಇಸ್ರೇಲ್, ನಮೀಬಿಯಾ, ಅಫ್ಘಾನಿಸ್ತಾನ ಇತ್ಯಾದಿ ವಿವಾದಗಳ ಪರಿಹಾರಕ್ಕಾಗಿ ವಿಶ್ವಸಂಸ್ಥೆ ಶ್ರಮಿಸಿದೆ.

| | | |
|---|---|---|
| | ➢ ನಿಶ್ಶಸ್ತ್ರೀಕರಣದ ನಿಟ್ಟಿನಲ್ಲಿಯೂ ವಿಶ್ವಸಂಸ್ಥೆ ನಿರಂತರ ಪ್ರಯತ್ನ ಮಾಡುತ್ತಿದೆ.<br>➢ ಇದೀಗ ಶೀತಲ ಸಮರದ ಕಾಲಘಟ್ಟ ಮುಗಿದಿದೆ<br>➢ ವಿಶ್ವ ಶಾಂತಿಯ ನೆಲೆಯಲ್ಲಿ ವಿಶ್ವ ಸಂಸ್ಥೆಯ ಪ್ರಭಾವೀ ಕಾರ್ಯಕ್ಕೆ ಉತ್ತಮ ವಾತಾವರಣ ನಿರ್ಮಾಣಗೊಂಡಿದೆ.<br>➢ ಸಾಮಾಜಿಕ ಪ್ರಗತಿಗೆ ಯತ್ನಿಸುತ್ತಿದೆ<br>➢ ಉತ್ತಮ ಜೀವನ ಮಟ್ಟಕ್ಕೆ ಪ್ರಯತ್ನಿಸುತ್ತಿದೆ<br>➢ ವಿಶ್ವಸಂಸ್ಥೆಯ ಪ್ರಗತಿ ಯೋಜನೆ ರೂಪಿಸಿದೆ<br>➢ 1948ರಲ್ಲಿ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ<br>➢ ವರ್ಣಭೇದ ನೀತಿ ಅಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ<br>➢ ಸಾಮ್ರಾಜ್ಯಶಾಹಿತ್ವ, ವಸಾಹತುಶಾಹಿತ್ವಗಳನ್ನು ವಿವಾರಿಸಿದೆ | **4** |
| **36.** | ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕ ಶಕ್ತಿಯಾಗಿದ್ದರು.ಹೇಗೆಂದರೆ:<br>➢ ಜೀವನ ಪ್ರೀತಿಯಲ್ಲಿರುವ ಮಹತ್ವ ತೆರೆದಿಟ್ಟರು<br>➢ ಭಾರತೀಯರನ್ನು ಎಚ್ಚರಗೊಳಿಸಿದ ವೀರ ಸನ್ಯಾಸಿ<br>➢ ವ್ಯಕ್ತಿ ಮತ್ತು ವ್ಯಕ್ತಿ ಇರುವಿಕೆಗೆ ಮಹತ್ವ<br>➢ ವ್ಯಕ್ತಿ ಸಾಮರ್ಥ್ಯಕ್ಕೆ ಮಹತ್ವ<br>➢ ಮೋಕ್ಷಕ್ಕಾಗಿ ಸಮಾಜ ಸೇವೆ ಮುಖ್ಯ<br>➢ ಇವರ ಚಿಂತನೆಗಳಿಂದ ಅನೇಕರು ಪ್ರೇರಣೆ<br>➢ ಏಳಿರಿ, ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ಸಂದೇಶ<br>➢ ಸರ್ವ ಧರ್ಮ ಸಮನ್ವಯ ತತ್ವದ ಪ್ರಚಾರ<br>➢ ಯುವ ಶಕ್ತಿಯ ಪ್ರೇರಕ ಶಕ್ತಿಯಾಗಿದ್ದರು | **4** |
| **37.** | ಮಣ್ಣಿನ ಸವೆತಕ್ಕೆ ಕಾರಣ ಮತ್ತು ಪರಿಣಾಮಗಳು:<br>ಮಣ್ಣಿನ ಸವೆತಕ್ಕೆ ಕಾರಣಗಳು:<br>➢ ಅರಣ್ಯನಾಶ<br>➢ ಅತಿಯಾಗಿ ಮೇಯಿಸುವುದು<br>➢ ವರ್ಗಾವಣೆ ಬೇಸಾಯ ಪದ್ದತಿ<br>➢ ಅವೈಜ್ಞಾನಿಕ ಬೇಸಾಯ ಪದ್ದತಿ<br>➢ ಅಧಿಕ ನೀರಾವರಿ ಬಳಕೆ<br>➢ ಇಟ್ಟಿಗೆ, ಹೆಂಚು, ಮಡಿಕೆ ಇತ್ಯಾದಿಗಳ ತಯಾರಿಕೆ | **4** |

| | | |
|---|---|---|
| VI<br>38 | ಪರಿಣಾಮಗಳು:<br>➢ ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ<br>➢ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತದೆ<br>➢ ಕೃಷಿ ಉತ್ಪಾದನಾ ಸಾಮರ್ಥ್ಯ ಕಡಿಮೆ<br>➢ ಅಂತರ್ಜಲ ಮಟ್ಟದಲ್ಲಿ ಕುಸಿತ<br>➢ ಬರ ಪರಿಸ್ಥಿತಿ ಹೆಚ್ಚುತ್ತದೆ<br>➢ ಚಿಲುಮೆಗಳು ಬತ್ತಿ ಹೋಗುತ್ತವೆ<br>➢ ಇಂಗುವ ನೀರಿನ ಪ್ರಮಾಣ ಕಡಿಮೆ<br>**ಭಾರತದ ನಕಾಶೆಯನ್ನು ಬರೆದು ಕೆಳಗಿನವುಗಳನ್ನು ಗುರುತಿಸಿರಿ :** **1+4=5**<br>ಎ. ಮಲಬಾರ್ ತೀರ<br>ಬಿ. ರೊಯ್ಲಿ<br>ಸಿ. ಕಾಂಡ್ಲ<br>ಡಿ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ<br><br> | **5** |

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

===========================================================

**ಅಭ್ಯಾಸ ಪತ್ರಿಕೆ–7**

*******************************************************************************

**ಮಾದರಿ ಉತ್ತರಗಳು**

| ಪ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I | **ಪ್ರತಿ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅದನ್ನು ಪೂರ್ಣಗೊಳಿಸಲು ಸರಿಯಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ನಿಮ್ಮ ಉತ್ತರ ಪತ್ರಿಕೆಯಲ್ಲಿ ಬರೆಯಿರಿ. 1X8=8** | |
| 1. | ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಗೆ ಕಾರಣವಾದ ಶಾಸನ<br>(A) ರೆಗ್ಯುಲೇಟಿಂಗ್ ಕಾಯ್ದೆ | **1** |
| 2 | 'ನ್ಯೂ ಇಂಡಿಯಾ' ಪತ್ರಿಕೆಯನ್ನು ಪ್ರಾರಂಭಿಸಿದವರು<br>(B) ಆನಿಬೆಸೆಂಟ್ | **1** |
| 3 | ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಕಾರ್ಯಕ್ರಮ<br>(D) ಸ್ತ್ರೀಶಕ್ತಿ ಸಂಘ | **1** |
| 4 | ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು<br>(A) ಮೇಧಾ ಪಾಟ್ಕರ್ | **1** |
| 5 | ಬಾಲ ಕಾರ್ಮಿಕರ ಸಮಸ್ಯೆಗೆ ಮುಖ್ಯ ಕಾರಣ<br>(B) ಕಡು ಬಡತನ | **1** |

| | | |
|---|---|---|
| 6 | ಈ ಕೆಳಗಿನವುಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದು<br>(C) ಕರ್ನಾಟಕ – ಕಾಫಿ ತುಂತುರು | 1 |
| 7 | ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ<br>(C) ಸ್ಟ್ಯಾಂಪು ತೆರಿಗೆ | 1 |
| 8. | ಭಾರತದಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ವರ್ಷ<br>(A) 1986 | 1 |
| II | **ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ. 8×1=8** | |
| 9. | ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ಪ್ರಾರಂಭಿಸಿದ ಮೈಸೂರಿನ ಒಡೆಯರು<br>ರಾಜ ಒಡೆಯರು | 1 |
| 10. | ತೀನ್ ಮೂರ್ತಿ ಚೌಕ – ದೆಹಲಿಯಲ್ಲಿದೆ | 1 |
| 11. | ನಿರ್ದಿಷ್ಟ ಬಗೆಯ ಅಥವಾ ಎಲ್ಲಾ ಬಗೆಯ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ಅಥವಾ ಸಂಪೂರ್ಣವಾಗಿ ಇಲ್ಲವಾಗಿಸುವ ನೇರ ಪ್ರಕ್ರಿಯೆಯನ್ನು ನಿಶ್ಯಸ್ತ್ರೀಕರಣ ಎನ್ನುವರು. | 1 |
| 12. | ಹೆಣ್ಣು ಭ್ರೂಣ ಹತ್ಯೆಯಿಂದಾಗುವ ಪರಿಣಾಮಗಳು – ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿಗೆ ಅಗೌರವ | 1 |
| 13. | ಉಷ್ಣವಲಯದ ಎಲೆಯುದುರಿಸುವ ಅರಣ್ಯಗಳು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ತಮ್ಮ ಎಲೆಗಳನ್ನು ಉದುರಿಸುವುದರಿಂದ 'ಮಾನ್ಸೂನ್ ಅರಣ್ಯಗಳು' ಎಂದು ಕರೆಯುತ್ತಾರೆ. | 1 |
| 14. | ದಾಮೋದರ ನದಿಯು ಪಶ್ಚಿಮ ಬಂಗಾಳದಲ್ಲಿ ಪ್ರವಾಹವನ್ನುಂಟುಮಾಡಿ ಅಪಾರವಾದ ಬೆಳೆ ಹಾನಿ, ಆಸ್ತಿ ಹಾನಿ ಮತ್ತು ಪ್ರಾಣ ಹಾನಿ ಸಂಭವಿಸುವುದರಿಂದ 'ಬಂಗಾಳದ ಕಣ್ಣೀರಿನ ನದಿ' ಎಂದು ಕರೆಯುತ್ತಿದ್ದರು. | 1 |

| | | |
|---|---|---|
| 15. | 1993ರ ಭಾರತದ ಸಂವಿಧಾನ 73ನೇ ತಿದ್ದುಪಡಿಯ ಉದ್ದೇಶ – ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತರುವುದು. | 1 |
| 16. | ಭಾರತ ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿರುವ ಪ್ರಮುಖ ಉದ್ದೇಶ– ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅವುಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು | 1 |
| III. | **ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ / ಅಂಶಗಳಲ್ಲಿ ಉತ್ತರಿಸಿರಿ: 8×2=16** | |
| 17. | ಲಾರ್ಡ್ ವೆಲ್ಲೆಸ್ಲಿ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆ ಹೇಗಾಯಿತು?<br>➢ ಸಹಾಯಕ ಸೈನ್ಯ ಪದ್ಧತಿ<br>➢ ಹೊಸ ರಾಜ್ಯಗಳ ಮೇಲೆ ಯುದ್ಧ ಸಾರುವುದು<br>➢ ಕಂಪನಿಯ ಅಧೀನಕ್ಕೊಳಪಟ್ಟ ರಾಜ್ಯಗಳನ್ನು ನೇರ ನಿಯಂತ್ರಣಕ್ಕೊಳಪಡಿಸಿಕೊಳ್ಳುವುದು. | 2 |
| 18. | ಗೋವಾವನ್ನು ಪೋರ್ಚುಗೀಸರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು?<br>➢ ಸ್ವಾತಂತ್ರ್ಯ ನಂತರವೂ ಗೋವಾ ಪೋರ್ಚುಗೀಸರ ವಸಾಹತುವಾಗಿ ಮುಂದುವರಿಯಿತು<br>➢ ಪೋರ್ಚುಗೀಸರಿಗೆ ಗೋವಾವನ್ನು ತೆರವುಗೊಳಿಸಲು ಆದೇಶಿಸಿದರೂ ಬಗ್ಗಲಿಲ್ಲ<br>➢ ಪೋರ್ಚುಗೀಸರು ಆಫ್ರಿಕಾ ಹಾಗೂ ಯೂರೋಪ್‌ಗಳಿಂದ ಸೇನೆಯನ್ನು ಕರೆಸಿಕೊಂಡರು<br>➢ 1955ರಲ್ಲಿ ಭಾರತದ ವಿವಿಧ ಭಾಗಗಳಿಂದ ಸತ್ಯಾಗ್ರಹಿಗಳು ಗೋವಾವನ್ನು ಪ್ರವೇಶಿಸಿದರು.<br>➢ ಚಳವಳಿಗಾರರು ಪೋರ್ಚುಗೀಸರು ಗೋವಾವನ್ನು ಬಿಡಲು ಒತ್ತಾಯಿಸಿದರು.<br>➢ ಭಾರತ ಸೈನ್ಯ ಮಧ್ಯ ಪ್ರವೇಶಿಸಿ ಗೋವಾವನ್ನು 1961 ರಲ್ಲಿ ವಶಪಡಿಸಿಕೊಂಡಿತು.<br>➢ 1987ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು. | |
| 19. | ಅನ್ಯರಾಷ್ಟ್ರಗಳೊಡನೆ ಭಾರತಕ್ಕೆ ಉತ್ತಮ ಬಾಂಧವ್ಯ ಅವಶ್ಯಕ. ಏಕೆ?<br>➢ ಒಂದು ರಾಷ್ಟ್ರವು ಬೇರೆ ರಾಷ್ಟ್ರಗಳ ಜೊತೆಗೆ ವ್ಯವಹರಿಸದೆ ಉತ್ತಮ ಸಂಬಂಧ ಹೊಂದದೆ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ.<br>➢ ಪ್ರಸ್ತುತ ಜಾಗತೀಕರಣ ಮತ್ತು ಆಧುನೀಕರಣದ ಯುಗದಲ್ಲಿ ಒಂದು ರಾಷ್ಟ್ರವು ಅನ್ಯರಾಷ್ಟ್ರಗಳೊಡನೆ ಉತ್ತಮವಾದ ಸಂಬಂಧವನ್ನು ಹೊಂದುವುದು ಅನಿವಾರ್ಯವೂ, ಅಗತ್ಯವೂ ಆಗಿದೆ.<br>➢ ರಾಷ್ಟ್ರದ ಭದ್ರತೆಗೆ<br>➢ ರಾಷ್ಟ್ರದ ಆರ್ಥಿಕ ಸಂವರ್ಧನೆಗೆ<br>➢ ಒಂದು ದೇಶದ ಸಾಂಸ್ಕೃತಿಕ ಮೌಲ್ಯಗಳನ್ನು ಬೇರೆ ದೇಶದಲ್ಲಿ ಬಿತ್ತರಿಸಲು.<br><br>**ಅಥವಾ** | 2 |

ಮಾನವ ಹಕ್ಕುಗಳ ಪ್ರತಿಪಾದನೆಯ ನಿಟ್ಟಿನಲ್ಲಿ ಭಾರತವು ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ. ಈ ಹೇಳಿಕೆಯನ್ನು ಸಮರ್ಥಿಸಿ. **2**

- ಸಾರ್ವತ್ರಿಕ ಮಾನವ ಹಕ್ಕುಗಳನ್ನು ಭಾರತ ನಿರಂತರ ಪ್ರತಿಪಾದಿಸುತ್ತಾ ಬಂದಿದೆ.
- ಭಾರತ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನಮೂದಿಸಿದೆ.
- ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿಯೂ ವಿಶ್ವದಾದ್ಯಂತ ಮಾನವ ಹಕ್ಕುಗಳು ಸುರಕ್ಷಿತವಾಗಿರಬೇಕೆಂಬುದನ್ನು ಭಾರತ ಸಮರ್ಥಿಸುತ್ತಾ ಬಂದಿದೆ.
- ಮಾನವ ಹಕ್ಕುಗಳ ಶೋಷಣೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಸೊಂದಿಗೆ ಸಭೆಯೊಂದನ್ನು ನಡೆಸಿ ಪ್ರತಿಯೊಂದು ರಾಷ್ಟ್ರಗಳು ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿರಬೇಕೆಂದು ಸೂಚಿಸಿತು.
- ಇದರ ಪರಿಣಾಮವಾಗಿ ಮಾನವ ಹಕ್ಕುಗಳ ಸಂರಕ್ಷಣೆಗಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ.
- ಇದಕ್ಕೆ ಪೂರಕವಾಗಿ ಭಾರತದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವನ್ನು ರಚಿಸಲಾಗಿದೆ

20. ಸರ್ಕಾರವು ಅಸ್ಪೃಶ್ಯತೆಯ ನಿವಾರಣೆಗೆ ಹೇಗೆ ಪ್ರಯತ್ನಿಸುತ್ತಿದೆ?

- ಸಂವಿಧಾನದ 17ನೆಯವಿಧಿಯು ಅಸ್ಪೃಷ್ಯತಾ ಆಚರಣೆಯನ್ನು ನಿಷೇಧಿಸಿದೆ.
- ಭಾರತ ಸರ್ಕಾರ ಅಸ್ಪೃಷ್ಯತಾ ಅಪರಾದಗಳ ಕಾಯ್ದೆಯನ್ನು 1955ರಲ್ಲಿ ಜಾಗೊಳಿಸಿದೆ.
- ಇದರಲ್ಲಿ ಕಂಡುಬಂದ ಕೆಲವು ಲೋಪ ದೋಷಗಳನ್ನು ತಿದ್ದುಪಡಿಮಾಡಿ 'ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು 1976ರಲ್ಲಿ ಮಾರ್ಪಾಡುಗೊಳಿಸಲಾಯಿತು.
- ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧವಾಗಿರುತ್ತದೆ. **2**
- ಅಲ್ಲದೆ ಸಂವಿಧಾನಾತ್ಮಕವಾಗಿ ಸಾರ್ವತ್ರಿಕ ಮತದಾನದ ಹಾಗೂ ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ನಾಗರಿಕರಿಗೂ ನೀಡಲಾಗಿದೆ.
- ವಿಶೇಷವಾಗಿ ಪರಿಶಿಷ್ಟರನ್ನೊಳಗೊಂಡಂತೆ ·ಹಿಂದುಳಿದ ಜಾತಿಯವರಿಗೆ ಶೈಕ್ಷಣಿಕ ಮತ್ತು ಉದ್ಯೋಗವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
- 1989ರ ಶಾಸನವು ಅಸ್ಪೃಶ್ಯತೆಯ ನಿರ್ಮೂಲನೆ ಕುರಿತಾದ ವಿಶೇಷ ಜವಾಬ್ದಾರಿಗಳನ್ನು ರಾಜ್ಯಸರ್ಕಾರಗಳಿಗೆ ವಹಿಸಿದೆ.

**ಅಥವಾ**

ಜನಮಂದೆಯನ್ನು ನಿಯಂತ್ರಿಸಲು ನೀವು ಯಾವ ಕ್ರಮಗಳನ್ನು ಸೂಚಿಸುವಿರಿ.

- ಅಧಿಕಾರಿಗಳ ಸಮಯ ಪ್ರಜ್ಞೆ
- ಪೋಲಿಸ್ ಪಡೆ
- ರಕ್ಷಣಾ ಪಡೆ ಮತ್ತು
- ಕಾಯ್ದೆ–ಕಾನೂನು ಮುಂತಾದ ಸಾಧನಗಳ ಮೂಲಕ ಜನಮಂದೆಯನ್ನು ನಿಯಂತ್ರಿಸಬಹುದು.

| | | |
|---|---|---|
| 21. | ಭೌಗೋಳಿಕ ಮಾಹಿತಿ ವ್ಯವಸ್ಥೆಯ ಉಪಯೋಗಗಳಾವುವು?<br>➢ ಭೌಗೋಳಿಕ ಮಾಹಿತಿ ವ್ಯವಸ್ಥೆಯು ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆ.<br>➢ ಮಾಹಿತಿಯನ್ನು ಆಕರ್ಷಕ ಮತ್ತು ಸಷ್ಟವಾಗಿ ನೀಡುತ್ತದೆ<br>➢ ವಿವಿಧ ಬಗೆಯ ಭೌಗೋಳಿಕ, ಸಾಮಾಜಿಕ, ಆರ್ಥಿಕ ಭೂಮೇಲ್ಮೈ ಮಾಹಿತಿಯನ್ನು ವಿಶ್ಲೇಷಿಸಬಹುದು<br>➢ ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸಹಾಯಕ<br>➢ ಇದು ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು, ನಕ್ಷೆಗಳನ್ನು ಅಗತ್ಯಕ್ಕೆ ತಕ್ಕಂತೆ ಅತೀ ಶೀಘ್ರದಲ್ಲಿ ಪಡೆಯಬಹುದು ಮತ್ತು ಮಾರ್ಪಡಿಸಬಹುದು | 2 |
| 22. | ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?<br>➢ ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಹಸಿರು ಕ್ರಾಂತಿ ಸಂಭವಿಸಿದೆ<br>➢ ಅಧಿಕ ಇಳುವರಿಯ ಬಿತ್ತನೆ ಬೀಜ, ರಸಗೊಬ್ಬರ, ನೀರಾವರಿ ಬಳಕೆಯಲ್ಲಿ ಪ್ರಗತಿ<br>➢ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ<br>➢ ಕೃಷಿ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಸುಧಾರಣೆ | 2 |
| 23. | ಸಾರ್ವಜನಿಕ ವೆಚ್ಚದ ಉದ್ದೇಶವು ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಸ್ಪಷ್ಟೀಕರಿಸಿ.<br>➢ ರಾಷ್ಟ್ರದ ರಕ್ಷಣೆಯ ದೃಷ್ಟಿಯಿಂದ<br>➢ ದೇಶವನ್ನು ಆರ್ಥಿಕವಾಗಿ ಅಭಿವೃದ್ಧಿ ಪಡಿಸಬೇಕಾಗಿರುವುದರಿಂದ<br>➢ ಆಧುನಿಕ ರಾಜ್ಯಗಳು ಕಲ್ಯಾಣ ರಾಜ್ಯಗಳಾಗಿರುವುದರಿಂದ ಸರ್ಕಾರದ ಕಾರ್ಯಕ್ಷೇತ್ರ ಹೆಚ್ಚಾಗುತ್ತಿರುವುದರಿಂದ.<br>➢ ಸಾಮಾಜಿಕ ಆರ್ಥಿಕ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವುದು.<br>➢ ಸಾಮಾಜಿಕ ಕಲ್ಯಾಣವನ್ನು ಅಧಿಕಗೊಳಿಸುವುದು. ಸಂಪೂರ್ಣ ಉದ್ಯೋಗ ಸಾಧಿಸುವುದು<br>➢ ಕೃಷಿ, ಉದ್ಯಮ, ವ್ಯವಹಾರ & ಗ್ರಾಮೀಣ ಅಭಿವೃದ್ಧಿ ಮುಂತಾದವು | 2 |
| 24. | ಬಳಕೆದಾರರು ಅನುಭವಿಸುತ್ತಿರುವ ಸಂಕಷ್ಟಗಳಾವುವು?<br>➢ ಮಧ್ಯವರ್ತಿಗಳ ಮೋಸ<br>➢ ತೂಕ ಮತ್ತು ಅಳತೆಯಲ್ಲಿ ಮೋಸ<br>➢ ಸರಿಯಾದ ವಸ್ತುಗಳು ದೊರೆಯುವುದಿಲ್ಲ<br>➢ ಜಾಗೃತಿಯ ಕೊರತೆ<br>➢ ಕಾನೂನಿನ ಅನುಷ್ಠಾನ ಸಮರ್ಪಕವಾಗಿಲ್ಲ. | 2 |

| | | |
|---|---|---|
| IV | ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರರಿಂದ ಆರು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ. **9×3=27** | |
| 25. | ಭಾರತಕ್ಕೆ ಹೊಸ ಸಮುದ್ರಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ಚರ್ಚಿಸಿರಿ.<br>➢ ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರ ಕಾನ್‌ಸ್ಟಾಂಟಿನೋಪಲ್ ಮೂಲಕ ನಡೆಯುತ್ತಿತ್ತು<br>➢ ಭಾರತದ ಸಾಂಬಾರು ಪದಾರ್ಥಗಳಿಗೆ ಯೂರೋಪಿನ ಮಾರುಕಟ್ಟೆಗಳಲ್ಲಿ ಬಾರಿ ಬೇಡಿಕೆ ಇತ್ತು.<br>➢ 1453ಲ್ಲಿ ಕಾನ್‌ಸ್ಟಾಂಟಿನೋಪಲ್‌ನ್ನು ಟರ್ಕರು ವಶಪಡಿಸಿಕೊಂಡರು<br>➢ ಟರ್ಕರು ಈ ಮಾರ್ಗದ ವ್ಯಾಪಾರದ ಮೇಲೆ ತೀವ್ರ ತೆರಿಗೆ ವಿಧಿಸತೊಡಗಿದರು<br>➢ ಈ ಮಾರ್ಗದ ವ್ಯಾಪಾರವು ವ್ಯಾಪಾರಿಗಳಿಗೆ ಲಾಭದಾಯಕವೆನಿಸಲಿಲ್ಲ<br>➢ ಪೋರ್ಚುಗೀಸರು ಸಾಹಸಿ ನಾವಿಕರನ್ನು ಪ್ರೋತ್ಸಾಹಿಸಿದರು.<br>➢ ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದು, ಭೂಪಟಗಳು ನೆರವಿಗೆ ಬಂದವು. | |
| 26. | ಕಿತ್ತೂರಿನ ಹೋರಾಟದಲ್ಲಿ ರಾಣಿ ಚೆನ್ನಮ್ಮಳ ಪಾತ್ರವನ್ನು ವಿವರಿಸಿ.<br>➢ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ವಿರುದ್ಧ ಹೋರಾಟ<br>➢ ಶಿವಲಿಂಗಪ್ಪನನ್ನು ದತ್ತು ತೆಗೆದುಕೊಂಡು ಆಳ್ವಿಕೆ ಪ್ರಾರಂಭ<br>➢ ಥ್ಯಾಕರೆ ಕಿತ್ತೂರನ್ನು ವಶಪಡಿಸಿಕೊಳ್ಳಲು ಯತ್ನ<br>➢ ಯುದ್ಧ ಅನಿವಾರ್ಯ ಎಂದು ಬಗೆದಳು<br>➢ ಕಿತ್ತೂರು ಸೇನೆ ಬ್ರಿಟಿಷರ ಮೇಲೆ ದಾಳಿ<br>➢ ಥ್ಯಾಕರೆ ಗುಂಡೇಟಿಗೆ ಬಲಿಯಾದ<br>➢ ಬ್ರಿಟಿಷ್ ಸೈನಿಕರ ಸೆರೆ<br>➢ ರಾಣಿ ಸೆರೆಸಿಕ್ಕಿ ಗಲ್ಲಿಗೇರಿದಳು<br>➢ ಕಿತ್ತೂರನ್ನು ವಶಪಡಿಸಿಕೊಳ್ಳಲೇಬೇಕೆಂಬ ದೃಢ ನಿರ್ಧಾರದಿಂದ ಬ್ರಿಟಿಷರು ಮತ್ತಷ್ಟು ಸನ್ನದ್ಧರಾದರು. ಕರ್ನಲ್ ಡೀಕ್‌ನ ನೇತೃತ್ವದಲ್ಲಿ ಬ್ರಿಟಿಷ್ ಸೈನ್ಯ ಕಿತ್ತೂರಿಗೆ ಮುತ್ತಿಗೆ ಹಾಕಿತು.<br>➢ ಸೈನಿಕರು ವೀರಾವೇಶದಿಂದ ಹೋರಾಡಿದರು.<br>➢ ಬ್ರಿಟಿಷರ ಸೈನ್ಯದಿಂದ ತಪ್ಪಿಸಿಕೊಂಡ ಚೆನ್ನಮ್ಮನನ್ನು ಸೆರೆಹಿಡಿಯಲಾಯಿತು.<br>➢ ಕಿತ್ತೂರು ಬ್ರಿಟಿಷರ ವಶವಾಯಿತು.<br>➢ ಚೆನ್ನಮ್ಮ ಮತ್ತು ಮೊದಲಾದವರನ್ನು ಬೈಲಹೊಂಗಲ ಕೋಟೆಯ ಸೆರೆಮನೆಯಲ್ಲಿ ಇರಿಸಲಾಯಿತು.<br>➢ ಚೆನ್ನಮ್ಮ ಮರಣ ಹೊಂದಿದರು. | **3** |
| 27. | ಫ್ಯಾಸಿಸ್ಟ್‌ವಾದದ ಲಕ್ಷಣಗಳೇನು?<br>➢ ಉಗ್ರರಾಷ್ಟ್ರೀಯವಾದ<br>➢ ಪರಕೀಯ ಶಕ್ತಿಗಳ ನಾಶ<br>➢ ಹಿಂಸೆಯ ವೈಭವೀಕರಣ<br>➢ ಜನಾಂಗೀಯ ಶ್ರೇಷ್ಠತೆ<br>➢ ಸಾಮ್ರಾಜ್ಯವಾದದ ವಿಸ್ತರಣೆ | **3** |

| | | |
|---|---|---|
| | ➢ ನರಮೇಧಗಳಿಗೆ ಬೆಂಬಲ<br><br>**ಅಥವಾ**<br>ಸ್ವಾಮಿ ದಯಾನಂದ ಸರಸ್ವತಿಯವರ ಆರ್ಯ ಸಮಾಜದ ಸುಧಾರಣೆಗಳಾವುವು?<br>➢ 'ವೇದಗಳಿಗೆ ಹಿಂದಿರುಗಿ' ಎಂಬ ಘೋಷಣೆ<br>➢ ವಿಗ್ರಹಾರಾಧನೆ, ಜಾತಿಪದ್ಧತಿಯ ಖಂಡನೆ<br>➢ ಜಾತಿ ಯೋಗ್ಯತೆಯಿಂದಲೇ ಹೊರೆತು, ಹುಟ್ಟಿನಿಂದಲ್ಲಿ ಎಂದು ಪ್ರತಿಪಾದನೆ<br>➢ ಅರ್ಥಹೀನ ಪದ್ಧತಿಗಳು ಮತ್ತು ಪುರೋಹಿತಶಾಹಿಯ ಅಧಿಕಾರವನ್ನು ತಿರಸ್ಕಾರ<br>➢ ಬಹುಪತಿತ್ವ, ಬಾಲ್ಯವಿವಾಹ ತಡೆ, ಸ್ತ್ರೀ–ಪುರುಷ ಸಮಾನತೆ<br>➢ ಶುದ್ಧಿಚಳುವಳಿ, ಗೋ ರಕ್ಷಣಾ ಸಂಘ<br>➢ 'ಭಾರತೀಯರಿಗೇ ಭಾರತ' ಎಂಬ ಘೋಷಣೆ<br>➢ ಸತ್ಯರ್ಥಪ್ರಕಾಶ ಎಂಬ ಗ್ರಂಥ. | 3 |
| 28. | ಆರ್ಥಿಕ ಅಸಮಾನತೆಯನ್ನು ನಿವಾರಿಸಲು ನೀವು ಯಾವ ಕ್ರಮಗಳನ್ನು ಸೂಚಿಸುವಿರಿ.<br>➢ ಭಾರತ ಅಲಿಪ್ತ ನೀತಿಯನ್ನು ಜಗತ್ತಿನಲ್ಲಿ ಮುಂದುವರಿಸಿತು.<br>➢ ಯಾವುದೇ ಷರತ್ತುಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿಯನ್ನು ಭಾರತ ಪ್ರತಿಪಾದಿಸಿತು.<br>➢ ತನ್ಮೂಲಕ ಹಿಂದುಳಿದ ರಾಷ್ಟ್ರಗಳ ಆತ್ಮ ಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿತು.<br>➢ ಶ್ರೀಮಂತ ರಾಷ್ಟ್ರಗಳ ಬಂಡವಾಳವೂ ಕೂಡ ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಿಸಿತು<br>➢ ಎಲ್ಲಾ ರಾಷ್ಟ್ರಗಳ ಮಧ್ಯೆ ಆರ್ಥಿಕ ನ್ಯಾಯ ಮತ್ತು ಸಮಾನತೆಯನ್ನು ಪ್ರತಿಪಾದಿಸುತ್ತಿದೆ<br>➢ ಆಹಾರ, ಬಂಡವಾಳ, ತಾಂತ್ರಿಕತೆ, ಆರೋಗ್ಯ ಸಲಕರಣೆ, ಉನ್ನತ ವ್ಯಾಸಂಗದ ಅವಕಾಶಗಳು ಮುಂತಾದ ಕೊರತೆಗಳಿಂದ ಹೊರಬರುವುದು. | |
| 29. | ನಿರುದ್ಯೋಗ ಸಮಸ್ಯೆಗೆ ಪರಿಹಾರೋಪಾಯಗಳಾವುವು? ವಿವರಿಸಿ.<br>➢ ಜನಸಂಖ್ಯಾ ನಿಯಂತ್ರಣ ಕ್ರಮ<br>➢ ಗುಡಿ ಕೈಗಾರಿಕೆಗೆ ಪ್ರೋತ್ಸಾಹ<br>➢ ಕೃಷಿ ಅಭಿವೃದ್ಧಿ<br>➢ ಕೈಗಾರಿಕಾ ಅಭಿವೃದ್ಧಿ<br>➢ ಶೈಕ್ಷಣಿಕ ಸುಧಾರಣೆ<br>➢ ವೃತ್ತಿ ಪರ ಶಿಕ್ಷಣಕ್ಕೆ ಆದ್ಯತೆ<br>➢ ಪಂಚವಾರ್ಷಿಕ ಯೋಜನೆಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳ ಜಾರಿ<br>➢ ಮಾಹಿತಿ & ತಂತ್ರಜ್ಞಾನ ಕ್ಷೇತ್ರಗಳ ಅಭಿವೃದ್ಧಿ | 3 |

30. ಭತ್ತ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳನ್ನು ತಿಳಿಸಿ.

- ಭತ್ತವು ಭಾರತದ ಅತ್ಯಂತ ಪ್ರಮುಖ ಆಹಾರ ಬೆಳೆ.
- ಭತ್ತವು ಉಷ್ಣವಲಯದ ಬೆಳೆ. ಹೀಗಾಗಿ ಈ ಬೆಳೆಗೆ $25^0$ ಸೆ. ಅಧಿಕ ಉಷ್ಣಾಂಶ ಬೇಕು.
- 100 –200 ಸೆಂ.ಮೀ. ಅಧಿಕ ಮಳೆ ಅಗತ್ಯ.
- ಮೆಕ್ಕಲು, ಜೇಡಿ ಮತ್ತು ಜೇಡಿ ಮಿಶ್ರಿತ ಮರಳು ಮಣ್ಣು ಈ ಬೆಳೆಗೆ ಬಹು ಸೂಕ್ತ.
- ಭಾರತದ ಎಲ್ಲಾ ರಾಜ್ಯಗಳಲ್ಲೂ ಭತ್ತದ ಬೇಸಾಯ ಕಂಡು ಬರುತ್ತದೆ.
- ಪಶ್ಚಿಮ ಬಂಗಾಳವು ದೇಶದಲ್ಲೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ.
- ಇತರೆ ಭತ್ತ ಉತ್ಪಾದಿಸುವ ರಾಜ್ಯಗಳೆಂದರೆ ಆಂಧ್ರಪ್ರದೇಶ, ಉತ್ತರಪ್ರದೇಶ, ಪಂಜಾಬ್, ತಮಿಳುನಾಡು, ಒಡಿಶಾ ಮತ್ತು ಕರ್ನಾಟಕ **3**

**ಅಥವಾ**

ಅಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಅವಶ್ಯಕತೆಯನ್ನು ವಿವರಿಸಿ.

- ಭಾರತದಲ್ಲಿ ಅಪರಿಮಿತವಾದ ಅಸಂಪ್ರದಾಯಿಕ ಶಕ್ತಿ ಮೂಲಗಳು ದೊರೆಯುತ್ತವೆ
- ಅವು ನವೀಕರಿಸಬಲ್ಲ ಮೂಲಗಳು, ಮಾಲಿನ್ಯ ಮುಕ್ತವಾದವು ಮತ್ತು ಪರಿಸರ ಸ್ನೇಹಿಗಳಾಗಿದೆ.
- ಅವುಗಳನ್ನು ಸುಲಭವಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸರಬರಾಜು ಮಾಡಬಹುದು.
- ಅವುಗಳ ಉತ್ಪಾದನೆಯಿಂದ ದೇಶದ ವಿದ್ಯುತ್ ಅಭಾವವನ್ನು ನೀಗಿಸಬಹುದು.
- ಇತ್ತೀಚೆಗೆ ವಿದ್ಯುತ್ ಶಕ್ತಿ ಬಳಕೆ ದರವು ಹೆಚ್ಚಾಗಿದೆ.
- ಹೀಗಾಗಿ ತುರ್ತಾಗಿ ಪರ್ಯಾಯ ಶಕ್ತಿಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯಕತೆಯಿದೆ

31.

'ಕಪ್ಪು ಮಣ್ಣು ಒಣ ಬೇಸಾಯಕ್ಕೆ ಹೆಚ್ಚು ಸೂಕ್ತವಾಗಿದೆ'. ಈ ಹೇಳಿಕೆಯನ್ನು ಸಮರ್ಥಿಸಿ.

- ಅಗ್ನಿ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿ
- ಜೇಡಿ ಮಣ್ಣಿನ ಕಣಗಳು ಹೆಚ್ಚು
- ಒತ್ತೊತ್ತಾದ ಕಣಗಳು
- ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ
- ಸುಣ್ಣ ಮತ್ತು ಮೆಗ್ನೀಶಿಯಂ ಕಾರ್ಬೊನೇಟ್‌ಗಳು ಅಧಿಕ ಪ್ರಮಾಣದಲ್ಲಿವೆ
- ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆ ಕಾಳು, ದ್ರಾಕ್ಷಿ ಪ್ರಮುಖ ಬೆಳೆಗಳು **3**
- ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚು ಕಂಡುಬರುತ್ತದೆ

32. ಪಂಚವಾರ್ಷಿಕ ಯೋಜನೆಯ ಉದ್ದೇಶಗಳಾವುವು?

- ಉತ್ಪಾದನೆಯನ್ನು ಗರಿಷ್ಟ ಮಟ್ಟಕ್ಕೆ ಹೆಚ್ಚಿಸುವುದು
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು
- ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು

|  |  |  |
|---|---|---|
| | ➢ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದು<br>➢ ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು ಇತ್ಯಾದಿ<br><br>**ಅಥವಾ**<br><br>ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರೀಕರಣದ ಹಿನ್ನಲೆಯಲ್ಲಿ ವಿವರಿಸಿ.<br>➢ ಗ್ರಾಮದ ಪ್ರತಿಯೊಂದು ಅಭಿವೃದ್ಧಿ ಹಾಗೂ ಆಡಳಿತ ಅಧಿಕಾರವನ್ನು ಗ್ರಾಮದ ಜನರಿಗೆ ವಹಿಸಿಕೊಡುವುದು.<br>➢ ವಿಕೇಂದ್ರೀಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು<br>➢ ಗ್ರಾಮ & ಗ್ರಾಮದ ಜನರನ್ನು ಎಲ್ಲಾ ರೀತಿಯ ಶೋಷಣೆಗಳಿಂದ ತಪ್ಪಿಸುವುದು.<br>➢ ಗ್ರಾಮದ ಜನರ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುವುದು.<br>➢ ಸಹಾನುಭೂತಿ & ಸಹಕಾರದಂತಹ ಮಾನವೀಯ ಮೌಲ್ಯಗಳನ್ನು ಬೆಳೆಸುವುದು.<br>➢ ಗ್ರಾಮದ ಜನರ ಸ್ವಾತಂತ್ರ್ಯ–ಸಮಾನತೆ & ಘನತೆಯನ್ನು ಎತ್ತಿ ಹಿಡಿಯುವುದು. | 3 |
| 33. | ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವುವು?<br>➢ ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುವುದು<br>➢ ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.<br>➢ ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು<br>➢ ಚೆಕ್ಕು ಮತ್ತು ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.<br>➢ ಹುಂಡಿಗಳನ್ನು ಸೋಡಿ ಮಾಡುವುದು.<br>➢ ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.<br>➢ ವಿದೇಶಿ ವಿನಿಮಯದ ವ್ಯವಹಾರಗಳನ್ನು ನಿರ್ವಹಿಸುವುದು<br>➢ ಬೆಲೆಬಾಳುವ ವಸ್ತುಗಳನ್ನು ತಮ್ಮ ಸುಪರ್ದಿನಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು<br>➢ ಸರ್ಕಾರದ ಹಣಕಾಸಿನ ವ್ಯವಹಾರಗಳನ್ನು ನಿರ್ವಹಿಸುವುದು.<br>➢ ಸಾಲಪತ್ರ & ಜವಬ್ದಾರಿ ಪತ್ರಗಳನ್ನು ಕೊಡುವುದು. | 3 |
| | **ಅಥವಾ**<br><br>ಯಾರೇ ಒಬ್ಬ ಮನುಷ್ಯ ಸ್ವಉದ್ಯೋಗ ಉದ್ದಿಮೆಯನ್ನು ಸ್ಥಾಪಿಸಲು ಇರುವ ಅವಕಾಶಗಳಾವುವು?<br>➢ ಜಾಹಿರಾತು ಸೇವಾಸಂಸ್ಥೆಗಳು.<br>➢ ಮಾರುಕಟ್ಟೆ ಸಲಹಾ ಸಂಸ್ಥೆ.<br>➢ ಕೈಗಾರಿಕಾ ಸಲಹಾ ಸಂಸ್ಥೆ. | 3 |

| | | | |
|---|---|---|---|
| V.<br>34.<br><br><br><br><br><br><br><br><br><br><br><br><br><br>35. | ➢ ಛಾಯಾಪ್ರತಿ ತೆಗೆಯುವ ಕೇಂದ್ರಗಳು<br>➢ ಕೈಗಾರಿಕಾ ಸಂಶೋಧನಾಲಯಗಳು<br>➢ ಅಭಿವೃದ್ಧಿ ಪ್ರಯೋಗಾಲಯಗಳು.<br>➢ ಬ್ಯೂಟಿಪಾರ್ಲರ್‌ಗಳು.<br><br>**ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯಗಳಲ್ಲಿ/ಅಂಶಗಳಲ್ಲಿ ಉತ್ತರಿಸಿರಿ: 4×4=16**<br>ಕ್ವಿಟ್ ಇಂಡಿಯಾ ಚಳುವಳಿಯನ್ನು ಕುರಿತು ವಿಶ್ಲೇಷಿಸಿ.<br>➢ 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ಆರಂಭ<br>➢ ಕ್ರಿಪ್ಸ್ ಆಯೋಗವು ಕೆಲವು ಸಲಹೆಗಳನ್ನು ಭಾರತೀಯರು ಮುಂದಿಟ್ಟರು<br>➢ ಕಾಂಗ್ರೇಸ ಇದನ್ನು ಒಪ್ಪದೆ ಚಳುವಳಿಗೆ ಕರೆ ನೀಡಿದರು<br>➢ ಬ್ರೀಟಿಷರೇ ಭಾರತ ಬಿಟ್ಟು ತೊಲಗಿ ಈ ಚಳುವಳಿಯ ಆಶಯವಾಗಿತ್ತು<br>➢ ಗಾಂಧೀಜಿಯವರು ಮಾಡು ಇಲ್ಲವೇ ಮಡಿ ಕರೆ ನೀಡಿದರು<br>➢ ಬಹುತೇಕ ಕಾಂಗ್ರೇಸ್ ನಾಯಕರ ಬಂಧನವಾಯಿತು<br>➢ ಜಯಪ್ರಕಾಶ್ ನಾರಾಯಣ ಚಳುವಳಿಯನ್ನು ಮುಂದುವರಿಸಿದರು<br>➢ ದೇಶದ ಗಡಿಯಾಚೆಗೂ ಚಳುವಳಿಗಳು ಪ್ರಾರಂಭವಾದವು<br><br>**ಅಥವಾ**<br>ಬ್ರಿಟೀಷರ ಕಂದಾಯ ನೀತಿಗಳಿಂದ ಉಂಟಾದ ಪರಿಣಾಮಗಳಾವುವು?<br>➢ ರೈತರನ್ನು ಶೋಷಿಸುವ ಜಮೀನ್ದಾರಿ ವರ್ಗ ಸೃಷ್ಟಿಯಾಯಿತು<br>➢ ರೈತರು ಸಂಕಷ್ಟಕ್ಕೆ ಒಳಗಾದರು<br>➢ ಜಮೀನ್ದಾರರ ಶೋಷಣೆಯಿಂದ ರೈತರು ನಿರ್ಗತಿಕರಾದರು<br>➢ ಭೂಮಿ ಮಾರಾಟದ ವಸ್ತುವಾಯಿತು<br>➢ ಜಮೀನ್ದಾರರೂ ಕೂಡ ತಮ್ಮ ಜಮೀನನ್ನು ಪರಭಾರೆ ಮಾಡಿದರು<br>➢ ಕೃಷಿ ಕ್ಷೇತ್ರವು ವಾಣೀಜ್ಯೀಕರಣಗೊಂಡಿತು<br>➢ ಹಣದ ಲೇವಾದೇವಿಗಾರರು ಬಲಿಷ್ಠರಾಗತೊಡಗಿದರು.<br>➢ ಕೈಗಾರಿಕೀಕರಣದಿಂದ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.<br><br>1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆಡಳಿತಾತ್ಮಕ ಮತ್ತು ಸೈನಿಕ ಅಂಶಗಳು ಹೇಗೆ ಪ್ರೇರಕವಾದವು?<br><br>**ಆಡಳಿತಾತ್ಮಕ ಕಾರಣಗಳು**<br>➢ ಹೊಸ ನಾಗರಿಕ ಮತ್ತು ಅಪರಾದ ಕಾಯ್ದೆಗಳ ಜಾರಿ<br>➢ ಕಾನೂನಿನಲ್ಲಿ ಪಕ್ಷಪಾತ | 4 |


| | | | |
|---|---|---|---|
| | ➢ ಆಂಗ್ಲಭಾಷೆ ನ್ಯಾಯಾಲಯದ ಭಾಷೆಯಾಗಿದ್ದು<br>➢ ಇಂಗ್ಲೀಷರ ಪರವಾದ ತೀರ್ಪುಗಳು<br>➢ ಹೊಸ ಕಾನೂನಿನ ಆಶಯಗಳು ಜನರಿಗೆ ಅರ್ಥವಾಗಲಿಲ್ಲ<br><br>**<u>ಸೈನಿಕ ಕಾರಣಗಳು</u>**<br><br>➢ ಭಾರತೀಯ ಸೈನಿಕರ ಸ್ಥಿತಿ ಗಂಭೀರವಾಗಿತ್ತು<br>➢ ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು<br>➢ ಸ್ಥಾನಮಾನ, ವೇತನ, ಬಡ್ತಿಗಳಲ್ಲಿ ತಾರತಮ್ಯ<br>➢ ರಾಯಲ್ ಎನ್‌ಫೀಲ್ಡ್ ಬಂದೂಕುಗಳ ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬು ಸವರಿದ್ದಾರೆಂಬ ವದಂತಿ | |
| 36. | ವಿಶ್ವಸಂಸ್ಥೆಯ ಆಶ್ರಯದ ವಿವಿಧ ಸಂಘ ಸಂಸ್ಥೆಗಳನ್ನು ಪಟ್ಟಿ ಮಾಡಿರಿ.<br><br>➢ ಆಹಾರ ಮತ್ತು ಕೃಷಿ ಸಂಸ್ಥೆ<br>➢ ವಿಶ್ವ ಆರೋಗ್ಯ ಸಂಸ್ಥೆ<br>➢ ಯುನೆಸ್ಕೋ<br>➢ ಯುನಿಸೆಫ್(ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ)<br>➢ ಐ.ಎಂ.ಎಫ್.(ಅಂತರರಾಷ್ಟ್ರೀಯ ಹಣಕಾಸು ನಿಧಿ)<br>➢ ಐ.ಬಿ.ಆರ್.ಡಿ.(ವಿಶ್ವ ಬ್ಯಾಂಕ್)<br>➢ ಅಂತರರಾಷ್ಟ್ರೀಯ ಕಾರ್ಮಿಕ ಸಂಘ<br>➢ ವಿಶ್ವ ವ್ಯಾಪಾರ ಸಂಘಟನೆ | **4** |
| 37. | ಭೂಕಂಪಕ್ಕೆ ಕಾರಣಗಳು ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿಸಿ.<br><br>**<u>ಭೂಕಂಪಕ್ಕೆ ಕಾರಣಗಳು</u>**<br>➢ ಭೂಮಿಯ ಅಂತರಾಳದಲ್ಲಿರುವ ಶಿಲಾಫಲಕಗಳ ಚಲನೆ<br>➢ ನಗ್ನೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ<br>➢ ಅರಣ್ಯ ನಾಶ<br>➢ ಅಣೆಕಟ್ಟುಗಳ ನಿರ್ಮಾಣ<br>➢ ಗಣಿಗಾರಿಕೆ<br><br>**<u>ಮುನ್ನೆಚ್ಚರಿಕೆಯ ಕ್ರಮಗಳು</u>**<br><br>➢ ಭೂಕಂಪನ ವಲಯಗಳಲ್ಲಿ ಜನವಸತಿಗಳ ನಿರ್ಮಾಣ ನಿಷೇಧ<br>➢ ಭೂಕಂಪನ ನಿರೋಧಕ ಕಟ್ಟಡಗಳ ನಿರ್ಮಾಣ<br>➢ ಬಹುಮಹಡಿ ಕಟ್ಟಡ ನಿರ್ಮಾಣವನ್ನು ಕೈ ಬಿಡುವುದು. | **4** |

- ಬಾವಿಗಳ ಆಳ ಕೊರೆತವನ್ನು ನಿಷೇಧಿಸುವುದು.
- ಅಣೆಕಟ್ಟು ಮತ್ತು ಜಲಾಶಗಳ ನಿರ್ಮಾಣಕ್ಕೆ ನಿಷೇಧ
- ಅರಣ್ಯ ನಾಶ ಮತ್ತು ತ್ರೀವ ಸ್ವರೂಪದ ಗಣಿಗಾರಿಕಾ ಚಟುವಟಿಕೆಗಳನ್ನು ತಡೆಗಟ್ಟುವುದು.

**38.**

**ಭಾರತದ ನಕ್ಷೆ ಬರೆದು ಅದರಲ್ಲಿ ಕೆಳಗಿನ ಸ್ಥಳಗಳನ್ನು ಗುರುತಿಸಿರಿ.** **1+4=5**

a) ನರ್ಮದಾ ನದಿ b) ನವಮಂಗಳೂರು c) ದಿಗ್ಬಾಯ್ d) ಗಾಡ್ವಿನ್ ಆಸ್ಟಿನ್(ಕೆ2)




**5**

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರಜಿಲ್ಲೆ, ಬೆಂಗಳೂರು**

---

**2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 85ಕೆ– ಸಮಾಜ ವಿಜ್ಞಾನ**

**ಗರಿಷ್ಠ ಅಂಕಗಳು: 80** **ಸಮಯ : 03.15ಗಂಟೆಗಳು**

==========================================================

**ಅಭ್ಯಾಸ ಪತ್ರಿಕೆ–08**

*****************************************************************************

**ಮಾದರಿ ಉತ್ತರಗಳು**

| ಪ್ರ.ಸಂ. | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಈ ಕೆಳಗಿನ ಪ್ರತಿಯೊಂದು ಪ್ರಶ್ನೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಮತ್ತು ಅದರ ಕ್ರಮಾಕ್ಷರಗಳೊಂದಿಗೆ ಸಂಪೂರ್ಣ ಉತ್ತರವನ್ನು ಬರೆಯಿರಿ.** 8x1=8 | |
| **1.** | 1. ಮೈಸೂರು ರಾಜ್ಯ ಅಸ್ತಿತ್ವಕ್ಕೆ ಅಸ್ತಿತ್ವಕ್ಕೆ ಬಂದದ್ದು<br>A) ಜನವರಿ 26 1950 B) ನವೆಂಬರ್ 1 1956<br>C) ನವೆಂಬರ್ 1 1950 D) ನವೆಂಬರ್ 1 1973<br>ಉತ್ತರ: B) ನವೆಂಬರ್ 1 1956 | **1** |
| **2.** | 2. ಪಂಜಾಬನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಗೊಳಿಸಿದವರು<br>A) ಲಾರ್ಡ್ ಡಾಲ್‌ಹೌಸಿ B) ಲಾರ್ಡ್ ವೆಲ್ಲೆಸ್ಲಿ<br>C) ಲಾರ್ಡ್ ಕಾರ್ನ್‌ವಾಲೀಸ್ D) ಲಾರ್ಡ್ ವಾರನ್ ಹೇಸ್ಟಿಂಗ್ಸ್<br>ಉತ್ತರ: A) ಲಾರ್ಡ್ ಡಾಲ್‌ಹೌಸಿ | **1** |
| **3.** | 3. ವಿಶ್ವಸಂಸ್ಥೆಯ ಸಚಿವ ಸಂಪುಟ<br>A) ಸಾಮಾನ್ಯ ಸಭೆ B) ಭದ್ರತಾ ಸಮಿತಿ<br>C) ಸಚಿವಾಲಯ D) ದತ್ತಿ ಸಮಿತಿ<br>ಉತ್ತರ: B) ಭದ್ರತಾ ಸಮಿತಿ | **1** |
| **4.** | 4. ಅಸ್ಪೃಶ್ಯತೆಯನ್ನು ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದು ಹೇಳಿದವರು<br>A) ಡಾ.ಬಿ.ಆರ್. ಅಂಬೇಡ್ಕರ್ B) ಸ್ವಾಮಿ ವಿವೇಕಾನಂದ<br>C) ಜ್ಯೋತಿಭಾ ಫುಲೆ ಆ) ಮಹಾತ್ಮ ಗಾಂಧೀಜಿ<br>ಉತ್ತರ: D) ಮಹಾತ್ಮ ಗಾಂಧೀಜಿ | **1** |

| | | |
|---|---|---|
| **5.** | 5. ನರ್ಮದಾ ಆಂದೋಲನದ ನೇತೃತ್ವ ವಹಿಸಿದ್ದವರು<br>A) ಡಾ.ಶಿವರಾಮ ಕಾರಂತ B) ಮೇಧಾ ಪಾಟ್ಕರ್<br>C) ಸುಂದರ್ ಲಾಲ್ ಬಹುಗುಣ D) ಚಂಡಿ ಪ್ರಸಾದ್ ಭಟ್<br>ಉತ್ತರ: B) ಮೇಧಾ ಪಾಟ್ಕರ್ | **1** |
| **6.** | 6. ವ್ಯವಸಾಯದಲ್ಲಿ ದೊಡ್ಡ ಕ್ರಾಂತಿಯಾಗಲು ಪ್ರಮುಖ ಕಾರಣ<br>A) ಮಾಹಿತಿ ತಂತ್ರಜ್ಞಾನದ ಬೆಳವಣಿಗೆ B) ಉನ್ನತ ತಂತ್ರಜ್ಞಾನದ ಬೆಳವಣಿಗೆ<br>C) ಜೈವಿಕ ತಂತ್ರಜ್ಞಾನದ ಬೆಳವಣಿಗೆ D) ಕೈಗಾರಿಕಾ ತಂತ್ರಜ್ಞಾನದ ಬೆಳವಣಿಗೆ<br>ಉತ್ತರ: C) ಜೈವಿಕ ತಂತ್ರಜ್ಞಾನದ ಬೆಳವಣಿಗೆ | **1** |
| **7.** | 7. ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಸ್ತಿತ್ವಕ್ಕೆ ತಂದ ಸಂವಿಧಾನದ ತಿದ್ದುಪಡಿ<br>A) 73 B) 89<br>C) 45 D) 86<br>ಉತ್ತರ: A) 73 | **1** |
| **8.** | 8. ವ್ಯಾಪಾರಿಗಳು,ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳಿಗೆ ಸೂಕ್ತವಾದ ಬ್ಯಾಂಕ್ ಖಾತೆ<br>A) ಉಳಿತಾಯ ಖಾತೆ B) ಚಾಲ್ತಿ ಖಾತೆ<br>C) ಆವರ್ತ ಠೇವಣಿ ಖಾತೆ D) ನಿಶ್ಚಿತ ಠೇವಣಿ ಖಾತೆ<br>ಉತ್ತರ: B) ಚಾಲ್ತಿ ಖಾತೆ | **1** |
| **II.** | **II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** | |
| **9.** | 9. ಮೊದಲನೆಯ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೇನು?<br>ಉತ್ತರ:ಜುಲೈ 28ರಂದು ಆಸ್ಟ್ರೀಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್‌ನ ಹತ್ಯೆ | **1** |
| **10.** | 10. ಹೈದರಾಬಾದ್ ನಿಜಾಮನು ಭಾರತದ ಒಕ್ಕೂಟದೊಂದಿಗೆ ಸೇರಲು ಒಪ್ಪಲಿಲ್ಲ.ಏಕೆ?<br>ಉತ್ತರ: ಸ್ವತಂತ್ರವಾಗಿ ಉಳಿಯುವ ಉದ್ದೇಶದಿಂದ | **1** |
| **11.** | 11. 1966ರಲ್ಲಿ ತಾಷ್ಕೆಂಟ್‌ನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮದ್ಯ ಒಪ್ಪಂದಕ್ಕೆ ಸಹಕರಿಸಿದ ದೇಶ ಯಾವುದು?<br>ಉತ್ತರ: ರಷ್ಯಾ ದೇಶ | **1** |
| **12.** | 12. ಪೂರ್ವಗ್ರಹ ಎಂದರೇನು?<br>ಉತ್ತರ:ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆ. | **1** |

| | | |
|---|---|---|
| **13.** | 13. ಮಳೆಕೊಯ್ಲು ಎಂದರೇನು?<br>ಉತ್ತರ: ಮಳೆ ನೀರನ್ನು ಸಂಗ್ರಹಿಸಿ ಬಳಕೆ ಮಾಡುವುದು. | **1** |
| **14.** | 14. ಪೂರ್ವ ಕರಾವಳಿಗಿಂತ ಪಶ್ಚಿಮ ಕರಾವಳಿಯಲ್ಲಿ ಕಡಲಕೊರೆತ ಹೆಚ್ಚು. ಏಕೆ?<br>ಉತ್ತರ: ನೈಋತ್ಯ ಮಾನ್ಸೂನ್ ಮಾರುತಗಳು ಆರಂಭದಲ್ಲಿ ಅರಬ್ಬಿ ಸಮುದ್ರದಲ್ಲಿ ಅತಿ ಹೆಚ್ಚು ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂ ಪ್ರದೇಶವನ್ನು ಕಬಳಿಸುತ್ತವೆ. | **1** |
| **15.** | 15. ಭಾರತದ ಹಸಿರು ಕ್ರಾಂತಿಯ ಪಿತಾಮಹ ಯಾರು?<br>ಉತ್ತರ: ಡಾ.ಎಂ.ಎಸ್. ಸ್ವಾಮಿನಾಥನ್ | **1** |
| **16.** | 16.ಭಾರತೀಯ ರಿಸರ್ವ್‌ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕ್ ಎಂದು ಏಕೆ ಕರೆಯುತ್ತಾರೆ?<br>ಉತ್ತರ: ಭಾರತದಲ್ಲಿ ಬ್ಯಾಂಕುಗಳ ಎಲ್ಲ ಚಟುವಟಿಕೆಗಳು ರಿಸರ್ವ್‌ಬ್ಯಾಂಕಿನ ಹತೋಟಿಯಲ್ಲಿರುತ್ತವೆ. | **1** |
| **III.** | **III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** 8x2=16 | |
| **17.** | 17. ಶ್ರೀ ನಾರಾಯಣಗುರು ರವರ ಸುಧಾರಣೆಗಳನ್ನು ತಿಳಿಸಿ.<br>ಉತ್ತರ: ಶ್ರೀ ನಾರಾಯಣಗುರು ರವರ ಸುಧಾರಣೆಗಳೆಂದರೆ,<br>• ಧರ್ಮ ಪರಿಪಾಲನಾ ಯೋಗಂ ಮೂಲಕ ಸಾಮಾಜಿಕ ಪ್ರತಿರೋಧ ಚಳವಳಿಯ ಆರಂಭ<br>• ಮನುಷ್ಯ ಘನತೆಯಿಂದ ಬದುಕುವ ಸಮಾಜ ನಿರ್ಮಾಣ<br>• ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ದೇವರು ಮತ್ತು ಒಬ್ಬನೇ ದೇವರು ಎಂಬ ಆಶಯ<br>• ಶಿಕ್ಷಣದ ಮಾರ್ಗ<br>• ಪರ್ಯಾಯ ದೇವಾಲಯಗಳ ನಿರ್ಮಾಣ<br>• 1924ರಲ್ಲಿ ವೈಕಂ ಸತ್ಯಾಗ್ರಹವೆಂಬ ಶಿವ ದೇವಾಲಯ ಪ್ರವೇಶ ಚಳವಳಿ. | **1/2 x 4=2** |
| **18.** | 18.ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಎರಡನೇ ಮಹಾಯುದ್ಧದಲ್ಲಿ ಹೇಗೆ ಉಪಯೋಗಿಸಿ ಕೊಂಡಿತು?<br>• ಭಾರತೀಯ ಕೃಷಿ ವಸ್ತುಗಳು ಮತ್ತು ಕೈಗಾರಿಕಾ ಪದಾರ್ಥಗಳನ್ನು ಉಪಯೋಗಿಸಿಕೊಂಡಿತು.<br>• ಯುದ್ಧ ಸಾಮಗ್ರಿಗಳ ಉತ್ಪಾದನೆಗೆ ಅರ್ಡಿನೆನ್ಸ್ ಕಾರ್ಖಾನೆಗಳನ್ನು ಮೇಲ್ದರ್ಜೆಗೇರಿಸಿತು.<br>• ಹೊಸ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿತು. | **1/2 x 4=2**<br><br>**1/2 x 4=2** |

| | | |
|---|---|---|
| **19.** | 19. ಭಾರತದಲ್ಲಿ ಕಂಡು ಬರುವ ಮಣ್ಣಿನ ವಿಧಗಳನ್ನು ಹೆಸರಿಸಿ.<br>ಉತ್ತರ: ಭಾರತದಲ್ಲಿ ಕಂಡುಬರುವ ಮಣ್ಣಿನ ವಿಧಗಳೆಂದರೆ,<br>• ಮೆಕ್ಕಲು ಮಣ್ಣು<br>• ಕಪ್ಪುಮಣ್ಣು<br>• ಕೆಂಪುಮಣ್ಣು<br>• ಜಂಬಿಟ್ಟಿಗೆ(ಲ್ಯಾಟರೈಟ್)ಮಣ್ಣು<br>• ಮರುಭೂಮಿ ಮಣ್ಣು<br>• ಪರ್ವತ ಮಣ್ಣು | |
| **20.** | 20. ಭಾರತದ ವ್ಯವಸಾಯವು ಮಾನ್ಸೂನ್ ಮಾರುತಗಳೊಡನೆ ಆಡುವ ಜೂಜಾಟವಾಗಿದೆ. ಹೇಗೆ ?<br>ಉತ್ತರ:<br>• ಭಾರತದ ಜನತೆಯ ಪ್ರಧಾನ ಉದ್ಯೋಗ ವ್ಯವಸಾಯ<br>• ಮಾನ್ಸೂನ್ ಮಾರುತಗಳು ದೇಶದ ವ್ಯವಸಾಯವನ್ನು ನಿಯಂತ್ರಿಸುತ್ತವೆ<br>• ಮಳೆ ವಿಫಲವಾದರೆ ಬರಗಾಲ, ಹೆಚ್ಚಾದಾಗ ಪ್ರವಾಹ<br>• ಪ್ರಾಣಹಾನಿ ಮತ್ತು ಆಸ್ತಿಗಳಿಗೆ ಹಾನಿ | **1+1=2** |
| **21.** | 21. ಸುಗ್ಗಿ ಪೂರ್ವ ಮತ್ತು ಸುಗ್ಗಿ ನಂತರದ ತಂತ್ರಜ್ಞಾನಗಳ ನಡುವಿನ ವ್ಯತ್ಯಾಸಗಳೇನು?<br>ಉತ್ತರ:<br>**ಸುಗ್ಗಿ ಪೂರ್ವದ ತಂತ್ರಜ್ಞಾನ:** • ಕೃಷಿ ಉತ್ಪಾದನೆಯಲ್ಲಿ ಬಳಸಲಾದ ರಾಸಾಯನಿಕ ಗೊಬ್ಬರ,ಕ್ರಿಮಿನಾಶಕ ಬಳಕೆ,ನೀರಾವರಿ ಸೌಲಭ್ಯ ಮೊದಲಾದ ಸುಧಾರಿತ ತಂತ್ರಜ್ಞಾನ<br>**ಸುಗ್ಗಿ ನಂತರದ ತಂತ್ರಜ್ಞಾನ:** • ಕೃಷಿ ಉತ್ಪನ್ನಗಳ ಸಂಗ್ರಹಣೆ,ಸಂಸ್ಕರಣೆ, ಮತ್ತು ಮಾರಾಟದಲ್ಲಿ ತರಲಾದ ಸುಧಾರಿತ ತಂತ್ರಜ್ಞಾನ | **1/2 x 4=2** |
| **22** | 22. ಗ್ರಾಹಕರ ಹಕ್ಕುಗಳನ್ನು ಪಟ್ಟಿಮಾಡಿ.<br>ಉತ್ತರ:<br>• ಗ್ರಾಹಕರ ಜೀವನ ಮತ್ತು ಆಸಕ್ತಿಗೆ ಅಪಾಯಕಾರಿಯೆನಿಸುವ ಸರಕುಗಳ ವಿಕ್ರಯದ ವಿರುದ್ಧ ರಕ್ಷಣೆಯ ಹಕ್ಕು<br>• ಮಾಹಿತಿ ಪಡೆಯುವ ಹಕ್ಕು<br>• ವಸ್ತುಗಳ ಆಯ್ಕೆಯ ಹಕ್ಕು<br>• ವಸ್ತುಗಳ ಬಗ್ಗೆ ಆಲಿಸುವ ಹಕ್ಕು<br>• ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು | **1/2 x 4=2** |

| | | |
|---|---|---|
| | • ಗ್ರಾಹಕ ಶಿಕ್ಷಣದ ಹಕ್ಕು<br>• ಮೋಸದ ವಿರುದ್ಧದ ಹಕ್ಕು | |
| **23** | 23. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.<br>ಉತ್ತರ:<br>• ಸಾರ್ವತ್ರಿಕ ಮಾನವ ಹಕ್ಕುಗಳ ಪ್ರತಿಪಾದನೆ<br>• ಸಂವಿಧಾನದಲ್ಲಿ ಮೂಲಭೂತ ಹಕ್ಕಗಳ ನಮೂದು<br>• ವಿಶ್ವದಾದ್ಯಂತ ಮಾನವ ಹಕ್ಕುಗಳ ಸುರಕ್ಷತೆಗೆ ಸಮರ್ಥನೆ<br>• ಜನಾಂಗ ಹತ್ಯೆ ಹಾಗೂ ಎಲ್ಲಾ ವಿಧದ ಶೋಷಣೆ ಹಾಗೂ ದಬ್ಬಾಳಿಕೆಗೆ ವಿರೋಧ<br>• ವಿಶ್ವಸಂಸ್ಥೆ ಹಾಗೂ ಇತರ ಜಾಗತಿಕ ವೇದಿಕೆಗಳಲ್ಲಿ ಮಾನವ ಹಕ್ಕುಗಳ ಸಂರಕ್ಷಣೆಗೆ ಯತ್ನ<br>**ಅಥವಾ**<br>ಭಾರತ ಮತ್ತು ಚೀನಾ ಮಧ್ಯೆ ಬಾಂಧವ್ಯ ಹದಗೆಡಲು ಕಾರಣಗಳಾವುವು?<br>ಉತ್ತರ:<br>• ಭಾರತದ ಧೋರಣೆಯ ವಿರುದ್ಧ ಚೀನಾ ಟಿಬೇಟನ್ನು ವಶಪಡಿಸಿಕೊಂಡಿರುವುದು.<br>• 1962ರಲ್ಲಿ ಭಾರತದ ಮೇಲೆ ದಾಳಿ<br>• ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಪ್ರತಿಪಾದಿಸುತ್ತಿರುವುದು.<br>• ಮಾವೋವಾದಿಗಳಿಂದ ಭಾರತದಲ್ಲಿ ನಕ್ಸಲ್‌ವಾದದ ಪ್ರಸರಣೆ<br>• ಎರಡೂ ದೇಶಗಳ ಮಧ್ಯೆ ಗಡಿ ರೇಖೆಯು ನಿಖರವಾಗಿಲ್ಲದಿರುವುದು.<br>• ಅಣ್ವಸ್ತ್ರ ತಯಾರಿ ,ವಿದೇಶಿ ವ್ಯಾಪಾರದ ಸವಾಲು<br>• ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ | **1/2 x 4=2** |
| **24.** | 24. ಕರ್ನಾಟಕದಲ್ಲಿ ನಡೆದ ಅಪ್ಪಿಕೋ ಚಳವಳಿಯನ್ನು ವಿವರಿಸಿ.<br>ಉತ್ತರ:<br>• ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರಿಂದ ಆರಂಭ<br>• ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಮರಗಳನ್ನು ಅಪ್ಪಿಕೊಳ್ಳುವ ಮೂಲಕ ಪ್ರತಿಭಟನೆ<br>• ಮರಗಳ ಕಳ್ಳಸಾಗಾಣಿಕೆ ತಡೆ<br>• ಗಿಡಮರಗಳನ್ನು ಬೆಳೆಸುವುದು, ಪರಿಸರದ ಬಗ್ಗೆ ಸಾಮಾನ್ಯ ಜನರಲ್ಲಿ ಅರಿವು ಮೂಡಿಸುವುದು.<br>**ಅಥವಾ**<br>ವರದಕ್ಷಿಣೆಯ ದುಷ್ಪರಿಣಾಮಗಳನ್ನು ತಿಳಿಸಿ.<br>ಉತ್ತರ:<br>• ಸ್ತ್ರೀಯರ ಸ್ವಾಭಿಮಾನ,ಗೌರವ,ಸ್ಥಾನಮಾನಗಳನ್ನು ಕುಗ್ಗಿಸುವುದು. | **1/2 x 4=2** |

| | | |
|---|---|---|
| | • ಕೌಟುಂಬಿಕ ಕಲಹಕ್ಕೆ ಕಾರಣ<br>• ಸ್ತ್ರೀ ಪುರುಷರ ನಡುವೆ ಒಡಕುಂಟಾಗಲು ಕಾರಣ<br>• ಕೌಟುಂಬಿಕ ಸಂಬಂಧಗಳಿಗೆ ಹಾನಿ<br>• ಮೋಸದ ವಿವಾಹಗಳ ಹೆಚ್ಚಳ<br>• ಹೆಣ್ಣು ಭ್ರೂಣಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆ ಪ್ರಕರಣಗಳ ಹೆಚ್ಚಳ<br>• ವಿವಾಹ ವಿಚ್ಛೇದನ ಪ್ರಕರಣಗಳ ಹೆಚ್ಚಳ | 1/2 x 4=2 |
| **IV.**<br><br>**25.** | **IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.**<br>25. ಆರಂಭಿಕವಾಗಿ ಇಂಗ್ಲಿಷರು ಭಾರತದಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಹೇಗೆ ವಿಸ್ತರಿಸಿದರು ?<br>ಉತ್ತರ:<br>• ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ 1613ರಲ್ಲಿ ಔಪಚಾರಿಕವಾಗಿ ವ್ಯಾಪಾರವನ್ನು ಆರಂಭಿಸಿತು.<br>• ಜಹಾಂಗೀರನಿಂದ ಸೂರತ್‌ನಲ್ಲಿ ಮೊದಲ ದಾಸ್ತಾನು ಮಳಿಗೆ ತೆರೆಯಲು ಅನುಮತಿ<br>• 1617ರಲ್ಲಿ ಸರ್ ಥಾಮಸ್‌ರೋ ಜಹಾಂಗೀರನಿಂದ ಫ್ಯಾಕ್ಟರಿಗಳನ್ನು ಸ್ಥಾಪಿಸಲು ಅನುಮತಿ<br>• ಆಗ್ರಾ, ಅಹಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ಫ್ಯಾಕ್ಟರಿ ನಿರ್ಮಾಣ<br>• 1639ರಲ್ಲಿ ಚಂದ್ರಗಿರಿಯ ರಾಜನಿಂದ ಮದ್ರಾಸ್‌ನಲ್ಲಿ ಭೂಮಿಯನ್ನು ಪಡೆದು ಸೆಂಟ್ ಜಾರ್ಜ್ ಪೋರ್ಟ್ ನಿರ್ಮಾಣ<br>• ಇಂಗ್ಲೆಂಡಿನ ರಾಜ ಎರಡನೇ ಚಾರ್ಲ್ಸ್‌ನಿಂದ 1668ರಲ್ಲಿ ಬಾಂಬೆಯನ್ನು ಬಾಡಿಗೆಗೆ<br>• 1690ರಲ್ಲಿ ಬಂಗಾಳದ ರಾಜ್ಯಪಾಲನಿಂದ ಹೂಗ್ಲಿನದಿಯ ದಂಡೆಯ ಮೇಲೆ ಸುತನತಿ,ಕಲ್ಕತ್ತಾ ಮತ್ತು ಗೋವಿಂದಪುರ ಹಳ್ಳಿಗಳ ಖರೀದಿ<br>• ಪೋರ್ಟ್‌ವಿಲಿಯಂ ಕೋಟೆಯ ನಿರ್ಮಾಣ<br>• 17ನೇ ಶತಮಾನದ ಅಂತ್ಯದ ವೇಳೆಗೆ ಮದ್ರಾಸ್,ಬಾಂಬೆ ಮತ್ತು ಕಲ್ಲತ್ತಾಗಳನ್ನು ತಮ್ಮ ಪ್ರೆಸಿಡೆನ್ಸಿ ಕೇಂದ್ರಗಳನ್ನಾಗಿ ಮಾಡಿಕೊಂಡರು.<br>**ಅಥವಾ**<br>ಆಂಗ್ಲೋ ಮರಾಠ ಯುದ್ಧಗಳು ಬ್ರಿಟಿಷರ ಪ್ರಾಬಲ್ಯಕ್ಕೆ ಹೇಗೆ ಕಾರಣವಾದವು?<br>ಉತ್ತರ:<br>• ಮೊದಲನೆಯ ಆಂಗ್ಲೋ ಮರಾಠ ಯುದ್ಧದಲ್ಲಿ ಮರಾಠರಿಂದ ಅಹಮದಾಬಾದನ್ನು ವಶಪಡಿಸಿಕೊಂಡು ಮರಾಠರೊಂದಿಗೆ ಸಾಲ್‌ಬಾಯ್ ಒಪ್ಪಂದವನ್ನು ಮಾಡಿಕೊಂಡು ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು.<br>• ಎರಡನೆಯ ಆಂಗ್ಲೋ ಮರಾಠ ಯುದ್ಧದಲ್ಲಿ ಪೇಶ್ವೆಯೊಂದಿಗೆ ಬೆಸ್ಸಿನ್ ಒಪ್ಪಂದ ಮಾಡಿಕೊಂಡು ಸಹಾಯಕ ಸೈನ್ಯ ಪದ್ಧತಿಗೆ ಒಳಗಾಗುವಂತೆ ಮಾಡಿದರು. ಹಾಗೂ ಮರಾಠರನ್ನು ಸೋಲಿಸುವ ಮೂಲಕ ಪ್ರಬಲರಾದರು. | 1/2 x 6=3<br><br>1+1+1=3 |

| | | |
|---|---|---|
| | • ಮೂರನೆಯ ಆಂಗ್ಲೋ ಮರಾಠ ಯುದ್ಧದಲ್ಲಿ 1818ರಲ್ಲಿ ಪೇಶ್ವೆ ಎರಡನೇ ಬಾಜಿರಾಯನನ್ನು ಕೋರೇಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋಲಿಸಿ, ಪೇಶ್ವೆ ಹುದ್ದೆಯನ್ನು ರದ್ದುಗೊಳಿಸಿದರು.<br>• ಪೇಶ್ವೆಗೆ ವಿಶ್ರಾಂತಿ ವೇತನವನ್ನು ನೀಡಿ, ಶಿವಾಜಿಯ ವಂಶಸ್ಥ ಪ್ರತಾಪಸಿಂಹನನ್ನು ಸಣ್ಣ ರಾಜ್ಯ ಸತಾರಾದಲ್ಲಿ ಪ್ರತಿಷ್ಠಾಪಿಸಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡರು. | |
